
ದುಡಿವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ ಸಂಪುಟ 2 ಸಂಚಿಕೆ 01 ಜನವರಿ 04, 2009 ರೂ. 5/-



ದಾಳಿಕಾರಂಗೆ ಧರ್ಮವುಂಟೇ ಎನ್ನುವ 'ಅರ್ಥ'



ಶಾಂತಿಯ ತೋಟ

ರಕ್ಷಿಸುವ ಸಂಕಲ್ಪ

ಚುನಾವಣಾ ಅಕ್ರಮಗಳ ಆರ್ಭಟ



ಕ್ಯೂಬಾ ಕ್ರಾಂತಿಯ

ಸುವರ್ಣ ಸಂಭ್ರಮ

ಮುಂಬೈ ಭಯೋತ್ಪಾದಕ ದಾಳಿಗೆ ಯುದ್ಧ ಉತ್ತರವಲ್ಲ

ಭಾರತ-ಪಾಕ್ ಗಡಿಯಲ್ಲಿ ಯುದ್ಧ ಸನ್ನದ್ಧತೆಯಂತಹ ಚಟುವಟಿಕೆ ಕಾಣಬರುತ್ತಿದೆ. ಭಾರತದೊಳಗೆ ಮುಂಬೈ ಮೇಲಿನ ಭಯೋತ್ಪಾದಕ ದಾಳಿಗೆ ಯುದ್ಧವೇ ಪರಿಹಾರವೆನ್ನುತ್ತಾ ಯುದ್ಧೋನ್ಮಾದ ಸೃಷ್ಟಿಸುವ ಪ್ರಯತ್ನಗಳನ್ನು ನಡೆಸಲಾಗುತ್ತಿದೆ. ಖ್ಯಾತ ಪತ್ರಕರ್ತ ದಿ ಹಿಂದೂ ಪತ್ರಿಕೆಯ ಪ್ರಧಾನ ಸಂಪಾದಕರಾದ ಎನ್.ರಾಮ್, ಡಿ.7ರಂದುಬೆಂಗಳೂರಿನಲ್ಲಿ ನಡೆದ 'ಸಮುದಾಯ'ದ ರಾಜ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಈ ಒಟ್ಟು ವಿಷಯದ ಕುರಿತು ಮಂಡಿಸಿದ ವಿಚಾರವನ್ನು ಇಲ್ಲಿ ನೀಡಲಾಗಿದೆ.

ಮುಂಬಯಿ ಭಯೋತ್ಪಾದಕ ಧಾಳಿಗಳ ಹಿಂದಿನ ಶಕ್ತಿಗಳನ್ನು ಭಾರತಕ್ಕೆ ಹಸ್ತಾಂತರಿಸುವಂತೆ ಭಾರತವು ಪಾಕಿಸ್ತಾನದ ಮೇಲೆ ಅಂತರರಾಷ್ಟ್ರೀಯ ಒತ್ತಡ ಹೇರಬೇಕು. ಈ ನಿಟ್ಟಿನಲ್ಲಿ 1373 ನಿರ್ಣಯದ ಆಧಾರದಲ್ಲಿ ಭಾರತವು ವಿಷಯವನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಕೊಂಡೊಯ್ಯಬೇಕು.

ಸೆಪ್ಟೆಂಬರ್ 2001 ರಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಮಂಡಳಿಯು ಅಂಗೀಕರಿಸಿರುವ ನಿರ್ಣಯ 1373 ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಭಯೋತ್ಪಾದನೆಯನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಭಯೋತ್ಪಾದನಾ ವಿರೋಧಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಧಿಕಾರ ನೀಡುತ್ತದೆ.

ಪಾಕಿಸ್ತಾನದ ಮೇಲೆ ಮಿಲಿಟರಿದಾಳಿ ನಡೆಸುವುದು ಮುಂಬಯಿ ಭಯೋತ್ಪಾದಕ ದಾಳಿಗೆ ಉತ್ತರ ಅಲ್ಲ. ಇದು ಎರಡು ದೇಶಗಳ ನಡುವಿನ ಉದ್ರಿಕ್ತತೆಯನ್ನು ಉಲ್ಬಣಗೊಳಿಸುತ್ತದೆ ಮತ್ತು ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ.

ತನಿಖೆಗೆ ಸಹಕಾರ ನೀಡಬೇಕೆಂಬ ಭಾರತದ ಮನವಿಗೆ ಪಾಕಿಸ್ತಾನ ಸರ್ಕಾರವು ಆರಂಭದಲ್ಲಿ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿತ್ತು. ಆದರೆ ಪಾಕಿಸ್ತಾನದಲ್ಲಿ ಸರ್ವ ಪಕ್ಷಗಳ ಸಭೆ ನಡೆದ ನಂತರ ತನ್ನ ನಿಲುವು ಬದಲಾಯಿಸಿತು.

ಪಾಕಿಸ್ತಾನದಲ್ಲಿ ಚುನಾಯಿತ ಪ್ರಜಾಸತ್ತಾತ್ಮಕ ನಾಗರೀಕ ಸರ್ಕಾರವು ದುರ್ಬಲವಾಗಿದೆ. ಪಾಕಿಸ್ತಾನದ ಮಿಲಿಟರಿಯಿಂದ ನಿಯಂತ್ರಿಸಲ್ಪಡುವ ಐಎಸ್ಐ ಯು ಚುನಾಯಿತ ಅಧ್ಯಕ್ಷರಿಗೆ ನಾಮಮಾತ್ರಕ್ಕೆ ಉತ್ತರದಾಯಿತ್ವ ಹೊಂದಿದೆ. ಭಯೋತ್ಪಾದಕ ದಾಳಿಗೆ ಒಂದು ವಿವೇಕಯುತವಾದ ಮತ್ತು ಶಾಂತಿಯುತವಾದ ರೀತಿಯಲ್ಲಿ ಪ್ರತಿಕ್ರಿಯಿಸುವುದು ಭಾರತದ ಮುಂದಿರುವ ಒಂದು ಸವಾಲಾಗಿದೆ. ಒಂದು ಪ್ರಭಾವಶಾಲಿ ಸಾಧನವಾದ ನಿರ್ಣಯ 1373 ನ್ನು ಬಳಸಿ ಪ್ರಜಾಸತ್ತಾತ್ಮಕವಾಗಿ ಹಾಗೂ ಅಂತರರಾಷ್ಟ್ರೀಯ ವೇದಿಕೆಯನ್ನು ಒಪ್ಪಿಸುವ ಕೆಲಸ ಆಗಬೇಕಿದೆ.


ಎನ್.ರಾಮ್

ದುರದೃಷ್ಟವಶಾತ್ ದೇಶದ ಪ್ರಸ್ತುತ ನಾಯಕರಲ್ಲಿ ಇಂತಹ ನೀತಿಯ ಬಗ್ಗೆ ಮನಸಿಲ್ಲ. ಅವರಿಗೆ ಈ ವಿಚಾರದೊಂದಿಗೆ ಕಾಶ್ಮೀರದ ಪ್ರಶ್ನೆಯು ತಳುಕು ಹಾಕಿಕೊಳ್ಳಬಹುದೆಂಬ ಭಯ ಕಾಡುತ್ತಿದೆ.

'ಮತ್ಯಾರೋ ಕಾಶ್ಮೀರದ ಪ್ರಶ್ನೆಯನ್ನು ಎತ್ತುತ್ತಾರೆಂದು ಹೆದರುವಿರಾದರೆ, ಯುದ್ಧ ವನ್ನು ಆರಂಭಿ ಸುವ ಮುಂಚೆಯೇ ಸೋತಂತಾಗುತ್ತದೆ.

ಮುಂದಿನ ವಾರ ಗಳಲ್ಲಿ ಭಾರತದ ರಾಜತಾಂತ್ರಿಕ ಮತ್ತು ರಾಜಕೀಯ ಸಾಮರ್ಥ್ಯಕ್ಕೆ ಪರೀಕ್ಷೆಗಳು ಎದುರಾಗಲಿವೆ.


ಮುಂಬೈ ದಾಳಿಯ ನಂತರ ಭಾರತದ ಸಾಮಾನ್ಯ ಜನರು ಬಹುಬೇಗ ಆಘಾತದಿಂದ ಚೇತರಿಸಿಕೊಂಡು ಹೊರಬಂದರು.



ಆದರೆ ಮಾಧ್ಯಮಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳು ಹಾಗೂ ಎಲ್ಲ ರಾಜಕಾರಣಿಗಳೂ ಭ್ರಷ್ಟರು, ಅವರನ್ನು ಹೊಡೆದಟ್ಟಬೇಕೆಂಬ ಪ್ರತಿಗಾಮಿ ಪ್ರಚಾ... ಮಾಡಲಾಗುತ್ತಿದೆ. ಈ ವಿಚಾರದಲ್ಲಿ ಆಕ್ರೋಶ ಮತ... ಹತಾಶೆಯನ್ನು ಅರ್ಥ ಮಾಡಿಕೊಳ್ಳಬಹುದಾದರು... ಈ ಸನ್ನಿವೇಶವನ್ನು ನಿಬಾಯಿಸಿ ಅದರಿಂ... ಹೊರಬರಲು ನಮಗೆ ಮತ್ತಷ್ಟು ಉತ್ತಮ... ರಾಜಕೀಯ ಕೌಶಲ್ಯ ಅಗತ್ಯವಾಗಿದೆ.

ಭಾರತದ ಮುಂದಿರುವ ಎರಡನೆಯ ಗಂಭೀ... ಪ್ರಶ್ನೆ ಕೋಮುವಾದದ ವಿರುದ್ಧದ ಹೋರಾ... ಭಾರತದಲ್ಲಿಯು ಕೋಮುವಾದ ರಾ... ರಾಜಕಾರಣದ ಕೇಂದ್ರ ಸ್ಥಾನವನ... ಆವರಿಸಿಕೊಂಡುಬಿಟ್ಟಿದೆ.

ಎಲ್ಲರನ್ನೂ ಸಮಾನವಾಗಿ ನೋಡುವ ಮೂಲ... ತಮ್ಮ ಮನೆಯನ್ನು ಸರಿಯಾದ ರೀತಿಯ... ಇಟ್ಟುಕೊಳ್ಳಲಾಗದಿದ್ದಲ್ಲಿ ಭಯೋತ್ಪಾದನೆಯ ವಿರು... ಹೋರಾಟ ನಡೆಸುವುದು ಕೂಡ ಸಾಧ್ಯವಿಲ್ಲ.





ಸಂಪಾದಕೀಯ

ಹೊಸ ವರ್ಷದ ಹೊಸ್ತಿಲಲ್ಲಿ.....

ಪತ್ರಿಕೆಯ ಎಲ್ಲಾ ಓದುಗರಿಗೆ, ಪ್ರೋತ್ಸಾಹಿಸುವ ಹಿತೈಷಿ, ಬಳಗಕ್ಕೆ 2009ರ ಹಾರ್ದಿಕ ಶುಭಾಶಯಗಳು.


ಇನ್ನೇನು 2008ಕ್ಕೆ ವಿದಾಯ ಹೇಳುತ್ತಿದ್ದೇವೆ. ಹೊಸ ವರುಷವನ್ನು ಸ್ವಾಗತಿಸುತ್ತಿದ್ದೇವೆ. ನಿಜ, ಕ್ಷಣ ಕ್ಷಣವೂ ಹೊಸತೇ ಆಗಿರುವಾಗ, ಹೊಸತು ಮೈಗೂಡುತ್ತಿರುವಾಗ ಕ್ಯಾಲೆಂಡರ್‌ನ ಒಂದು ಪುಟ ತಿರುವಿ ಹಾಕುತ್ತಿದ್ದೇವೆ ಅಷ್ಟೇ ಎನ್ನುವುದು ಸಹಜವೇ. ಆದರೆ ಒಂದು ಕಾಲ ಮಿತಿಯ ರೇಖೆ ಹಾಕಿ, ಕ್ಷಣ ಹೊತ್ತು ನಿಂತು ನಡೆದು ಬಂದ ಹಾದಿಯ ಅವಲೋಕಿಸಿದರೆ, ವಿಶ್ಲೇಷಿಸಿ ವಿಮರ್ಶಿಸಿದರೆ ನಾಳಿನ ಬಾಳಿಗೆ ಅದು ಅನುಭವದ ಬುತ್ತಿ ಆದೀತು. ಮುಂದಡಿ ಇಕ್ಕುವಾಗ ಹಾದಿ ಸಿಕ್ಕೀತು.

ಈ ಹೊತ್ತಿನಲ್ಲಿ ಮತ್ತೆ 50 ಸಾವಿರಕ್ಕೂ ಅಧಿಕ ಉದ್ಯೋಗಗಳು(ಐಟಿ-ಬಿಟಿ) ಕಡಿತಗೊಂಡು ದುಡಿವ ಉದ್ಯೋಗಿಗಳು ಬೀದಿಗೆ ಬೀಳಲಿದ್ದಾರೆ ಎಂಬ ಸುದ್ದಿಗಳು, ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿ ನಡೆಯುವ ಆಚರಣೆಗೆ ಮಂಕು ತಂದಿದೆ ಎಂದು ಹೇಳಲಾಗಿದೆ. ನಿಜ ಆದಾಯದ ಮೂಲಗಳೇ ಬತ್ತಿಹೋಗಿ, ಕೆಲಸವೂ ಇಲ್ಲದೇ ಇರುವಾಗ ತತ್ತರ ಒಂದು ಧಾರುಣವೇ. ಇದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮ. ಅಮೇರಿಕಾದ ಹಿರಿಯಣ್ಣನಿಗೆ ನೆಗಡಿಯಾದರೆ ಅದರ ಹಿಂಬಾಲಕರಿಗೆ, ಇತರೆ ದೇಶಗಳಿಗೂ ರೋಗ ಹಿಡಿಯುವುದು. ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣ, ಈ ಹೊಡೆತಕ್ಕೆ ಕರ್ನಾಟಕದಲ್ಲಿಯೇ ರಫ್ತು ಆಧಾರಿತ ಕೇವಲ ಜವಳಿ ಉದ್ಯಮದಲ್ಲೇ 12 ಲಕ್ಷ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಬೀದಿ ವಾಸ್ತವದಲ್ಲಿಯೇ ಬೀದಿ ಪಾಲಾಗಿದ್ದಾರೆ. ಇಂತಹ ಘೋರ ಪರಿಣಾಮ ಇನ್ನೂ ಹಲವು ರಂಗಗಳ ಮೇಲೂ, ಸೇವಾವಲಯ, ವ್ಯಾಪಾರ, ಕೃಷಿ, ಕೈಗಾರಿಕೆ ಹೀಗೆ ಜಾಗತಿಕ ಬಿಕ್ಕಟ್ಟಿನ ಪರಿಣಾಮ ಸುನಾಮಿಯಂತೆ, ಭಯಾನಕ ಸಾಂಕ್ರಾಮಿಕ ರೋಗದಂತೆ ವಿವಿಧ ಕ್ಷೇತ್ರಗಳನ್ನು ಆವರಿಸುತ್ತಿದೆ. ಜನರನ್ನು ರಕ್ಷಿಸುವ ಬಗೆ ಹೇಗೆ? ಎಂಬ ದಿಕ್ಕಿನಲ್ಲಿ ಚಿಂತನೆ ಕ್ರಮಗಳು ಅತ್ಯಗತ್ಯ

ಆದರೆ ನಮ್ಮ ಸರ್ಕಾರಗಳು, ಅದು-ಕೇಂದ್ರವೇ ಆಗಲೀ, ರಾಜ್ಯದ ಸರ್ಕಾರವೇ ಆಗಲಿ ಈ ಹೊಸ ಬಿಕ್ಕಟ್ಟಿನ ದಾಳಿ ತಡೆಯಲು ಅಗತ್ಯ ಕ್ರಮಗಳನ್ನೇ ರೂಪಿಸಿಲ್ಲ. ಎಲ್ಲವೂ ಸಂತಸ ಎಂದೇ ಪೋಜು ನೀಡಲಾಗುತ್ತಿದೆ. ಯಡಿಯೂರಪ್ಪನವರಂತೂ ಅಭಿವೃದ್ಧಿಯ ಹಾಲು-ಜೇನಿನ ಹೊಳೆಯು ಹರಿಯುತ್ತಿರುವುದರ ಭ್ರಮೆಯಲ್ಲೇ ಇದ್ದಾರೆ ಇರಿಸುತ್ತಿದ್ದಾರೆ. ಬೇಜವಾಬ್ದಾರಿಯ ಪರಿಮಾವಧಿ ಎಂದರೆ ಇದೇನೆ! ಜನರನ್ನು ರಕ್ಷಿಸುವುದರತ್ತ ತೀವ್ರ ಕ್ರಮಗಳು ಅಗತ್ಯವಿದೆ. ಇದರೊಂದಿಗೆ ಹಲವು ವರುಷಗಳ ನೀತಿಗಳ ಫಲ ಅದರ ಘೋರ ಪರಿಣಾಮಗಳು ಮುಂದುವರಿದಿದೆ. ಉದಾರೀಕರಣ, ಖಾಸಗೀಕರಣದ ನೀತಿಗಳ ಜಾರಿ ಅಡೆ-ತಡೆಯಿಲ್ಲದೇ ತೀವ್ರಗೊಂಡಿವೆ. ಕೃಷಿ ಬಿಕ್ಕಟ್ಟು ಇನ್ನೂ ತೀವ್ರವಾಗಿದೆ. ರೈತರ ಆತ್ಮಹತ್ಯೆಗಳು ನಿತ್ಯದ ಮಾತಾಗಿದೆ. ರಾಜ್ಯವೊಂದರಲ್ಲೇ ಕೇವಲ ಆರು ತಿಂಗಳಲ್ಲಿ ನಿರಂತರ ಆತ್ಮಹತ್ಯೆಗಳಾಗಿವೆ. ಇವು ವಾಸ್ತವದಲ್ಲಿ ನೀತಿಗಳಿಂದಾದ ಹತ್ಯೆಗಳೇ, ಇಷ್ಟಾದರೂ ಸರ್ಕಾರಕ್ಕೆ ಸರ್ಕಾರವೇ ಇಲ್ಲ. ತಡೆಯುವ ಏನೆಂದೂ ಕ್ರಮಗಳಿಲ್ಲ. ಹಾಗೆಯೇ ಕೃಷಿ ಚಟುವಟಿಕೆಗೆ ಏನೊಂದು ಕ್ರಮಗಳಿಲ್ಲ. ಹಾಗೆಯೇ ಕೃಷಿ ಚಟುವಟಿಕೆಗೆ ಹೊಂದಿಕೊಂಡಂತೆ ಇತರೆ ದುಡಿವ ವರ್ಗ, ಕೃಷಿ ಕೂಲಿಕಾರರ ಸ್ಥಿತಿಯೂ ಧಾರುಣವೇ. ಒಂದೆಡೆ ನೀತಿಗಳ ಧಾಳಿ ಇನ್ನೊಂದೆಡೆ ಬರ ನೆರೆ ಹಾವಳಿಯ ಹಾನಿ, ದಿನದ ಒಂದುಹೊತ್ತಿನ ಗಂಜಿಗೂ ತತ್ವಾರ! ಈ ಸ್ಥಿತಿಗೆ ಒಂದು ಸಣ್ಣದಾದರೂ ಪರಿಹಾರ ನೀಡಬಹುದಾದ ಕೇಂದ್ರದ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'ಯ ಅನುಷ್ಠಾನಕ್ಕೆ ಎಲ್ಲಿಲ್ಲದ ನಿರ್ಲಕ್ಷ್ಯ. ಬಂದ ನೂರಾರು ಕೋಟ್ಯಾಂತರ ರೂಪಾಯಿಗಳ ಹಣ ದುಡಿಯುವ ಜನತೆಗೆ ದಕ್ಕದೇ ವಾಪಸು ಕಳಿಸುವ ನೀಚತನವನ್ನು ರಾಜ್ಯ ಸರ್ಕಾರ ಮಾಡಿದೆ. ದುಡಿಯುವ ಜನತೆಗಳಿಗೆ ಮಣ್ಣಿನ ಮಕ್ಕಳಿಗೆ ಮಾಡಿದ ದ್ರೋಹವಲ್ಲವೇ?ರೇಷನ್ ಕಾರ್ಡ್‌ಸಿಗದೇ ವಂಚಿಸುತ್ತಿಲ್ಲವೇ? ಗುಡಿ-ಗುಂಡಾರ, ಮಠ-ಮಾನ್ಯ, ಸುತ್ತುವ ಮುಖ್ಯಮಂತ್ರಿ ಗ್ರಾಮೀಣ ಪ್ರದೇಶಗಳಲ್ಲಿ ಒಂದೆರಡು ದಿನ ಸುತ್ತಿದ್ದರೂ ಈ ಸ್ಥಿತಿ ಅರ್ಥವಾಗಬಹುದಿತ್ತು. ಹೃದಯದ ಬಾಗಿಲು ಮುಚ್ಚಿ ಮಾತಿನ ಮಂಟಪದಲ್ಲಿ ಕಾಲ ತಳ್ಳುವವರಿಗೆ ಇದು ಬೇಕಾಗಿಲ್ಲ. ಅದರಂತೆ ರೈತರಿಗೆ ಸಾಲದ ಬಾಧೆ, ಹೊಸ ಸಾಲವಿಲ್ಲ, ಫಸಲಿಗೆ ಲಾಭದಾಯಕ ಬೆಲೆಯಿಲ್ಲ. ಇದು ಈ ವರ್ಷದಲ್ಲಿಯೂ ಕಂಡ ಸಂಕಟಗಳ ಸರಮಾಲೆ! ಕೈಗಾರಿಕಾ ಕ್ಷೇತ್ರವೂ ಹಾಗೆಯೇ. ಅಭಿವೃದ್ಧಿಯ ಬರೀ ಮಾತಿನ ಮಹಾಪೂರ ಆದರೆ ಒಂದು ಹೊಸ ಕೈಗಾರಿಕೆಗಳು ಆರಂಭಗೊಳ್ಳಲಿಲ್ಲ. ಉದ್ಯೋಗ ಸೃಷ್ಟಿಯಾಗಲಿಲ್ಲ. ಕಾರ್ಮಿಕರಿಗೆ

ಪುಟ 6 ಕ್ಕೆ

ಅಕ್ರಮಗಳ ಆರ್ಭಟ



ಎಸ್.ವೈ.ಗುರುಶಾಂತ್

ಅಧಿಕಾರವನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂಬ ಹವಣಿಕೆಯಿಂದ ಬಿಜೆಪಿಯು ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿದೆ, ಆಡಳಿತ ಯಂತ್ರವನ್ನು ಎಗ್ಗಿಲ್ಲದೆ ದುರುಪಯೋಗ ಮಾಡಿದೆ. ಹಲವು ಅಕ್ರಮಗಳನ್ನು ಎಸಗಿ ಬೀಗುವ ಭಂಡತನ ತೋರಿದೆ. ಕಾಂಗ್ರೆಸ್ ನಂತಹ ಪಕ್ಷವಾದರೂ ಚುನಾವಣೆಯ ಪ್ರಶ್ನೆಗಳನ್ನು ಎತ್ತದಿರುವುದು ರಾಜಕೀಯ ಪ್ರಶ್ನೆಗಳನ್ನು ಮರೆಮಾಚುವಲ್ಲಿ ತಾನೂ ಕಡಿಮೆಯಿಲ್ಲ ಎಂದಿದೆ.

ಪತ್ರಿಕೆ ಮುದ್ರಣಕ್ಕೆ ಅಣಿಯಾಗುತ್ತಿರುವಂತೆ ರಾಜ್ಯದ ಎಂಟು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಮತದಾನದ ಪ್ರಕ್ರಿಯೆಯೂ ಮುಗಿದಿದೆ. ಪ್ರಚಾರದ ಅಬ್ಬರ, ಮತದಾರನ ಸೆಳೆಯುವ ಹಲವು ಆಮಿಷಗಳ ಭರಾಟೆಗಳು ಸ್ಥಬ್ದವಾಗುತ್ತಿದ್ದು ಮತದಾರನ ಅಭಿಮತವು ಮತದಾನ ಯಂತ್ರದೊಳಗೆ ರಹಸ್ಯವಾಗಿ ಕುಳಿತಿದೆ. ಅದು ಬಹಿರಂಗಗೊಳ್ಳುವುದೇ ಡಿಸೆಂಬರ್ 30 ರಂದು ಅಲ್ಲಿಯವರೆಗೂ ಕುತೂಹಲ ಊಹೆಗಳ ಮಹಾಪೂರ.

ಈ ಚುನಾವಣೆಯಲ್ಲಿ ಮುಖ್ಯವಾಗಿ ಏಳು ಕ್ಷೇತ್ರಗಳ ಚುನಾವಣೆ ಸಹಜವಾಗಿ ಬಂದದಲ್ಲ, ಅದನ್ನು ಹೇರಿದ್ದು ಬಿಜೆಪಿ. ತನ್ನ ಸ್ವಂತ ಶಾಸಕರ ಬಲ ಹೆಚ್ಚಿಸಿಕೊಳ್ಳುವ ಹುನ್ನಾರದಲ್ಲಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಅನೈತಿಕ ಅನೇಕ ಮಾರ್ಗಗಳನ್ನು ಹಿಡಿದುದರ ಫಲ ಎಂಬುದು ಎಲ್ಲರಿಗೂ ತಿಳಿದ ವಿಷಯುವೇ ಆಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಜನತೆ ಪೂರ್ಣ ಬಹುಮತದ ಬಲ ನೀಡದೇ ಇದ್ದಂತಹ ಸ್ಥಿತಿಯಲ್ಲಿ 'ಆಮಿಷಗಳ ಬಲೆಗೆ ಪಕ್ಷೇತರ ಶಾಸಕರನ್ನು ಸೆಳೆದು ಸರ್ಕಾರ ರಚಿಸಿದ ಯಡಿಯೂರಪ್ಪನವರು ಈ ಪಕ್ಷೇತರರ ಮೇಲೆ ತಮಗೆ ಭಾರೀ ವಿಶ್ವಾಸ ಎಂದು ಹೇಳಿಕೊಂಡು ಓಡಾಡುತ್ತಿದ್ದರೂ ಯಾವಾಗಲಾದರೂ ಕೈಕೊಟ್ಟಾರೆಂಬ ಅನುಮಾನವಿದ್ದೇ ಇತ್ತು. ಹೀಗಾಗಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳ ಶಾಸಕರನ್ನು ಸೆಳೆದಿದ್ದು, ಈ ಚುನಾವಣೆ ಹೇರಿದ್ದು, ಈಗಲೂ ಮತದಾನದ ದಿನ ಹತ್ತಿರವಾಗುತ್ತಿರುವಾಗ ಪಕ್ಷೇತರರನ್ನು ಕೈಬಿಡುವುದಿಲ್ಲ ಎಂಬ ಭರವಸೆ ನೀಡಿದರೂ ಈಗ ಸೆಳೆಯಲಾಗಿರುವ ಶಾಸಕರು ಒಂದು ವೇಳೆ ಗೆದ್ದರೆ ಮಂತ್ರಿ ಪದವಿ ನೀಡಲು, ಪಕ್ಷೇತರರನ್ನು ಬಲಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಹಲವು ಹೊಸ ರಾಜಕೀಯ ವಿದ್ಯಮಾನಗಳ ಬೆಳವಣಿಗೆಗೆ ಕಾರಣವಾಗಲೂಬಹುದು.

ಇದೇ ಅಭಿಪ್ರಾಯ, ಆತಂಕವನ್ನು ವಿರೋಧ ಪಕ್ಷಗಳು, ಆಡಳಿತ ಪಕ್ಷವೂ ಇಟ್ಟುಕೊಂಡಿದೆ. ಒಂದು ವೇಳೆ ಎಂಟು ಕ್ಷೇತ್ರಗಳಲ್ಲಿ ಕನಿಷ್ಟ ಮೂರು ಸ್ಥಾನಗಳನ್ನು ಬಿಜೆಪಿ ಗೆಲ್ಲದೇ ಹೋದರೆ ಅದಕ್ಕೆ ಬೇಕಿರುವ ಒಟ್ಟು 116 ಸ್ಥಾನಗಳನ್ನು ತಲುಪದೇ ಅತಂತ್ರವೇ ಮುಂದುವರಿಯಲಿದೆ. ಎಂಟರಲ್ಲಿಯೂ ಬಿಜೆಪಿ ಸೋತರೆ ಇದರ ಪರಿಣಾಮ ಬಿಜೆಪಿಯೊಳಗೆ ಸರ್ಕಾರದೊಳಗೆ ತಿಕ್ಕಾಟವು ಹೆಚ್ಚಾಗಿ ಈ ಎಲ್ಲಾ ನಾಯಕರೂ ಹೇಳುವಂತೆ 'ರಾಜಕೀಯ ಧೃವೀಕರಣ' ಸಂಭವಿಸೀತು.

ಆದ್ದರಿಂದಲೇ 'ಹೇಗಾದರೂ' ಚುನಾವಣೆ ಗೆಲ್ಲಲು ನೀತಿ ನಿಯಮಗಳನ್ನು ಉಲ್ಲಂಘಿಸುವ ಹಣ, ಹೆಂಡ ಮತ್ತು ಆಮಿಷಗಳನ್ನು ಒಡ್ಡುವ ಹತಾಶೆಯ ಯತ್ನಗಳನ್ನು ನಡೆಸಿರುವುದು ರಾಜ್ಯದಲ್ಲಿ ಯಾವುದೇ ಒಂದು ಕ್ಷೇತ್ರದಲ್ಲಿ ಚುನಾವಣೆಯೆಂದರೆ ಕೋಟ್ಯಾಂತರ ಹಣವಿದ್ದವರಿಗೆ ಮಾತ್ರ ಎನ್ನುವಂತಹ ಸ್ಥಿತಿಯನ್ನು ಬಹುತೇಕ ಎಲ್ಲಾ ಬಲಪಂಥೀಯ ಪಕ್ಷಗಳು ಸೃಷ್ಟಿಸಿವೆ. ಮತದಾರರನ್ನು ಅಪಹರಿಸುವ ಅಕ್ರಮದಲ್ಲಿ ಬಿಜೆಪಿಯನ್ನು ಸರಿಗಟ್ಟುವವರು ಯಾರೂ ಇಲ್ಲ ಎಂಬುದು ಪ್ರತೀ ಚುನಾವಣೆಯಲ್ಲಿಯೂ ಕಾಣುತ್ತದೆ. ಆದ್ದರಿಂದ ಅಕ್ರಮ ಹಣವಂತರೇ 'ನೀತಿವಂತ' ಪಕ್ಷದ ಅಭ್ಯರ್ಥಿಗಳು. ಇದು ರಾಜಕೀಯ ತಲುಪಿರುವ ಅದಃಪತನದ ಹಂತ. ಮುಖ್ಯವಾಗಿ ತಮ್ಮ ಕೆಲಸ ಕಾರ್ಯಕ್ರಮ ಮುಂದೆಯೂ ಜನತೆಗಾಗಿ ಶ್ರಮಿಸುವ ಬದ್ಧತೆ ಇಲ್ಲದೇ, ಜನರ ಮನಸ್ಸನ್ನು ಕಾರ್ಯಕ್ರಮಗಳಿಂದ ಗೆಲ್ಲಲಾಗದೇ ಸೋತಿರುವ ಪಕ್ಷಗಳು ಮತ ಪಡೆಯಲು ಅಕ್ರಮದ ಹಾದಿ ಹಿಡಿಯುತ್ತಿವೆ. ಇದು ಈ ಪಕ್ಷಗಳ ದಿವಾಳಿತನದ ಸೂಚಕವೂ ಆಗಿದೆ.

ಈ ಚುನಾವಣೆಯಲ್ಲಂತೂ ಚುನಾವಣಾ ನೀತಿಸಂಹಿತೆಯ ಉಲ್ಲಂಘನೆ, ಭಾರೀ ಅಕ್ರಮಗಳ ದೂರುಗಳು ಕೇಳಿಬಂದವು. ಮುಂಚೂಣಿಯಲ್ಲಿರುವುದು ಆಡಳಿತರೂಢ ಬಿಜೆಪಿಯೇ. ಸ್ವತಃ ಮುಖ್ಯಮಂತ್ರಿಗಳೇ ನೀತಿಸಂಹಿತೆಯನ್ನು ಉಲ್ಲಂಘಿಸಿ ಟೀಕೆಗೆ ಒಳಗಾದರೂ (ಅಸಂಖ್ಯಾತ ವಾಹನಗಳ ಬಳಕೆ, ಭರವಸೆಗಳು..) ಅದರಿಂದ ಕೊಂಚವೂ ಕಲಿಯಲಿಲ್ಲ. ಇಂತಹ ಉಲ್ಲಂಘನೆಯು ತಮ್ಮ ಜನ್ಮಸಿದ್ಧ ಹಕ್ಕು ಎಂದೇ ಮುಖ್ಯಮಂತ್ರಿಗಳು ವರ್ತಿಸುತ್ತಲೇ ಬಂದರು. ಮಾತ್ರವಲ್ಲ ಹಣ ಹಂಚಿಕೆ, ಮದ್ಯ ವಿತರಣೆ, ಸೀರೆ, ಮೊಬೈಲ್, ಟಿ.ವಿ., ಬಂಗಾರ ನೀಡಿಕೆಗಳು ಎಗ್ಗಿಲ್ಲದೇ ನಡೆದವು. ಜಾತಿಗಳ ಓಲೈಕೆ ಸಾಗಿತು. ಇದೆಲ್ಲವನ್ನು ಸರ್ಕಾರದಲ್ಲಿರುವ ಅಧಿಕಾರದ



ದೊಡ್ಡಬಳ್ಳಾಪುರದಲ್ಲಿ ವಶಪಡಿಸಿಕೊಳ್ಳಲಾದ ಮದ್ಯದ ಬಾಟಲ್‌ಗಳು

ಬಲವನ್ನು ಆಡಳಿತ ಯಂತ್ರವನ್ನು ಯಾವುದೇ ಹಿಂಜರಿಕೆಯಿಲ್ಲದೆ ಬಿಜೆಪಿ ಬಳಸಿತು. ಇದಕ್ಕಾಗಿಯೇ ಚುನಾವಣೆ ಘೋಷಣೆಯಾಗುವ ಮೊದಲೇ ಆಯಕಟ್ಟಿನ ಸ್ಥಾನಗಳಿಗೆ ತಮಗೆ ನಿಷ್ಠ ಸೇವಕರಾಗಿರುವವರನ್ನೇ ವರ್ಗಾಯಿಸಲಾಯಿತು. ಆದ್ದರಿಂದಲೇ ಪ್ರತಿ ಕ್ಷೇತ್ರದಲ್ಲಿಯೂ ಪಕ್ಷಪಾತದ ದೂರುಗಳು ವಿಪರೀತವಾಗಿ ಕೇಳಿಬಂದವು. ಕೆಲವೆಡೆಯಂತೂ ಜನರೇ ಅಂತಹ ಅಧಿಕಾರಿಗಳನ್ನು ಛಳಿಸಿದ ಹಂತಕ್ಕೆ ತಲುಪಿತು.

ಇಂತಹ ನಗ್ನ ಪಕ್ಷಪಾತವನ್ನು ತೋರಿದ ತುಮಕೂರಿನ ಜಿಲ್ಲಾಧಿಕಾರಿ ಆಯೋಗದಿಂದ ಛೀಮಾರಿ ಹಾಕಿಸಿಕೊಂಡರೆ, ಅರಭಾವಿ ಕ್ಷೇತ್ರದಲ್ಲಿ ಮೂಡಲಗಿಯ ಸಬ್ ಇನ್ಸ್‌ಪೆಕ್ಟರ್‌ನನ್ನು

ಪುಟ 10ಕ್ಕೆ

ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರದ ಮರು ಚುನಾವಣೆ


ಆರ್.ಎಲ್.ಜಾಲಪ್ಪ

'ಆಪರೇಷನ್ ಕಮಲ'ಕ್ಕೆ ಬಲಿಯಾದವರಲ್ಲಿ ಈ ಕ್ಷೇತ್ರದ ಕಾಂಗ್ರೆಸ್ ಶಾಸಕ ಮತ್ತು ರಾಜ್ಯದ ಹಿರಿಯ ರಾಜಕಾರಣಿ ಆರ್.ಎಲ್. ಜಾಲಪ್ಪನವರ ಹಿರಿಯ ಪುತ್ರ ಜೆ. ನರಸಿಂಹಸ್ವಾಮಿಯವರು ಒಬ್ಬರು. ಕಳೆದ ಒಂದು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಕಾಂಗ್ರೆಸ್‌ನಲ್ಲಿದ್ದರೂ, ತನ್ನನ್ನು ಕಡೆಗಣಿಸಲಾಗಿದೆ ಎಂದು ಆರೋಪ ಮಾಡುತ್ತಿದ್ದರು ಆರ್.ಎಲ್. ಜಾಲಪ್ಪನವರು. ರಾಷ್ಟ್ರೀಯ ಮುಖಂಡರೊಂದಿಗೆ ಅವರ ಸಂಬಂಧ ಅಷ್ಟೇನು ಉತ್ತಮವಾಗಿರಲಿಲ್ಲ. ಇದನ್ನೆಲ್ಲ ಬಲ್ಲ ಬಿಜೆಪಿಗಳು ನರಸಿಂಹಸ್ವಾಮಿಗೆ ಬಲೆ ಬೀಸಿದರು. ಹಣ ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯ ಅಧ್ಯಕ್ಷ ಸ್ಥಾನಕ್ಕೆ ಆಸೆ ಬಿದ್ದು ನರಸಿಂಹಸ್ವಾಮಿ ಬಿ.ಜೆ.ಪಿ. ಸೇರಿದರು. ತಂದೆ ಮಕ್ಕಳನ್ನು ಸದಾ ಕಾಲ ಬೆಂಬಲಿಸುತ್ತಿದ್ದ, ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮತದಾರರನ್ನು ವಂಚಿಸಿದ್ದಾರೆ. ಬಿಜೆಪಿಗೆ ಪಕ್ಷಾಂತರ ಮಾಡಿದ ತನ್ನ ಮಗನ ಕುರಿತು ನನಗೇನು ಗೊತ್ತಿಲ್ಲವೆಂಬ ಜಾಲಪ್ಪನವರ ಮಾತನ್ನು ತಾಲ್ಲೂಕಿನಲ್ಲಿ ನಂಬುವವರೇ ಇಲ್ಲ. ಕೋಮುವಾದಿ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿರುವ ನರಸಿಂಹಸ್ವಾಮಿ ಯವರು ಈ ಸಾಂಪ್ರಾದಾಯಿಕ ಬೆಂಬಲಿಗರ ಮತಗಳಿಸುವುದು ಈ ಬಾರಿ ಕಷ್ಟವಾಗಬಹುದು.

ಜಾಲಪ್ಪನವರ ಬಲಗೈನಂತಿದ್ದವರು, ಮಾಜಿ ಶಾಸಕ ಆರ್.ಜಿ. ವೆಂಕಟಾಚಲಯ್ಯ ಕಾಂಗ್ರೆಸ್ ಅಭ್ಯರ್ಥಿಯಾಗಿರುತ್ತಾರೆ. ತಾಲ್ಲೂಕಿನಲ್ಲಿ ಆಯ್ಕೆಯಾಗಿದ್ದ ಬಹುಪಾಲು ಕಾಂಗ್ರೆಸ್ ಜನಪ್ರತಿನಿಧಿಗಳು ನರಸಿಂಹಸ್ವಾಮಿಯವರ ಹಿಂದೆ ಹೋದರು. ಆದರೆ ಇದನ್ನು


ನರಸಿಂಹಸ್ವಾಮಿಯವರು ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರಾಗಿ ಐದು ತಿಂಗಳಾದ ನಂತರವು ಅತ್ಯಂತ ಹೀನ ಸ್ಥಿತಿಯಲ್ಲಿ ಬದುಕುತ್ತಿರುವ ಇಲ್ಲಿನ ನಿವಾಸಿಗಳಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಇವೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿರುವ ಕ್ಷೇತ್ರದ ಮತದಾರರು ಈ ಬಾರಿ ಬಿಜೆಪಿಗೆ ಮತ ನೀಡುವರೇ ಎಂಬುದು ಮುಖ್ಯ ಪ್ರಶ್ನೆ.


ಆರ್.ಚಂದ್ರತೇಜಸ್ವಿ

ನಡುವೆ ನೇರ ಸ್ಪರ್ಧೆ ಇವೆ. ಈ ಬಾರಿ ಜನತಾದಳ (ಎಸ್) ಅಭ್ಯರ್ಥಿಗೆಲ್ಲುವ ಅವಕಾಶಗಳಿದ್ದವು. ಆದರೆ ತಾಲ್ಲೂಕಿನ ಮುಖಂಡರ ನಡುವಿನ ಹೊಂದಾಣಿಕೆಯ ಕೊರತೆ, ಪ್ರತಿಷ್ಠೆಗಳಿಂದಾಗಿ ಈ ಅವಕಾಶ ತಪ್ಪಿಹೋಯಿತು. ನಾಮ ಪತ್ರ ಸಲ್ಲಿಸುವ ಕೊನೆ ಹಂತದಲ್ಲಿ ಅಭ್ಯರ್ಥಿ ಆಯ್ಕೆ ಮಾಡಿದ್ದು ಸಹ ಮತ್ತೊಂದು ಕಾರಣ.

ಕಳೆದ 3 ದಶಕಗಳಿಂದಲೂ ತಾಲ್ಲೂಕನ್ನು ಆರ್.ಎಲ್.ಜಾಲಪ್ಪನವರು ಮತ್ತು ಅವರ ಮಕ್ಕಳು 'ಆಳಿದ್ದಾರೆ'. ಆದರೆ ಇಡೀ ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡುವಲ್ಲಿ ವಿಫಲರಾಗಿದ್ದಾರೆ. ಅಭಿವೃದ್ಧಿ ಕಾಮಗಾರಿಗಳ ಗುತ್ತಿಗೆಯನ್ನು ತನ್ನ ಹಿಂಬಾಲಕರಿಗೆ ನೀಡುತ್ತಾ ಬಂದಿದ್ದು


ನರಸಿಂಹಸ್ವಾಮಿ


ವೆಂಕಟಾಚಲಯ್ಯ


ಮುನೇಗೌಡ

ವಿರೋಧಿಸಿ ಕಾಂಗ್ರೆಸ್‌ನಲ್ಲಿಯೇ ಉಳಿದ ಆರ್.ಜಿ. ವೆಂಕಟಾಚಲಯ್ಯನವರ ಕುರಿತು ಮತದಾರರಲ್ಲಿ ವ್ಯಾಪಕ ಬೆಂಬಲ ಕಾಣಬರುತ್ತಿದೆ. ಇನ್ನು ಜೆಡಿ(ಎಸ್)ನ ಅಭ್ಯರ್ಥಿಯಾಗಿ 'ಹಾಪ್‌ಕಾಮ್ಸ್' ನ ಅಧ್ಯಕ್ಷರಾದ ದೇವನಹಳ್ಳಿಯ ಬಿ.ಮುನೇಗೌಡ ಸ್ಪರ್ಧಿಸಿದ್ದಾರೆ. ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆಯಂತೆ ಕಾಣಬರುತ್ತಿದ್ದರೂ, ಬಿ.ಜೆ.ಪಿ. ಮತ್ತು ಕಾಂಗ್ರೆಸ್

ಮತ್ತು ಕಾಮಗಾರಿಗಳ ಗುಣಮಟ್ಟಕ್ಕೆ ಗಮನ ನೀಡದೆ ಇರುವ ಕಾರಣ ಎಲ್ಲೆಲ್ಲೂ ಹದಗೆಟ್ಟ ರಸ್ತೆಗಳನ್ನು ಕಾಣಬಹುದು. ಕಾಮಗಾರಿ ನಡೆಸಿದ ಕೆಲವೇ ದಿನಗಳಲ್ಲಿ ರಸ್ತೆಗಳು ಮಾಯವಾಗುತ್ತಿವೆ. 1 ಲಕ್ಷಕ್ಕೂ ಹೆಚ್ಚು ಜನ ಸಂಖ್ಯೆಯುಳ್ಳ ದೊಡ್ಡಬಳ್ಳಾಪುರ ನಾಗರೀಕರು ಕುಡಿಯುವ ನೀರನ್ನು ದಿನನಿತ್ಯ ಖರೀದಿಸಿ ಉಪಯೋಗಿಸುವ ಸ್ಥಿತಿ ಇದೆ. ಇದಕ್ಕೆ ಪರಿಹಾರವಾಗಿ ರೂಪಿಸಲಾದ 'ಜಕ್ಕಲ ಮಡಗು ಯೋಜನೆ'

ಹಲವಾರು ವಿವಾದಗಳಿಂದಾಗಿ ಮತ್ತು ಭ್ರಷ್ಟಾಚಾರದಿಂದಾಗಿ ಜಾರಿಯಾಗಲೇ ಇಲ್ಲ. ಯೋಜನೆಯ 22 ಕೋಟಿ ಹಣ ಮಾತ್ರ ಖಾಲಿಯಾಗಿದೆ. ನೇಯ್ಗೆ ಉದ್ಯಮದ ಬಿಕ್ಕಟ್ಟಿ... ಬೀದಿ ಪಾಲಾದ ನೇಕಾರರು ಮತ್ತು ಬ... ಕಾರ್ಮಿಕರು, ಅತ್ಯಂತ ಕಡಿಮೆ ಕೂಲಿಗೆ ಕೈಗಾರಿಕಾ ಪ್ರದೇಶದಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕ... ರನ್ನು ಕಾಣಬಹುದು. ದೊಡ್ಡಬಳ್ಳಾಪುರ ನಗರದಲ್ಲಿ 13 ಕೊಳಚೆ ಪ್ರದೇಶಗಳಿದ್ದು, ನರಸಿಂಹಸ್ವಾಮಿಯವರು ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷರಾಗಿ ಐದು ತಿಂಗಳಾದ ನಂತರವು ಅತ್ಯಂತ ಹೀನ ಸ್ಥಿತಿಯಲ್ಲಿ ಬದುಕುತ್ತಿರುವ ಇಲ್ಲಿನ ನಿವಾಸಿಗಳಿಗೆ ಯಾವ ಪ್ರಯೋಜನವೂ ಆಗಲಿಲ್ಲ. ಇವೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿರುವ ಕ್ಷೇತ್ರದ ಮತದಾರರು ಈ ಬಾರಿ ಬಿಜೆಪಿಗೆ ಮತ ನೀಡುವರೇ ಎಂಬುದು ಮುಖ್ಯ ಪ್ರಶ್ನೆ. ಕೇವಲ ನಗರಕ್ಕೆ ಮೀಸಲಾಗಿದ್ದ ಬಿಜೆಪಿ ಜೆ.ನರಸಿಂಹಸ್ವಾಮಿಯವರಿಂದಾಗಿ ಗ್ರಾಮಾಂತರದಲ್ಲಿ ನೆಲ ಕಂಡುಕೊಳ್ಳುವುದೇ ಎಂಬುದು ಮತ್ತೊಂದು ಪ್ರಶ್ನೆ. ಪ್ರಾರಂಭದಿಂದಲೇ ಅಪಾರ ಪ್ರಮಾಣದಲ್ಲಿ ಹ... ಖರ್ಚು ಮಾಡುತ್ತಿರುವ ಬಿ.ಜೆ.ಪಿ.ಯವರು ಕಾಂಗ್ರೆ... ಮತ್ತು ಜೆಡಿ(ಎಸ್)ನವರನ್ನು ಮೀರಿಸಿದ್ದಾರೆ. ಮೂ... ಪಕ್ಷಗಳ ರಾಜ್ಯ ಮುಖಂಡರುಗಳಿಂದ ಅಬ್ಬರದ ಪ್ರಚಾರ ನಡೆಯಿತು.

ಜಾಗರೀಕರಣ-ಖಾಸಗೀಕರಣ ನೀತಿಗಳನ್ನು ಜಾರಿ ಮಾಡುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೇ ಶಕ್ತಿಯ ಬಲವರ್ಧನೆಗಾಗಿ ಜನತಾದಳ(ಎಸ್)ನ್ನು ಬೆಂಬಲಿಸಲು ಸಿಪಿಐ(ಎಂ) ಪಕ್ಷ ಕರೆ ನೀಡಿದೆ. ವಿದ್ಯಾವಂತ ನಿರುದ್ಯೋಗಿಗಳಿಗೆ ಭತ್ಯೆ, ರೂ.2ಕ್ಕೆ ಕೆ.ಜಿ. ಅಕ್ಕಿ, ಶೇ.3 ರ ಬಡ್ಡಿದರದಲ್ಲಿ ರೈತರಿಗೆ ನೇಕಾರರಿಗೆ ಸಾಲ ಎಂಬ ಬಿಜೆಪಿಯ ಎಲ್ಲಾ ಭರವಸೆಗಳು ಹುಸಿಯಾದ ಕುರಿತು ಹಾಗೂ ಅಲ್ಪಸಂಖ್ಯಾತರ ಮೇಲಿನ ದಾಳಿಗಳನ್ನು ವಿರೋಧಿಸಿ ಸಿಪಿಐ(ಎಂ)ನ ಸ್ಥಳೀಯ ಸಮಿತಿ ಸ್ವತಂತ್ರವಾಗಿ ಜೆಡಿ(ಎಸ್) ಪರವಾಗಿ ಪ್ರಚಾರ ನಡೆಸಿದೆ. ಕೋಮುವಾದಿ ಬಿಜೆಪಿಯನ್ನು ತಿರಸ್ಕರಿಸಲು ಕರೆ ನೀಡಿದೆ.

ಎಸ್.ಎಂ.ಎಸ್. ವೀರರೂ... ಚೆಡ್ಡಿ ಶೂರರೂ....

ಅವಿವೇಕಿಗಳ ರಣೋತ್ಸಾಹದಿಂದ ಯುದ್ಧದ ಕಾರ್ಮೋಡ ಕವಿದಿದೆ. ಎಸ್.ಎಂ.ಎಸ್ ವೀರರೂ, ಚೆಡ್ಡಿ/ಲಾಠಿ ಶೂರರೂ, ಟಿ.ವಿ. ಕ್ಯಾಮರಾ ಮುಂದಿನ ಪರಾಕ್ರಮಿಗಳೂ, 'ಯುದ್ಧ', 'ಯುದ್ಧ' ಎಂದು ಕನವರಿಸುತ್ತಿದ್ದಾರೆ. ಈ ಎಸ್.ಎಂ.ಎಸ್ ವೀರರನ್ನು ಕೇಳಿನೋಡಿ, 'ಯುದ್ಧ ಮಾಡೋಕೆ ನೀನು ಹೋಗ್ತಿಯೇನಪ್ಪ?' ಅಂತ. ಚೆಡ್ಡಿ ಶೂರರನ್ನು ಕೇಳಿ 'ನೀವು ಹೋಗ್ತಿರಾ ಯುದ್ಧಕ್ಕೆ ಅಥವಾ ನಿಮ್ಮ ಮಕ್ಕಳನ್ನು ಕಳಿಸುತ್ತೀರಾ?' ಅಂತ. ಆಗ ಈ ವೀರಾಧಿ ವೀರರ, ಶೂರಾಧಿ ಶೂರರ ಬಂಡವಾಳ ಗೊತ್ತಾಗುತ್ತೆ. ಮುಗಸಟ್ಟೆ ಎಸ್ ಎಂ ಎಸ್ ಇದ್ದರೆ ಇವರ ದೇಶ ಭಕ್ತಿ ಉಕ್ಕಿ ಹರಿಯುತ್ತದೆ. ಟಿ ವಿ ಕ್ಯಾಮರ ಎದುರಿಗೆ ಬಂದರಂತೂ, ಆ ಹಾ.., ಹೇಳೋದೆ ಬೇಡ. ಸೈನ್ಯಕ್ಕೆ ಸೇರುತ್ತೀರಾ? ಅಥವಾ ನಿಮ್ಮ ಆದಾಯದ ಅರ್ಧ ಭಾಗ ಸೈನ್ಯಕ್ಕೆ ಕೊಡ್ತಿರಾ ಅಂತ ಕೇಳಿ ನೋಡಿದರೆ, ಆಗ ಇವರ ದೇಶ ಭಕ್ತಿಯ ಲೆವೆಲ್ ಗೊತ್ತಾಗುತ್ತೆ. ಯುದ್ಧದಲ್ಲಿ ನರಳುವವರು, ಸಾಯುವವರು, ಅಮಾಯಕರು, ಮುಗ್ಧರು, ಸಾಮಾನ್ಯ ಜನಗಳು ಎಂಬ ವಿಚಾರ ಈ ಮೂರ್ಖರಿಗೆ ತಿಳಿಯುವುದಾದರೂ ಹೇಗೆ?

ವಾಗ್ಯುದ್ಧ ಪ್ರವೀಣರೇ ಜಾಸ್ತಿಯಾಗುತ್ತಿದ್ದಾರೆ. ಅಂಟುಲೆ ಎಂಬ ಮಂತ್ರಿ ಏನೋ ಹೇಳಿದರು. ಈ ವಾಗ್ದಾಳಿ ಪ್ರವೀಣ ಬಿಜೆಪಿ ಯವರು ಒಂದೇ ಸಮನೆ ಬೊಂಬಡ ಬಜಾಯಿಸುತ್ತಿದ್ದಾರೆ. ಸಂಸತ್ತಿನಲ್ಲೂ ಗಲಾಟೆಯೋ ಗಲಾಟೆ! ಈ ಅಂಟುಲೆ ಹೇಳಿದ್ದಾದರೂ ಏನು? ಕರ್ಕರೆ ಎಂಬ ಪೋಲೀಸ್ ಅಧಿಕಾರಿಯ ಸಾವಿನ ಬಗ್ಗೆ ತನಿಖೆಯಾಗಬೇಕು ಅಂತ ತಾನೆ? ಒಂದು ಪಕ್ಷ ತನಿಖೆಯಾದರೂ, ನಮ್ಮ ದೇಶದಲ್ಲಿ 'ತನಿಖೆ'ಗಳ ಗತಿ ಗೊತ್ತೇ ಇದೆಯಲ್ಲ? ಮಾಲೇಗಾಂವ್ ಸ್ಫೋಟದ ತನಿಖೆ ಬಗ್ಗೆಯೂ ಹೀಗೇ ಯಕ್ಷಗಾನದ ವೇಷಗಳ ಹಾಗೆ ಥಕ ಥಕನೆ ಕುಣಿದಾಡುತ್ತಾರಲ್ಲ ಯಾಕೆ ಇವರಿಗೆ ತನಿಖೆ ಎಂದರೆ ಇಷ್ಟು ಭಯ? ವಿಚಾರ ಅದಲ್ಲ. ಈ ಅಂಟುಲೆ 'ಹೇಳಿಕೆ' ಬಗ್ಗೆ ನಡೆಯುತ್ತಿರುವ ನೆಗೆದಾಟದಲ್ಲಿ, ಬಿಜೆಪಿ ಯ ಜಸ್ವಂತ್ ಸಿಂಗ್ ಎಂಬ ಮಾಜಿ ಮಂತ್ರಿಯ ಅವಿವೇಕೀ, ಅಪಾಯಕಾರೀ ಹೇಳಿಕೆ ಬಗ್ಗೆ ಹೆಚ್ಚಿನ ಗಮನವೇ ಹೋಗಲಿಲ್ಲ. ವಿಶ್ವವೇ ಒಂದಾಗಿ ಉಗ್ರಗಾಮಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದರೆ, ಈ ಜಸ್ವಂತ್ ಸಿಂಗ್ ಎಂಬ ಮಹಾಶಯ ಹೇಳಿದ್ದೇನು? "ಉಗ್ರರು ಮತ್ತೊಮ್ಮೆ ವಿಮಾನ ಅಪಹರಿಸಿ, ಬಂಧನದಲ್ಲಿರುವ ಉಗ್ರಗಾಮಿಗಳನ್ನು ಬಿಡಬೇಕೆಂಬ ಷರತ್ತನ್ನು ಹಾಕಿದರೆ ಮತ್ತೊಮ್ಮೆ ವಿಮಾನದಲ್ಲಿ ಅವರನ್ನು ಕರದುಕೊಂಡು ಹೋಗಿ ಬಿಟ್ಟು ಬರುತ್ತೇನೆ" ಎಂದು ಹೇಳಿದ್ದಾರೆ. (ಇನ್ನೊಬ್ಬರ ಎಲೆಯಲ್ಲಿ ನೊಣ ಸತ್ತು ಬಿದ್ದಿದ್ದರ ಬಗ್ಗೆ ಈ ಬಿಜೆಪಿ ಗಳು ಎಷ್ಟು ಬಾಯಿ ಬೊಂಬಾಯಿ ಮಾಡುತ್ತಾರೆಂದರೆ, ತಮ್ಮ ಎಲೆಯಲ್ಲಿ ಬಿದ್ದಿರುವ ಕತ್ತೆಯ ಬಗ್ಗೆ ಯಾರಿಗೂ ಗಮನ ಹೋಗಬಾರದು ಹಾಗೆ ನೋಡಿಕೊಳ್ಳುತ್ತಾರೆ.)

'ಎಲ್ಲರೂ ಉಗ್ರವಾದದವನ್ನು ಖಂಡಿಸಿ, ಅವರನ್ನು ಮಟ್ಟ ಹಾಕಬೇಕು ಅಂತ ಹೇಳುತ್ತಿರುವಾಗ, ಈ ಜಸ್ವಂತ್ ಸಿಂಗು 'ಉಗ್ರಗಾಮಿಗಳೇ ಬನ್ರಪ್ಪಾ, ವಿಮಾನ ಅಪಹರಿಸಿ, ನಿಮಗೆ ಬೇಕಾದೋರನ್ನ ಬಿಡಿಸಿಕೊಂಡು ಹೋಗಿ, ಖುದ್ದಾಗಿ ನಾನೆ ವಿಮಾನದಲ್ಲಿ ಅವರನ್ನು ಸುರಕ್ಷಿತವಾಗಿ ಕರೆದುಕೊಂಡು ಬಂದು ಬಿಡುತ್ತೇನೆ' ಅಂತ ಹೇಳಿದ್ದಾರೆ. ಇಂಥ ಅಪಾಯಕಾರೀ, ದೇಶದ್ರೋಹಿ ಹೇಳಿಕೆ ಬಗ್ಗೆ ಈ ದೇಶ ಭಕ್ತರಿಗೆ ಯಾಕೆ ಜಾಣ ಕಿವುಡು? ಇದೇ ಮಾತನ್ನು ಈ ಬುದ್ಧಿವಂತ ಜಸ್ವಂತರ ಬದಲು ದಡ್ಡ ಅಂಟುಲೆಯೋ ಇನ್ಯಾರೋ ಹೇಳಿದ್ದರೆ?

ಶ್ರೀ

ಜನಶಕ್ತಿ ಕನ್ನಡ ವಾರಪತ್ರಿಕೆ

ಯಂಶೈವಾಸ್ಯಮುಪಾಸತೇ ಇತಿ ಶಿವಬ್ರಹ್ಮೇತಿ ವೇದಾಂತಿನಃ॥
ಬೌದ್ಧ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತೀ ...ಯ್ಯಾಯಿಕಃ॥
...ರ್ಹನಿತ್ಯಥ ಜೈನ ಶಾಸನ ರತಾಃ ಕರ್ಮೇತಿ ಮೀಮಾಂಸಕಃ
ಸೋಮಂ ವೋ ವಿಧದಾತತು ವಾಂಛಿತ ಫಲಂ ತ್ರಿಕೇಶವೇಸ್ಸದಾ॥

ಶೈವ, ವೈಷ್ಣವ, ಜೈನ, ಬೌದ್ಧ, ನೈಯ್ಯಾಯಿಕ ಮೀಮಾಂಸಕ, ಶಾಕ್ತ ಇತ್ಯಾದಿ ವಿವಿಧ ಧರ್ಮಗಳಲ್ಲಿ ಪರಸ್ಪರ ಸಂಪೂರ್ಣ ಸಾಮರಸ್ಯವಿತ್ತು ಎಂಬುದನ್ನು ಬೇಲೂರಿನ ಈ ಶಾಸನವು ಸ್ಪಷ್ಟೀಕರಿಸುತ್ತದೆ. ಅಂತೆಯೇ ಈ ನೆಲದ ಶರಣ ಸೂಫಿ ಸಂತ ಅವಧೂತ,ನಾಥ,ಶಾಕ್ತ ಆರೂಢ ಹೀಗೆ ಹತ್ತಾರು ಚಿಂತನಧಾರೆಗಳನ್ನು ವಿವಿಧ ಆಚರಣೆಗಳ ವೈವಿಧ್ಯತೆಯನ್ನು ತನ್ನ ಸಾಂಸ್ಕೃತಿಕ ಶ್ರೀಮಂತಿಕೆಯಾಗಿ ಪೋಷಿಸಿಕೊಂಡು ಘೋಷಿಸಿಕೊಂಡು ಬಂದಿದೆ. ಘನತೆವೆತ್ತ ಸಂವಿಧಾನವು ಧಾರ್ಮಿಕ ಆಯ್ಕೆಯ ...ತಂತ್ರ್ಯ ಕೊಟ್ಟಿರುವಂತೆಯೇ ಪರಧರ್ಮ ...ಷ್ಣುತೆಯ ಕರ್ತವ್ಯವನ್ನು ವಿಧಿಸಿದೆ.

ಮೌನ ಅಪರಾಧ

ಆದರೆ ಕೋಮುವಾದಿ ಮತ್ತು ಮೂಲಭೂತವಾದಿಗಳು ನಿಜದ ನೆಲೆಯ ನಂಬಿಕೆಗಳನ್ನು ಪಲ್ಲಟಗೊಳಿಸಿ ಕೋಮು ಹಾಗೂ ವಿಚ್ಛಿದ್ರಕಾರಿ ಮನಸುಗಳನ್ನು ಸೃಷ್ಟಿಸುತ್ತಿವೆ. ಜಾಗತಿಕಮಟ್ಟದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಯು ಹೆಣೆಯುವ ಹುನ್ನಾರಗಳಿಗೆ ಇಂದು ಭಾರತವು ಬಲಿಯಾಗುವ ಒಳಸುಳಿಗೆ ಸಿಲುಕಿದೆ. ಕೋಮುದಂಗೆಯ ಭಯಾನಕತೆ ಹರಡುತಿದೆ. ಆತಂಕದ ಅರಾಜಕತೆ ಹಣಕುತಿದೆ. ಸಾಂಸ್ಕೃತಿಕ ವೈವಿಧ್ಯತೆ ಮತ್ತು ಪರಧರ್ಮ ಸಹಿಷ್ಣುತೆಯ ನಂಬಿಕೆಗೆ ಕುಂದು ತರಲಾಗುತ್ತಿದೆ. ದೇಶವು ಒಂದೆಡೆ ಹಸಿವು ಮತ್ತೊಂದೆಡೆ ಕೋಮುವಾದ ...ಲಭೂತವಾದದ ಕಾರ್ಮೋಡ ಎದುರಿಸುವಂತಾಗಿದೆ. ಈ ಹೊತ್ತಿನಲ್ಲಿ ...ಜ್ಞಾವಂತ ಪ್ರಜಾ ಸಮುದಾಯ ಮೌನದತ್ತ ವಾಲುವುದು ಅಪರಾಧವಾಗುತ್ತದೆ.

ಮನಸ್ಸು ಕೊಟ್ಟರು :

ಜನತಾ ಪ್ರಜಾಪ್ರಭುತ್ವದಲ್ಲಿ ಅಂತಿಮವಾಗಿ ...ಶೋಷಣಾರಹಿತ ಸಮಾಜ ನಿರ್ಮಾಣದಲ್ಲಿ ...ನಂಬಿಕೆಯಿಟ್ಟ ಸಿಪಿಐ(ಎಂ) ಪಕ್ಷವು 'ಸೌಹಾರ್ದ ...ಕರ್ನಾಟಕ' ಕಟ್ಟುವುದಕ್ಕಾಗಿ ಜಾಥಾ ನಡೆಸಲು ...ತೀರ್ಮಾನಿಸಿತು. ನೇರವಾಗಿ ಜನತೆಯೊಂದಿಗೆ ...ಸಂವಾದಿಸಲು ಶಾಂತಿ ಘೋಷಣೆಯನ್ನು ಹೊತ್ತ ...ಕೆಂಬಾವುಟವು ನಾಲ್ಕು ಜಾಥಾಗಳ ರೂಪದಲ್ಲಿ ...ಕರ್ನಾಟಕದಾದ್ಯಂತ ಸಂಚರಿಸಿತು. ಗ್ರಾಮ ನಗರಗಳನ್ನು ...ಏಕಕಾಲಕ್ಕೆ ಮುಟ್ಟುತ ಮುನ್ನಡೆಯಿತು. ಎಲ್ಲರ ...ಎದೆಯಂಗಳದಲ್ಲೂ ಚೆಲ್ಲಿದ್ದು ಶಾಂತಿ ಪ್ರೀತಿ ಮತ್ತು ...ಸೌಹಾರ್ದತೆಯ ಬೀಜಗಳನ್ನು. ದಾರಿಯುದ್ದಕ್ಕೂ ಜನತೆ ...ನಮ್ಮ ಮಾತುಗಳಿಗೆ ಕಿವಿಯಾದರು ಮಾತಿನ ...ಮರ್ಮವನ್ನು ಹೃದಯಕ್ಕಿಳಿಸಿಕೊಂಡು ಕಣ್ಣಾಲಿ ತುಂಬಿ ...ಎಲ್ಲಾ ಸಾಮರಸ್ಯದ ಆಶಯ ಈಡೇರಲೆಂದು ...ಹರಸಿದರು. ಮುಷ್ಠಿ ಬಿಗಿಗೊಳಿಸಿ ಶಾಂತಿ ರಕ್ಷಣೆಗೆ ...ಘೋಷಣೆ ಸಾರಿದರು. ನಮ್ಮ ಹಾಡಿಗೆ ದನಿಗೂಡಿಸಿದರು. ...ಭಾರತ ಬಾವುಟಕ್ಕೆ ಗೌರವದಿಂದ ಧ್ವಜವಂದನೆ ...ಸಲ್ಲಿಸಿದರು. ಕೆಂಬಾವುಟದ ಗುರಿಗೆ ಮನಸು ಕೊಟ್ಟರು.

ಬಸವಕಲ್ಯಾಣ ಜಾಥಾ

ನಮ್ಮ ಜಾಥಾವು ಕಾಯಕ ಜೀವಿಗಳ ನಾಡಿನಿಂದ ಮೊದಲುಗೊಂಡಿತು. ಹಾರಿಬಿಟ್ಟ ಪಾರಿವಾಳವು ನಮ್ಮ ಸಭೆ ಮುಗಿಯುವವರೆಗೂ ಎದುರು ಮರದಲ್ಲಿ ಕುಂತಿತ್ತು. ನನ್ನ ಮನಸು ಹೇಳುತ್ತಿತ್ತು. 'ರೆಕ್ಕೆ ಬಿಚ್ಚಿ ಪಾರಿವಾಳಗಳೇ ಯುದ್ಧ ನಾಡಿನಲ್ಲಿ'

ಗುಂಪುಗೂಡಿದರು. ಉಪಚುನಾವಣೆಗಳ ಕಾರಣವಿರಬಹುದು. ದಾಳಿ ಮಾಡಲಿಲ್ಲ. ಆದರೆ ರೋಷ ಬುಸುಗುಡುತ್ತಿತ್ತು ಅವರ ಪಾಳೆಯದಲ್ಲಿ. ಹುಮನಾಬಾದ್, ಕಲ್ಯಾಣದಲ್ಲಿ ಸೇರಿದ ಸಾವಿರಾರು ಸಂಖ್ಯೆಯ ಜನಸ್ತೋಮದಿಂದಾಲು ಗಾಬರಿಯಾದ ಅವರಿಗೆ ದಾಳಿ ಮಾಡಲಾಗಲಿಲ್ಲ. ಹುಮನಾಬಾದ್ ಸಭೆ ಮುಗಿದ ಮೇಲೆ ಮುಸ್ಲಿಂ ಯಜಮಾನನೊಬ್ಬ ಓಡೋಡಿ ಹೂ ಹಾರ ತಂದು ನಿತ್ಯಾನಂದ ಸ್ವಾಮಿಗಳ

ವಚನ ಚಳುವಳಿಯ ಕಂಪು ಹೊತ್ತ ಜಾಥಾ

ಜನರೆಡೆಗೆ

ಈ ಹೊತ್ತಲ್ಲಿ ಮತ್ತೆ ಮತ್ತೆ ನಮಗೆ ನೆನಪಾದದ್ದು ಕಾರ್ಲ್ ಮಾರ್ಕ್ಸ್. "ಜನರೆಡೆಗೆ ಹೋಗಿ ಜನರಿಂದ ಕಲಿಯಿರಿ". ಜನರು ನಮ್ಮ ಸಿದ್ಧಾಂತಕ್ಕೆ ತಲೆದೂಗಿದರು. ನಮ್ಮ ಜೋಳಿಗೆಗೆ ಹಣದೊಂದಿಗೆ ಮನಸೂ ತುಂಬಿದರು. ನಮ್ಮ ಭಾಷಣವು ಬರೀ ಅಬ್ಬರದ ಸೋಂಕಿನಿಂದ ಬಿಡುಗಡೆಗೊಂಡಿತ್ತು. ರೋಷದ ಸುಳಿವಿರಲಿಲ್ಲ. ಕೂಡಿ ಬಾಳುವ ಬಯಕೆಯ ಹೃದಯ ಬೆಸುಗೆಯೇ ಒಟ್ಟು ಮಾತಿನ ತಿರುಳಾಗಿತ್ತು. ಜಾಗತಿಕ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳಬೇಕಾದ ಅರಿಗಣ್ಣು ತೆರೆಸಬೇಕಾಗಿತ್ತು. ಆ ಸಂಘ ಪರಿವಾರಗಳ ಅಟ್ಟಹಾಸವನ್ನು ಹಿಮ್ಮೆಟ್ಟಿಸುವ ಸಾಮ್ರಾಜ್ಯಶಾಹಿಯ ಷಡ್ಯಂತ್ರವನ್ನು ಮಟ್ಟ ಹಾಕುವ ತಾಖತ್ತಿರುವುದು

ಗೋಕರ್ಣ ಜಾಥಾದ ಸಾಂಸತಿಕ ಕಾರ್ಯಕ್ರಮ



ಜನತೆಗೆ ಮಾತ್ರ ಎಂಬುದನ್ನು ಮನದಟ್ಟಾಗಿಸುದಾಗಿತ್ತು. ಜನಶಕ್ತಿ ಎದ್ದು ಬಂದಲ್ಲಿ ಕೋಮುವಾದ ಸಾಮ್ರಾಜ್ಯಶಾಹಿ ಹಿಮ್ಮೆಟ್ಟಿಸಿದಲ್ಲಿ ಮೂಲಭೂತವಾದ ಮತ್ತು ಭಯೋತ್ಪಾದನೆ ಹಿಂದೆ ಸರಿಯಲೇಬೇಕಾಗುತ್ತದೆ. ಒಂದರೊಳಗೊಂದು ಅಂತರ್ ಸಂಬಂಧದ ಈ ವಿಷದ ಗಿಡವನ್ನು ಬೇರು ಸಹಿತ ಕೀಳಲೇಬೇಕಾದ ಜರೂರಿ ಇದೆ.

ಕಾಯಕ ಜೀವಿಗಳ ನಾಡಿನಿಂದ

ನಮ್ಮ ಜಾಥಾವು ಕಾಯಕ ಜೀವಿಗಳ ನಾಡಿನಿಂದ ಮೊದಲುಗೊಂಡಿತು. ಹಾರಿಬಿಟ್ಟ ಪಾರಿವಾಳವು ನಮ್ಮ ಸಭೆ ಮುಗಿಯುವವರೆಗೂ ಎದುರು ಮರದಲ್ಲಿ ಕುಂತಿತ್ತು. ನನ್ನ ಮನಸು ಹೇಳುತ್ತಿತ್ತು. 'ರೆಕ್ಕೆ ಬಿಚ್ಚಿ ಪಾರಿವಾಳಗಳೇ ಯುದ್ಧ ನಾಡಿನಲ್ಲಿ' ವರ್ಣವರ್ಗ ಜಾತಿ, ಲಿಂಗ ತಾರತಮ್ಯದ ವಿರುದ್ಧ ಕಾಯಕ ಜೀವಿಗಳ ಚಳುವಳಿಯು ಇದೇ ಕಲ್ಯಾಣ ನಾಡಿನಲ್ಲಿ ಹೊಡೆ ಮುರಿದು ಮೇಲೆದ್ದಿತ್ತು. ಜಾತಿಯ ಗೋಡೆ ಕೆಡವಿ ನಡೆಸಲಾದ ಅಂತರ್‌ಜಾತಿ ವಿವಾಹ, ಅದಕ್ಕಾಗಿ ಕಣ್ಣು ಕಿತ್ತು ಆನೆ ಕಾಲಿಗೆ ಕಟ್ಟಿ ಪಟ್ಟಣದ ತುಂಬಾ ಎಳೆ ಹೂಟೆ ಮಾಡಲಾಯಿತು. ಶರಣರು ಛಲದಂಕ ಮಲ್ಲರು. ನುಡಿದಂತೆ ನಡೆದ ಸಮರಧೀರರು ತಲೆದಂಡ ಕೊಟ್ಟರು. ಆದರೆ ಚಳುವಳಿಯಿಂದ ಹಿಂದೆ ಸರಿಯಲಿಲ್ಲ. ನಿತ್ಯಾನಂದಸ್ವಾಮಿ ಹೇಳುತ್ತಿದ್ದರು.

ಬರೀ ಪಕ್ಷ ಅಲ್ಲ. ಆಂದೋಲನ

'ನಮ್ಮ ಪಕ್ಷ ಸಿಪಿಐ(ಎಂ) ಎಂಬುದು ಒಂದು ಆಂದೋಲನ ಚಳುವಳಿ... 'ಸಮತೆಯೆಂಬುದೇ ಯೋಗ ನೋಡ' ಎಂದು ಸಾರಿದ ಶರಣರ ಆಂದೋಲನದ ವಾರಸುದಾರರೇ ನಾವು. ಸಮತೆಯ ನಾಡಿನ ಉಪಯೋಗಕ್ಕಾಗಿ ನಮ್ಮ ಜಾಥಾ ಒಂದೊಂದೇ ಊರುಗಳನ್ನು ತಲುಪತೊಡಗಿತು. ಕನಕಟ್ಟು ಎಂಬ ಊರಲ್ಲಿ ಐದು ಹಳ್ಳಿಯ ಜನ ಕೆಂಬಾವುಟ ಮತ್ತು ಹೂ ಹಾರಗಳೊಂದಿಗೆ ಸ್ವಾಗತಿಸಿದರು. ಹೋರಾಟ ಉದ್ಯೋಗ ಖಾತ್ರಿಯಲ್ಲಿ ನೂರು ದಿನಗಳ ಕಾಲ ಪಡೆದ ಆ ಶ್ರಮಿಕರು ತಮ್ಮ ಪ್ರೇಮ ಮತ್ತು ಗೌರವವನ್ನು ಹೂವಿನ ಹಾರಗಳನ್ನು ಹಾಕುವ ಮೂಲಕ ವ್ಯಕ್ತಿಸುತ್ತಿದ್ದರು.

ನಾವು ನಿಮ್ಮವರೇ....

ಜಾಥಾದುದ್ದಕ್ಕೂ ಮರೆಯಲಾರದ ಅನೇಕ ಪ್ರಕರಣಗಳು ನಮ್ಮದೆಯಲ್ಲಿ ದಾಖಲಾದವು. ಹುಮನಾಬಾದ್ ತಾಲ್ಲೂಕಿನ ಚಾಂಗಲೇಕಾದಲ್ಲಿ ಸಭೆ ಮುಗಿದ ಕೂಡಲೇ ಅನೇಕ ಹಿರಿಯರು, ಕೈ ಕುಲುಕಿ ಹೇಳಿದರು. 'ನಾವೆಲ್ಲ ಕಮ್ಯುನಿಸ್ಟ್ ಪಾರ್ಟಿಯವರೇ, ನಾಯಕತ್ವ ಇಲ್ಲದಕ್ಕೆ ಹೀಂಗ ಸುಮ್ಮನಾಗಿವಿ..' ಮುಸ್ಲಿಂ ಯಜಮಾನ್ರರು ಕಾಂತಿಗಂಗಳಿಂದ ಕೈ ಮುಗಿದು ಬೆಂಬಲ ವ್ಯಕ್ತಪಡಿಸಿದರು.

ದಾಂಧಲೆ

ಬೀದರ್‌ನಲ್ಲಿ ಸಂಘ ಪರಿವಾರದ ಗೂಂಡಾ ವ್ಯಕ್ತಿಯೊಬ್ಬ ನಮ್ಮ ವೇದಿಕೆ ಹತ್ತಿ ದಾಂಧಲೆ ಮಾಡಲು ಯತ್ನಿಸಿದ. ಶ್ರೀಮಂತನವನು. ಚುನಾಯಿತ ಸದಸ್ಯನೂ, ಪೊಲೀಸರು ಕರೆದೊಯ್ದರು. ಜನತೆಯು ನಮ್ಮತ್ತ ಒಲವು ಹರಿಸಿತು. ಭಜರಂಗಿಗಳು ಪ್ರಾರಂಭದಿಂದಲೇ ತೊಂದರೆ ಒಡ್ಡುತ್ತಿದ್ದರು. 'ಮಹಾತ್ಮಾ ಗಾಂಧಿಯನ್ನು ಕೊಲೆ ಮಾಡಿದ ನಾಥೂರಾಂ ಗೋಡ್ಸೆ ಆರೆಸ್ಸೆಸ್ ಎಂದು ಹೇಗೆ ಹೇಳಿದಿರಿ...?' ಎಂದು ಆವೇಶದಿಂದ ಫೋನಾಯಿಸಿ ಭಯ ನಿರ್ಮಿಸಲು ಪ್ರಯತ್ನಿಸಿದ್ದರು. ಇದ್ಯಾವುದಕ್ಕೂ ಬಗ್ಗದ ನಾವು 'ತಮ್ಮ ನೀನು ಲಿಂಗಾಯುತ ಮನುಷ್ಯ ಹೌದಲ್ಲ? ಶರಣರ ವಿರುದ್ಧ ಸಿದ್ಧಾಂತ ಭಜರಂಗಿಗಳಿದ್ದು, ಅದರಲ್ಲಿ ಯಾಕ ಹೋಗಿದಿ?" ಎಂದು ವಾಪಸು ದಬಾಯಿಸಿದೆ. ಬೀದರ್‌ನ ರಸ್ತೆಯುದ್ದಕ್ಕೂ ಪ್ರಚಾರ ನಡೆವಾಗ ಸಂಘ ಪರಿವಾರದ ಪಡ್ಡೆಗಳು ಕೈಯಲ್ಲಿ ಕಲ್ಲು ಹಿಡಿದು ಕೊರಳಿಗೆ ಹಾಕಿ ಹರ್ಷ ವ್ಯಕ್ತಪಡಿಸಿದ.

ತಿಳಿ ಹೇಳ ಬರ್ರೀ

ಸಿರಗುಪ್ಪ ಇರಬೇಕು. ಉರಿಬಿಸಿಲಲ್ಲಿ ನಮ್ಮ ಬಹಿರಂಗಸಭೆ ಮುಗಿಯಿತು. ಒಬ್ಬ ಯುವಕ ಸುಮಾರು ದೂರ ನಡೆಯುತ ನಮ್ಮೊಂದಿಗೆ ಮಾತು ಬೆಳೆಸಿದ್ದ. ಅವನದ್ದೊಂದೇ ಮಾತು, 'ಹಳ್ಳ್ಯಾಗ ಇಂಥ ಕಾರ್ಯಕ್ರಮ ನಡೆಸ್ರೀ ನಾನು ಮಾದಿಗ ಅಂತ ಮೇಲ್ಜಾತಿಯವ್ರು ಅವಮಾನ ಮಾಡ್ತಾರೆ. ಅವ್ರೀಗೆ ಜರಾ ತಿಳಿ ಹೇಳ್ರೀ..." ದಲಿತರ ಪ್ರಶ್ನೆಯನ್ನೆತ್ತಿಕೊಂಡು ಹೀಗೇ ಒಂದು ಜಾಥಾ ಮಾಡಬೇಕಾದ ಜರೂರಿ ಆ ಯುವಕ ಮನದಟ್ಟಾಗಿಸಿದ.

ಎದ್ದು ನಿಂತರು

ಜಾಲಹಳ್ಳಿಯಲ್ಲಿ ನಮ್ಮ ನಾಟಕದ ಕೊನೆಯ ದೃಶ್ಯ ಭಗತ್‌ಸಿಂಗ್‌ನ ತಲೆಗೆ ಟೋಪಿ ಇಟ್ಟು, ಕೈಗೆ ಬಾವುಟ ಕೊಟ್ಟ ಕೂಡಲೇ ಕೈಯನ್ನು ಹಣೆಗಿಟ್ಟು ಧ್ವಜ ವಂದನೆ ಸಲ್ಲಿಸುವುದು. ನೆರೆದ ಜನ ತಂತಾನೇ ಎದ್ದು ನಿಂತರು. ನಡುವಲ್ಲಿ ಯುವಕನೊಬ್ಬ ಗಂಭೀರತೆಯಿಂದ ಧ್ವಜವಂದನೆ ಸಲ್ಲಿಸಿ, 'ಸಾರೇಜಂಹಾಸೇ ಅಚ್ಛಾ' ಹಾಡ ತೊಡಗಿದನು. ಅನೇಕ ಕಣ್ಣಲ್ಲಿ ಧನ್ಯತೆಯ ಭಾವ ಮುಡುಗಟ್ಟಿತು.

ಬೆಂಗಳೂರು ನಗರದ ಪೀಣ್ಯ ಸೆಕೆಂಡ್ ಸ್ಟೇಜ್‌ನಲ್ಲಿ ಬೀದಿಯ ಬದಿ ದಿಢೀರ್‌ರೆಂದು ಸಭೆ ನಡೆಸಿದೆವು. ಲೀಲಾವತಿ ಪ್ರಾಸ್ತಾವಿಕ ಮಾತಾಡಿದರು. ಆಟೋ ಚಾಲಕ ಸಂಗಾತಿಗಳು ಕೆಂಬಾವುಟ ಹೊತ್ತು ನಿಂತಿದ್ದರು. ಜನ ನೆರೆದರು. ಭಾಷೆಗಾಗಿ ನೀರಿಗಾಗಿ ಧರ್ಮದ ಹೆಸರಿನಲ್ಲಿ ದಂಗೆ ನಡೆಸುವುದರಿಂದ ಬೀದಿಯ ಮೇಲಿರುವ ಸಾಮಾನ್ಯ ಜನ ತಾನೆ ಬಲಿಯಾಗುತ್ತಾರೆ. 'ಗೇಣುಹೊಟ್ಟೆಯನ್ನು ಗೌರವದಿಂದ ತುಂಬಿಕೊಳ್ಳುವ ವ್ಯವಸ್ಥೆ ಬೇಕೆಂದು ಕೇಳಿದ...' ಮಾತಿಗೆ ಇಡೀ ಜನತೆ ಏಕಕಂಠದಿಂದ ತಲೆದೂಗಿದರು.

ಬ್ಯಾನರ್ ಕಿತ್ತು ತುಳಿದರು

ನಮಗೆ ಅರಿವಿತ್ತು, ಸಂಘ ಪರಿವಾರಿಗಳು ಖಂಡಿತ ಒಂದಿಲ್ಲ ಒಂದು ಕಡೆ ಆಕ್ರೋಶಿತಗೊಂಡು ನಮ್ಮ ಮೇಲೆರಗುತ್ತಾರೆ ಎಂಬುದು. ಕುರುಬರ ಹಳ್ಳಿಯಲ್ಲಿ ಹಾಗೇ ಆಯ್ತು. ನಿತ್ಯಾನಂದಸ್ವಾಮಿ ಮಾತು ಮುಗಿಸಿದರು. ನನ್ನ ಮಾತು ಶುರುವಾಗಿತ್ತು. ಬಂದರು ನೋಡಿ ಸಂಘ ಪರಿವಾರದ ಗೂಂಡಾಗಳು. ಅವರಿಗೆ ಸತ್ಯ ಅರಗಿಸಿಕೊಳ್ಳಲಾಗಲೇ ಇಲ್ಲ. ಮೈಕ್ ಸೌಂಡ್ ಕಟ್ ಮಾಡಿದರು. ವೇದಿಕೆ ಹತ್ತಿ ಘೇರಾವ್ ಮಾಡಿದರು. 'ಕ್ಷಮೆ ಕೇಳಿ' ಎಂದು ಪಟ್ಟು ಹಿಡಿದರು. ನಾವು ಒಪ್ಪಲಿಲ್ಲ. ಅವರು ಮತ್ತೂ ಕ್ರೋಧಗೊಂಡರು.

ಪುಟ 12ಕ್ಕೆ

'ಗುರುತೇ ಇಲ್ಲದ ಹಮಾಲರು!' ಕಾರ್ಡ್ ಕೊಡಲು ಚಳುವಳಿ

ಹಮಾಲಿ ಕಾರ್ಮಿಕರಿಗೆ ಹಾಗೂ ಎಕ್ಕಾಗಾಡಿ(ಎತ್ತಿನಗಾಡಿ) ಹಮಾಲರಿಗೆ ಗುರುತಿನ ಚೀಟಿ ಕೊಡಲು ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ರಾಮದುರ್ಗ ನಗರದ ಹಮಾಲರು ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಿಂದ ಪುರಸಭೆ ಕಾರ್ಯಾಲಯದವರೆಗೆ ನೂರಾರು ಎಕ್ಕಾಗಾಡಿಗಳ ಮೂಲಕ ಮೆರವಣಿಗೆ ಹೊರಡಿಸಿ ಪುರಸಭೆ ಆವರಣದಲ್ಲಿ ಸಮಾವೇಶಗೊಂಡು ಗುರುತಿನ ಚೀಟಿ ಕೊಡಲು ಒತ್ತಾಯಿಸಿ ಮುಖ್ಯಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

ಕರ್ನಾಟಕ ರಾಜ್ಯದಲ್ಲಿ ಸುಮಾರು 1 ಲಕ್ಷಕ್ಕಿಂತ ಹೆಚ್ಚು ಜನ ಎಪಿಎಂಸಿ ಹಮಾಲರು, ಗೋಡಾವನ ಹಮಾಲರು, ಎಕ್ಕಾಗಾಡಿ ಹಮಾಲರು, ಕಾಯಿಪಲ್ಲೆ ಬಜಾರ ಹಮಾಲರು, ಲೋಡಿಂಗ್, ಅನ್ ಲೋಡಿಂಗ್ ಹಮಾಲಿ ಕಾರ್ಮಿಕರು ಶೋಚನೀಯ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಇವರೆಲ್ಲರಿಗೂ ಸರ್ಕಾರದ ಕೆಲವೊಂದು ಸೌಲಭ್ಯಗಳು ಇದ್ದರೂ ಜಾರಿಯಾಗದೇ ಉಳಿದಿದೆ. ಬಹಳಷ್ಟು ಕಡೆ ಗುರುತಿನ ಚೀಟಿ ದೊರಕಿದರೆ ಸರ್ಕಾರದ ಸೌಲಭ್ಯ ಪಡೆಯಲು ಅವಕಾಶ ಸಿಗಬಹುದು. ಕೂಡಲೇ ನಗರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಹಮಾಲಿ ಕಾರ್ಮಿಕರಿಗೆ ಗುರುತಿನ ಚೀಟಿ ಕೊಡಬೇಕೆಂದು ಕಾರ್ಮಿಕ ಮುಖಂಡ ಜಿ.ಎಂ.ಜೈನೆಖಾನ ಪುರಸಭೆ ಮುಖ್ಯಾಧಿಕಾರಿಗಳಿಗೆ ಒತ್ತಾಯಿಸಿದರು.

ಮನವಿಯನ್ನು ಸ್ವೀಕರಿಸಿದ ಮುಖ್ಯಾಧಿಕಾರಿಗಳಾದ ಕಾಗವಾಡ ಹಾಗೂ ಪುರಸಭೆ ಅಧ್ಯಕ್ಷರಾದ ದೇವಾಂಗಮಠ ಮತ್ತು ಸದಸ್ಯರಾದ ರಾಜು ಶೆಲೂಡಿ ಹಾಗೂ ಆರೋಗ್ಯ ಅಧಿಕಾರಿಗಳಾದ ಡಂಬಳರವರು ಮನವಿಯನ್ನು ಹಾಗೂ ಕಾರ್ಮಿಕರ ಯಾದಿಯನ್ನು ಸ್ವೀಕರಿಸಿ ಸದರಿ ಯಾದಿಯನ್ನು ಪರಿಶೀಲಿಸಿ 8 ದಿನದ ಒಳಗಾಗಿ ಗುರುತಿನ ಚೀಟಿಯನ್ನು ವಿತರಿಸುವುದಾಗಿ ಭರವಸೆಕೊಟ್ಟರು.

ಕಾರ್ಮಿಕ ಮುಖಂಡ ನಾಗಪ್ಪ ಸಂಗೊಳ್ಳಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು. ಎಕ್ಕಾಗಾಡಿ ಹಮಾಲರ ಸಂಘದ ಅಧ್ಯಕ್ಷರಾದ ಈರಪ್ಪ ವಜ್ಜರಮಟ್ಟಿ ಹಾಗೂ ಕಾರ್ಯದರ್ಶಿ ನಾಗರಾಜ ಮಾದರ, ಖಜಾಂಚಿಯಾದ ಹುಸೇನಸಾಬ ಸೈಯ್ಯದ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಮೆರವಣಿಗೆ ನೂರಾರು ಎಕ್ಕಾಗಾಡಿ ಹಮಾಲಿ ಕಾರ್ಮಿಕರು ತಮ್ಮ ಗಾಡಿಗಳ ಮೂಲಕ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ●

ಮಂಗಳೂರು: 'ಹಗಲಿರುಳೂ ದುಡಿವ ಆಟೋ ಚಾಲಕರಿಗೆ ಸೌಲಭ್ಯಗಳೇಕಿಲ್ಲ'?

ರಾಜ್ಯದಾದ್ಯಂತ ಸುಮಾರು 3 ಲಕ್ಷಕ್ಕಿಂತ ಹೆಚ್ಚು ಆಟೋ ಚಾಲಕರು ಸಾರ್ವಜನಿಕ ಸೇವೆಯಲ್ಲಿ ಹಗಲಿರುಳೆನ್ನದೆ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಉಪಯೋಗಿಸುವ ಕೇವಲ ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ವಾಹನ ಬಿಡಿ ಭಾಗಗಳ ಮೇಲಿನ ತೆರಿಗೆಯಿಂದ ಸರ್ಕಾರಕ್ಕೆ ವಾರ್ಷಿಕ 821 ಕೋಟಿ ರೂ.ಗಳು ಆದಾಯ ಬರುತ್ತಿದ್ದರೂ ಸಹ ಈ ವಿಭಾಗಕ್ಕೆ ಸರ್ಕಾರವು ಯಾವುದೇ ವಿಧವಾದ ಸೌಲಭ್ಯಗಳನ್ನು ನೀಡದೆ ಆಟೋ ಚಾಲಕರನ್ನು ಸರ್ಕಾರ ವಂಚಿಸುತ್ತಿದೆ.

ಆಟೋ ರಿಕ್ಷಾ ಚಾಲಕರು ಹಲವಾರು ಸಮಸ್ಯೆಗಳ್ನು ಎದುರಿಸುತ್ತಿದ್ದು, ಆಟೋರಿಕ್ಷಾ ಚಾಲಕರ ಕ್ಷೇಮಾಭಿವೃದ್ಧಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈವರೆಗೆ ಯಾವುದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿಲ್ಲ. ಸಾರ್ವಜನಿಕರ ಸೇವೆಯಲ್ಲಿ ತೊಡಗಿರುವ ಈ ಕಾರ್ಮಿಕರಿಗೆ ನಿವೃತ್ತಿ ವೇತನ, ಆರೋಗ್ಯ ರಕ್ಷಣೆಗೆ ಇ.ಎಸ್.ಐ., ಬಿಪಿಎಲ್ ಕಾರ್ಡ್, ಸಾಲ ಸೌಲಭ್ಯ, ಹಾಗೂ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಅಲ್ಲದೆ, ಎಲ್‌ಪಿಜಿ ಗ್ಯಾಸ್‌ಪಂಪ್‌ಗಳನ್ನು ಸ್ಥಾಪಸದೆ ಗ್ಯಾಸ್ ಕಿಟ್ ಕಡ್ಡಾಯಗೊಳಿಸುವಿಕೆ ಸರಿಯಲ್ಲವೆಂದು ಹಾಗೂ ಆಟೋರಿಕ್ಷಾ ಚಾಲಕ ಜೀವನ ಭದ್ರತೆಗೆ ಸಂಬಂಧಿಸಿದ 10 ಪ್ರಮುಖ ಬೇಡಿಕೆಗಳ ಆಧಾರದಲ್ಲಿ ಮಂಗಳೂರಿನಲ್ಲಿ ಚಳುವಳಿ ನಡೆಸಲಾಯಿತು.



ಸಂಪಾದಕೀಯ

ಹೊಸ ವರ್ಷದ ಹೊಸ್ತಿಲಲ್ಲಿ....

ಪುಟ 3 ರಿಂದ

ಕಾನೂನುಬದ್ಧ ಸವಲತ್ತು ಸಿಗುತ್ತಿಲ್ಲ. ಎಲ್ಲವನ್ನೂ ಖಾಸಗೀಕರಿಸುವಲ್ಲಿ ಶೋಷಣೆಯ ತೀವ್ರತೆ ಹೆಚ್ಚುತ್ತಿದೆ. ಅಸಂಘಟಿತ ಕಾರ್ಮಿಕರ ವೇತನ, ಸೌಲಭ್ಯಗಳತ್ತ ಕಿಂಚಿತ್ತೂ ಕತ್ತೆತ್ತಿ ಸರ್ಕಾರ ನೋಡುತ್ತಿಲ್ಲ. ಕೋಟ್ಯಾಂತರ ಜನಗಳ ಹಿತ ಚಿಂತನೆಯೇ ಇಲ್ಲದಿರುವಾಗ ಸರ್ಕಾರದ ಕಾಳಜಿ ಯಾರತ್ತ? ರಾಜ್ಯದ ದೇಶದ ಗಣಿ ಮುಂತಾದ ಸಂಪತ್ತನ್ನು ಲೂಟಿ ಮಾಡುವವರತ್ತಲೇ? ಭೂಮಿ ಕಬಳಿಸಿ ನುಂಗಿ ಮೆರೆವ ಭೂಪರತ್ತಲೇ? ಅಕ್ರಮ ಗಣಿ-ಭೂ ಮಾಫಿಯಾಗಳು ರಾಜ್ಯದ ರಾಜಕಾರಣದಲ್ಲಿ ಅತೀ ಪ್ರಮುಖ ಪಾತ್ರ ವಹಿಸಿ, ನಿಯಂತ್ರಿಸುತ್ತಿರುವುದು ಅಪಾಯದ ಬೆಳವಣಿಗೆ, ಇಂತಹ ಅಕ್ರಮ ಲೂಟಿಗೆ ಕಡಿವಾಣವಿಲ್ಲ. ನಿಬಂರ್ಧವಿಲ್ಲ. ರಾಜ್ಯವನ್ನು ಅಧೋಗತಿಗೆ ತರುವಲ್ಲಿ ಇವರ ಪಾತ್ರದೊಡ್ಡದು. ಅದೂ ಇನ್ನೂ ಹೆಚ್ಚು ಕುಮ್ಮಕ್ಕಿನಿಂದ ಮುಂದುವರಿದಿದೆ. ಎಲ್ಲಾ ಹಂತಗಳಲ್ಲಿಯೂ ಭ್ರಷ್ಟಾಚಾರ ಮಿತಿ ಮೀರಿದೆ.

ಈ ವರುಷದಲ್ಲಿ ಅತ್ಯಂತ ಪ್ರತಿಗಾಮಿಯಾದ ಕೋಮುವಾದೀ ಬಿಜೆಪಿ ರಾಜ್ಯದಲ್ಲಿ ಪ್ರಥಮಬಾರಿಗೆ ಅಧಿಕಾರಕ್ಕೆ ಬಂದುದು ಗಮನಾರ್ಹ ಬೆಳವಣಿಗೆಗೆ. ಬಲಪಂಥೀಯ ಪಕ್ಷಗಳ ವೈಫಲ್ಯಗಳು ಹಾಗೂ ಸಂದರ್ಭ ಸಾಧಕತೆಗಳನ್ನು ಬಳಸಿ ಹಂತಹಂತವಾಗಿ ಸಾಗಿಬಂದ ಕೋಮುವಾದಿಗಳು ಇಂದು ಜನರ ಅತೃಪ್ತಿ, ಅನುಕಂಪ ಬಳಸಿ ಅಧಿಕಾರಕ್ಕೆ ಬಂದಿದ್ದಾರೆ. ಬಂದ ದಿನದಿಂದಲೇ ಪ್ರಜಾಪ್ರಭುತ್ವ, ಧರ್ಮ ನಿರಪೇಕ್ಷತೆ, ಸೌಹಾರ್ದತೆಯ ಮೇಲೆ ಸತತ ಧಾಳಿ ನಡೆಸುತ್ತಲೇ ಇದ್ದಾರೆ. ಪ್ರಜಾಪ್ರಭುತ್ವ ಮೌಲ್ಯಗಳ ಮೇಲೆ, ಅಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡುತ್ತಿದ್ದಾರೆ. ಪಂಚಾಯತ್‌ರಾಜ್ ವ್ಯವಸ್ಥೆ ದುರ್ಬಲಗೊಳಿಸುತ್ತಿರುವುದು, ಚುನಾಯಿತ ಸದಸ್ಯರ ಖರೀದಿ, ಅಧಿಕಾರ ಆಮಿಷ, ಪಕ್ಷಾಂತರ ಇತ್ಯಾದಿಗಳ ಮೂಲಕ ಎಲ್ಲಾ ಅನೈತಿಕ ಹಾದಿ ಹಿಡಿಯಲಾಗಿದೆ. ನೀತಿಬದ್ಧ ಆಡಳಿತಕ್ಕಿಂತ ಅಧಿಕಾರವೇ ಪ್ರಧಾನ ಎಂದೂ ಸಾರಲಾಗಿದೆ. ಆಪರೇಷನ್ ಕಮಲವೆಂದು ಹೆಗ್ಗಳಿಕೆಯಿಂದ ಹೇಳಿಕೊಳ್ಳುವುದು ಪತನಕ್ಕೊಂದು ಉದಾಹರಣೆ.

ಬಿಜೆಪಿಯವರು ಅಧಿಕಾರದಲ್ಲಿರುವುದನ್ನು ಆರ್‌ಎಸ್‌ಎಸ್ ತನ್ನ ನೆಲೆಯನ್ನು ವಿಸ್ತರಿಸಲು, ಫ್ಯಾಶಿಸ್ಟ್ ಮೌಲ್ಯಗಳನ್ನು ಜಾರಿಗೊಳಿಸಲು ಸಕ್ರಿಯವಾಗಿ ಬಳಸುತ್ತಿದೆ. ಈ ಸಂಘ ಪರಿವಾರ ನಡೆಸುತ್ತಿರುವ ದಾಳಿಗಳಿಗೆ ಸರ್ಕಾರ ಯಂತ್ರ ಸಕ್ರಿಯ ಬೆಂಬಲ ನೀಡುತ್ತಿದ್ದು ಕಾನೂನುಬದ್ಧ ನಾಗರೀಕ ಆಡಳಿತವನ್ನು ದುರ್ಬಲಗೊಳ್ಳುತ್ತಿದೆ. ಸರ್ಕಾರದ ಶಕ್ತಿ ಬಳಸಿ ಬಾಬಾಬುಡನ್‌ಗಿರಿಯ ವಿವಾದದಲ್ಲಿ ಪರಂಪರೆಯನ್ನು, ನ್ಯಾಯಾಲಯದ ತೀರ್ಪನ್ನು ಬುಡಮೇಲು ಮಾಡಲಾಗುತ್ತಿದೆ. ಹಂಪಿ, ಅಂತರಗಂಗೆ ಇತರೆಡೆ ಹೊಸ ವಿವಾದಗಳನ್ನು ಹುಟ್ಟಿ ಹಾಕಲಾಗುತ್ತಿದೆ. ಮುಸ್ಲಿಂ, ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ಧಾಳಿಗಳು, ಪ್ರಾರ್ಥನಾ ಮಂದಿರಗಳ ಮೇಲಿನ ಆಕ್ರಮಣಗಳು ಪ್ರಜಾಪ್ರಭುತ್ವಕ್ಕೆ, ಸೆಕ್ಯುಲರಿಸಂಗೆ, ಜನರ ಒಗ್ಗಟ್ಟಿಗೆ, ಸೌಹಾರ್ದತೆಗೆ ಅಪಾಯಕಾರಿಯಾಗಿದೆ. ರಾಜ್ಯವನ್ನು ಹತ್ಯಾಕಾಂಡದ ಗುಜರಾತನ್ನಾಗಿಸುವ ಮುಖ್ಯಮಂತ್ರಿಗಳು ಪದೇ ಪದೇ ಮಾತುಗಳು, ಅದರ ಬೆನ್ನಲ್ಲೇ ಆಗಲೇ ನೆಲೆ ಕಂಡುಕೊಳ್ಳಲು ಹವಣಿಸುತ್ತಿರುವ ಭಯೋತ್ಪಾದಕ ಶಕ್ತಿಗಳಿಗೆ ಕುಮ್ಮಕ್ಕು ನೀಡಿದೆ. ಅಲ್ಲದೇ ಅದರ ಪರಿಣಾಮವೋ ಎಂಬಂತೆ ಬೆಂಗಳೂರಿನಲ್ಲಿ ಒಬ್ಬ ಅಮಾಯಕ ಮಹಿಳೆಯನ್ನು ಬಲಿತೆಗೆದುಕೊಂಡ ಸರಣಿಯ ಬಾಂಬ್ ಸ್ಫೋಟಗಳು ಹೊಸ ಅಪಾಯವನ್ನು ತೋರಿವೆ. ಅದಾಗ್ಯೂ ಭಯೋತ್ಪಾದನೆ ಬೆಳೆಸುವಂತಹ ಕೃತ್ಯಗಳು ನಿಂತಿಲ್ಲ. ಸಂಘ ಪರಿವಾರದ ದಾಳಿಗಳು ಅದಕ್ಕೆ ಸರ್ಕಾರದ ರಕ್ಷಣೆಯು ಅಲ್ಪಸಂಖ್ಯಾತರಲ್ಲಿ ಆತಂಕ ಹೆಚ್ಚಿಸಿದ್ದು, ಮೂಲಭೂತವಾದಿಗಳು ಅದನ್ನು ಬಳಸಲು ಹೆಚ್ಚು ಅವಕಾಶ ಕಲ್ಪಿಸಿದೆ.

ಇದರೊಟ್ಟಿಗೆ ಐದು ಮೇಲ್ಪಂಕ್ತಿಗಳನ್ನು ಆಧರಿಸಿ ಸರ್ಕಾರ ಎಂಬ ಪದೇ ಪದೇ ಸಂದೇಶವು ದಲಿತರ ಮೇಲಿನ ದೌರ್ಜನ್ಯಗಳಿಗೆ ತಡೆಯಿಲ್ಲದಂತೆ ಮಾಡಿದೆ. ಕಂಬಾಲಪಲ್ಲಿ, ಚಿಟ್ಟಾ, ಬಾಗಲಕೋಟೆ, ಗಂಗಾವತಿಯಲ್ಲಿ ಧಾಳಿಗೆ ಗುರಿಯಾದ ದಲಿತರಿಗೆ ಇನ್ನೂ ಪರಿಹಾರವೇ ಸಿಗಲಿಲ್ಲ. ರಕ್ಷಣೆಯೂ ಅಷ್ಟೇ.

ಒಟ್ಟಾರೆ ಸನ್ನಿವೇಶ ಗಂಭೀರ. ಜನರನ್ನು ಹಾದಿ ತಪ್ಪಿಸಲು ಕೋಮುವಾದ - ಭಯೋತ್ಪಾದನೆ ಜೊತೆಗೆ, ಭಾಷಾ ಸಂಕುಚಿತವಾದ, ಪ್ರಾದೇಶಿಕ ವಿಭಜನ ವಾದ, ಪ್ರತ್ಯೇಕತಾವಾದ ಇತ್ಯಾದಿಗಳೂ ಸಕ್ರಿಯವಾಗಿವೆ. ಈ ಸನ್ನಿವೇಶದಲ್ಲಿ ಜನತೆಯು ಇಂತಹ ಶಕ್ತಿಗಳ ವಿರುದ್ಧ ಒಗ್ಗಟ್ಟಾಗಿ ಹೋರಾಟಕ್ಕೆ ಇಳಿಯಬೇಕಿದೆ. ಈ ದಿಶೆಯಲ್ಲಿ ಸಿಪಿಐ(ಎಂ) ಹಾಗೂ ಇತರೆ ಪ್ರಗತಿಪರ ಶಕ್ತಿಗಳಿಂದ ರಾಜ್ಯದಲ್ಲಿ ನಡೆದ ಯತ್ನಗಳು ಸ್ವಾಗತಾರ್ಹವೇ. ಸಂಘ ಪರಿವಾರ ಅದೆಷ್ಟೇ ಯತ್ನಿಸಿದರೂ ಜನ ಇನ್ನೂ ಜಾತ್ಯಾತೀತ ಮನೋಭಾವದವರಾಗಿದ್ದಾರೆ. ಸಮಸ್ಯೆಗಳ ವಿರುದ್ಧ ಜನ ಸಂಘರ್ಷಕ್ಕೆ ಇಳಿದಿದ್ದಾರೆ. ಬೀಜ-ಗೊಬ್ಬರ ಕೇಳಿದ ರೈತರ ಮೇಲೆ ಗುಂಡೇಟಿನ ಉತ್ತರ ನೀಡಿ ಇಬ್ಬರು ರೈತರನ್ನು ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಯಡಿಯೂರಪ್ಪನವರ ಸರ್ಕಾರ ಬಲಿ ತೆಗೆದುಕೊಂಡು ತನ್ನ ನಿಜವಾದ ಮುಖವನ್ನು ಬಯಲಿಗಿಟ್ಟಿತು. ಇಂತಹ ಧಾಳಿ ನಡೆದರೂ ಜನತೆ ಪ್ರತಿಭಟನೆಯನ್ನು ಕೈಬಿಡಲಿಲ್ಲ ಎಂಬುದು ನಿಜಕ್ಕೂ ಆಶಾದಾಯಕ, ಸ್ವಾಗತಾರ್ಹ ಬೆಳವಣಿಗೆ.

ಇಷ್ಟೆಲ್ಲಾ ನಕಾರಾತ್ಮಕ ಸ್ಥಿತಿಗಳ ನಡುವೆಯೂ ಹೊಸ ಆಶಾದಾಯಕ ಸನ್ನಿವೇಶವಿದೆ. ಇಂತಹ ಸವಾಲಿನ ಸಂದರ್ಭವು ಜನ ಚಳುವಳಿ ಬೆಳೆಯಲು ಹೊಸ ಅವಕಾಶವೂ ಆಗಿದೆ. ಈ ಹಿನ್ನೆಲೆಯಲ್ಲಿ ಜನತೆಯನ್ನು ಇನ್ನೂ ಹೆಚ್ಚು ಹೆಚ್ಚು ಹೋರಾಟಗಳತ್ತ ಕೊಂಡೊಯ್ಯಬೇಕಿದೆ. ದುಡಿವ ವರ್ಗದ ಚಳವಳಿಯೇ ಆಳುವವರು ಹರಡುವ ಭ್ರಮೆಗಳನ್ನು ಹರಿದೊಯ್ಯಲು ಸಾಧ್ಯ. ಇದು ನಮ್ಮೆಲ್ಲರ ಸಂಕಲ್ಪವಾಗಬೇಕು.

ಇಂದು ನಿನ್ನೆಯ ಬಳುವಳಿ. ನಾಳೆ ಇಂದಿನದ್ದು ಆದ್ದರಿಂದ ಇಂದೇ ಕ್ರಿಯಾಶೀಲರಾಗೋಣ ನಾಳೆ ನಮ್ಮದಾಗಲು ಸಂಕಲ್ಪಸೋಣ. ●

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂವಿಧಾನದ ಒಕ್ಕೂಟ ರಚನೆಯನ್ನು ಉಲ್ಲಂಘಿಸದೆ ಭಯೋತ್ಪಾದಕ ನಿರೋಧಕ ಕಾನೂನು ಬಲಪಡಿಸಬೇಕು

ಮುಂಬೈ ಭಯೋತ್ಪಾದಕ ದಾಳಿಗಳ ಹಿನ್ನೆಲೆಯಲ್ಲಿ ಸಂಸತ್ತು ಎರಡು ಶಾಸನಗಳನ್ನು ಅಂಗೀಕರಿಸಿದೆ. ಹೀಗೆ ಮಾಡುವಾಗ ಒಕ್ಕೂಟ ತತ್ವವನ್ನು ಕೂಡಾ ಗಮನದಲ್ಲಿ ಇಟ್ಟುಕೊಳ್ಳಬೇಕು, ಮಾನವ ಹಕ್ಕುಗಳ ಉಲ್ಲಂಘನೆಗಳಿಗೆ ಅವಕಾಶಗಳನ್ನು ಕನಿಷ್ಟಗೊಳಿಸಬೇಕು ಎಂಬ ಉದ್ದೇಶದಿಂದ ಪ್ರಜಾಪ್ರಭುತ್ವ ಶಕ್ತಿಗಳು ಸೂಚಿಸಿದ್ದ ತಿದ್ದುಪಡಿಗಳನ್ನು ಸ್ವೀಕರಿಸಿದ್ದರೆ ಭಯೋತ್ಪಾದನೆಯ ಅಪರಾಧಗಳ ತನಿಖೆಗಳನ್ನು ಬಲಪಡಿಸುವ ಉದ್ದೇಶವನ್ನು ಇನ್ನಷ್ಟು ಚೆನ್ನಾಗಿ ಈಡೇರಿಸಬಹುದಾಗಿತ್ತು.


ಸಂಸತ್ತು ಕಳೆದ ವಾರ ಎರಡು ಮಸೂದೆಗಳನ್ನು ಶಾಸನಗಳಾಗಿ ಅಂಗೀಕರಿಸಿತು - ಒಂದು, ರಾಷ್ಟ್ರೀಯ ತನಿಖಾ ಸಂಸ್ಥೆ (ನ್ಯಾಶನಲ್ ಇನ್ವೆಸ್ಟಿಗೇಶನ್ ಏಜೆನ್ಸಿ ಅಥವಾ ಎನ್ಐಎ) ರಚನೆಗೆ ಸಂಬಂಧಪಟ್ಟದ್ದು ಮತ್ತು ಇನ್ನೊಂದು ಕಾನೂನು ಬಾಹಿರ ಚಟುವಟಿಕೆಗಳು(ತಡೆ) ಶಾಸನಕ್ಕೆ ತಿದ್ದುಪಡಿ. ವಿಚಿತ್ರವೆಂದರೆ, ಇದನ್ನು ಮಂಡಿಸುವಾಗ ಗೃಹ ಮಂತ್ರಿಗಳು ಸರಕಾರ ಫೆಬ್ರುವರಿಯಲ್ಲಿ ಸಂಸತ್ತು ಮತ್ತೆ ಸೇರುವಾಗ, ಈ ಶಾಸನಗಳ ಬಗ್ಗೆ ಮತ್ತೆ ಪರಿಶೀಲಿಸಲು ಸಿದ್ಧವಾಗಿದೆ ಎಂದು ಲೋಕಸಭೆಗೆ ಭರವಸೆ ನೀಡಿದರು. ಹಾಗಿದ್ದರೆ, ಈ ಮಸೂದೆಗಳನ್ನು ಸಂಸದೀಯ ಸ್ಥಾಯೀ ಸಮಿತಿಗೆ ಒಪ್ಪಿಸಬಹುದಾಗಿತ್ತು. ಅದರಲ್ಲಿ ಸಂಸತ್ತಿನ ಎಲ್ಲಾ ಪ್ರಮುಖ ಪಕ್ಷಗಳ ಪ್ರತಿನಿಧಿಗಳು ಇದ್ದಾರೆ. ಅವರು ಈ ಮಸೂದೆಗಳ ಆಮೂಲಾಗ್ರ ಪರಿಶೀಲನೆ ನಡೆಸಬಹುದಿತ್ತು. ಆದರೆ ಯುಪಿಎ ಸರಕಾರ ಈಗಲೇ ಅವನ್ನು ಶಾಸನಗಳಾಗಿಸಬೇಕೆಂದು ನಿರ್ಧರಿಸಿತು. ಮುಂಬೈ ಭಯೋತ್ಪಾದಕ ದಾಳಿಗಳ ಹಿನ್ನೆಲೆಯಲ್ಲಿ ತನ್ನ ಕಾಳಜಿಯುನ್ನು ಪ್ರದರ್ಶಿಸಲು ಅದು ಹೀಗೆ ಮಾಡಿರಬಹುದು. ಆದರೆ ಈ ಪ್ರಕ್ರಿಯೆಯಲ್ಲಿ ಅದು 2004ರಲ್ಲಿ ಯಾವ ಕಾರಣಗಳಿಂದಾಗಿ ಪೋಟ ಕಾನೂನನ್ನು ರದ್ದು ಮಾಡಿತೋ, ಅವನ್ನು ಬದಿಗೆ ತಳ್ಳಿದಂತಾಗಿದೆ.

ಭಯೋತ್ಪಾದಕ ದಾಳಿಗಳು ಹೆಚ್ಚುತ್ತಿರುವ ಬಗ್ಗೆ ಎಲ್ಲಾ ದೇಶಪ್ರೇಮಿಗಳಿಗೂ ಕಾಳಜಿಯಿದೆ. ಇಂತಹ ದಾಳಿಗಳನ್ನು ತಡೆಯುವ ಸಾಮರ್ಥ್ಯವನ್ನು ಹೆಚ್ಚಿಸುವ ಕಾನೂನುಗಳು, ವ್ಯವಸ್ಥೆಗಳು ತುರ್ತಾಗಿ ಬೇಕಾಗಿವೆ ಎಂಬುದರಲ್ಲಿ ಸಂದೇಹವಿಲ್ಲ. ಅಲ್ಲದೆ ಬೇಹುಗಾರಿಕೆ ಸಂಸ್ಥೆಗಳು ಮತ್ತು ಭದ್ರತಾ ಅಧಿಕಾರಿಗಳ ಚಟುವಟಿಕೆಗಳನ್ನು ಹೆಚ್ಚು ದಕ್ಷತೆಯಿಂದ ಸಂಯೋಜಿಸುವ ವ್ಯವಸ್ಥೆಯುನ್ನೂ ತುರ್ತಾಗಿ ರೂಪಿಸುವ ಅಗತ್ಯವಿದೆ ಎಂದೂ ಮುಂಬೈ ಅನುಭವದಿಂದ ಸ್ಪಷ್ಟವಾಗುತ್ತದೆ(ಈ ಎರಡು ಶಾಸನಗಳಲ್ಲಿಯೂ ಅಂತಹ ವ್ಯವಸ್ಥೆಯೇನೂ ಇಲ್ಲ ಎಂಬುದು ಗಮನಾರ್ಹ). ದೇಶದ ವಿವಿಧೆಡೆ ನಡೆಯುತ್ತಿರುವ ಭಯೋತ್ಪಾದಕ ಕೃತ್ಯಗಳ ತನಿಖೆಗಳು ಯಾವುದೇ ಒಂದು ರಾಜ್ಯದ ಗಡಿಗಳಿಗೆ ಸೀಮಿತವಾಗುವುದಿಲ್ಲ, ಕೆಲವೊಮ್ಮೆ ದೇಶದ ಗಡಿಗಳನ್ನೂ ದಾಟುತ್ತದೆ, ಆದ್ದರಿಂದ ಸಕಲ ಭಾರತ ವ್ಯಾಪ್ತಿಯಿರುವ ಒಂದು ತನಿಖಾ ಸಂಸ್ಥೆಯ ಅಗತ್ಯವೂ ಇದೆ ಎಂಬುದರಲ್ಲಿ ಸಂದೇಹವಿಲ್ಲ.

ಒಕ್ಕೂಟ ತತ್ವವನ್ನೂ ಮರೆಯಬಾರದು

ಇವನ್ನೆಲ್ಲಾ ತುರ್ತಾಗಿ ನೆರವೇರಿಸಬೇಕಾಗಿದೆ. ಆದರೆ ಈ ಗುರಿಯನ್ನು ಈಡೇರಿಸುವಾಗಲೇ, ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಬಾರದು, ಆಮೂಲಕ ನಮ್ಮ ಸಂವಿಧಾನದ ಒಕ್ಕೂಟ ರಚನೆಯುನ್ನು ಉಲ್ಲಂಘಿಸಬಾರದು ಎಂಬ ಗುರಿಯನ್ನೂ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ, ಕಾನೂನು-ವ್ಯವಸ್ಥೆ ನಮ್ಮ ಸಂವಿಧಾನದ ಪ್ರಕಾರ ರಾಜ್ಯಪಟ್ಟಿಗೆ ಸೇರಿರುವುದರಿಂದ ಎನ್ಐಎ ಕೈಗೊಳ್ಳುವ ಯಾವುದೇ ತನಿಖೆಯಲ್ಲಿ ರಾಜ್ಯ ಸರಕಾರಗಳನ್ನು ಒಳಗೊಳ್ಳುವುದು ಅಗತ್ಯವಾಗುತ್ತದೆ. ಈ ಸಂಸ್ಥೆಯನ್ನು ಸ್ಥಾಪಿಸುವ ಶಾಸನದಲ್ಲಿ ಅದರ ವ್ಯಾಪ್ತಿಯೊಳಗೆ ಬರುವ ಎಂಟು ಶಾಸನಗಳನ್ನು ಪಟ್ಟಿ ಮಾಡಲಾಗಿದೆ. ಈ ಯಾವುದೇ ಶಾಸನದ ಅಡಿಯಲ್ಲಿ ಅಪರಾಧ ಎಸಗಿದರೆ, ಎನ್ಐಎ ಅಗತ್ಯವೆನಿಸಿದರೆ, ಸ್ವಯಂಪ್ರೇರಣೆಯಿಂದಲೇ ಅದರ ತನಿಖೆಯನ್ನು ಕೈಗೆತ್ತಿಕೊಳ್ಳಬಹುದು ಎಂದು ಹೇಳಲಾಗಿದೆ. ಅಂದರೆ ರಾಜ್ಯ ಸರಕಾರಗಳನ್ನು ಜತೆ ಸೇರಿಸಿಕೊಳ್ಳುವುದು ಅದರ ಮರ್ಜಿಗೇ ಬಿಟ್ಟದ್ದು ಎಂದಾಗುತ್ತದೆ. ಇದನ್ನು ಮುಂದೊಮ್ಮೆ ಕೇಂದ್ರ ಸರಕಾರ ದುರುಪಯೋಗ ಪಡಿಸಿಕೊಳ್ಳುವ, ರಾಜ್ಯ ಸರಕಾರವನ್ನು ಬದಿಗೊತ್ತಿ ಸ್ವತಂತ್ರ ಕಾರ್ಯಾಚರಣೆಗಿಳಿಯುವ ಸಾಧ್ಯತೆಯಿದೆ.

ಇಂತಹ ದುರುಪಯೋಗದ ಸಾಧ್ಯತೆಯನ್ನು ತಡೆಯುಲು, ಸಿಪಿಐ(ಎಂ) ಈ ಪಟ್ಟಿಗೆ ಸಂಬಂಧಪಟ್ಟಂತೆ ನಿರ್ದಿಷ್ಟ ತಿದ್ದುಪಡಿಗಳನ್ನು ಸೂಚಿಸಿತು. ಇದನ್ನು ಎರಡು ಪಟ್ಟಿಗಳಾಗಿ ಮಾಡಬೇಕು-ಪಟ್ಟಿ ಒಂದರಲ್ಲಿ ಕೇಂದ್ರ ಸರಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಆರು ಶಾಸನಗಳು, ಅಣುಶಕ್ತಿ ಶಾಸನ, ವಿಮಾನಾಪಹರಣ - ನಿರೋಧಕ ಶಾಸನ, ಸಮುದ್ರಯಾನ ಶಾಸನ ಇತ್ಯಾದಿಯನ್ನು ಪಟ್ಟಿ ಮಾಡಬೇಕು, ರಾಜ್ಯ ಸರಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಉಳಿದೆರಡು ಶಾಸನಗಳಾದ ಕಾನೂನುಬಾಹಿರ ಚಟುವಟಿಕೆಗಳು(ತಡೆ) ಶಾಸನ ಮತ್ತು ಭಾರತೀಯ ದಂಡ ಸಂಹಿತೆಯ ಕೆಲವು



ಪಿ.ಮಹಮದ್ ಕೃಪೆ: ಪ್ರಜಾವಾಣಿ

ವಿಭಾಗಗಳನ್ನು ಪಟ್ಟಿ ಮಾಡಬೇಕು ಎಂದು ಸಲಹೆ ಮಾಡಲಾಯಿತು. ಈ ಎರಡನೇ ಪಟ್ಟಿಯಲ್ಲಿ ಬರುವ ಅಪರಾಧಗಳ ತನಿಖೆಯಲ್ಲಿ ಸಂಬಂಧಪಟ್ಟ ರಾಜ್ಯ ಸರಕಾರವನ್ನು ಜತೆಗೆ ಸೇರಿಸಿಕೊಳ್ಳಲು ಇದರಿಂದ ಅವಕಾಶವಾಗುತ್ತದೆ ಎಂಬುದು ಈ ತಿದ್ದುಪಡಿಯ ಉದ್ದೇಶ. ಆಗ ಭಾರತೀಯ ಸಂವಿಧಾನದ ಒಕ್ಕೂಟ ಸ್ವರೂಪವನ್ನು ಮತ್ತು ರಾಜ್ಯ ಸರಕಾರಗಳ ಹಕ್ಕುಗಳನ್ನು ಉಲ್ಲಂಘಿಸದೆಯೇ ಒಂದು ಸಕಲ ಭಾರತೀಯ ತನಿಖಾ ಸಂಸ್ಥೆಯನ್ನು ರಚಿಸುವ ಗುರಿಯನ್ನು ಈಡೇರಿಸಲು ಸಾಧ್ಯವಾಗುತ್ತದೆ.

ಮೂರು ಕಲಮುಗಳು

ಇನ್ನು 'ಕಾನೂನುಬಾಹಿರ ಚಟುವಟಿಕೆಗಳು(ತಡೆ) ಕಾನೂನಿ'ನಲ್ಲಿ ದುರುಪಯೋಗ ಪಡಿಸಿಕೊಳ್ಳಲು ಅವಕಾಶವುಳ್ಳ ಮೂರು ಕಲಮುಗಳಿವೆ. ವಾಸ್ತವವಾಗಿ ಇವು 2004ರಲ್ಲಿ ಇದೇ ಸರಕಾರ ರದ್ದು ಮಾಡಿದ ಭಯೋತ್ಪಾದನೆ ತಡೆ ಕಾನೂನಿ(ಪೋಟ)ನಲ್ಲಿ ಇದ್ದ ಕಲಮುಗಳು, ಈಗ ಮತ್ತೆ ಅದನ್ನು ಈ ರೀತಿ ತರಲಾಗಿದೆ. ಇವುಗಳಲ್ಲಿ ಮೊದಲನೆಯದು ಕಲಮು 43 ಡಿ ಯಲ್ಲಿ ಇದೆ. ಇದು ಜಾಮೀನಿಲ್ಲದೆ ಬಂಧನದಲ್ಲಿಡಬಹುದಾದ ಅವಧಿ ಕುರಿತಾದ ಕ್ರಿಮಿನಲ್ ಪ್ರೊಸೀಜರ್ ಕೋಡ್ ನ 167 ನೇ ವಿಭಾಗವನ್ನು ತಿದ್ದುಪಡಿ ಮಾಡುತ್ತದೆ. ಇದುವರೆಗೆ ಈ ಅವಧಿ 60ರಿಂದ 90 ದಿನಗಳವರೆಗೆ ಇದೆ. ಅದನ್ನೀಗ 180ದಿನಗಳಿಗೆ ಏರಿಸಲಾಗುವುದು. ತನಿಖೆ ಮುಗಿಸಲು ಈಗ ಇರುವ ಗರಿಷ್ಟ ಅವಧಿಯನ್ನು 90ರಿಂದ 180ಕ್ಕೆ, ತನಿಖೆಯನ್ನು ಪೂರ್ಣಗೊಳಿಸಲು ಇದು ಅಗತ್ಯ ಎಂದು ನ್ಯಾಯಾಲಯಗಳಿಗೆ ಅನಿಸಿದರೆ ಏರಿಸಬಹುದು.

ಟಾಡಾ ಮತ್ತು ಪೋಟ ಇವೆರಡೂ ಕಾನೂನುಗಳ ಅನುಭವದಿಂದ ಹೇಳುವುದಾದರೆ ಈ ಅವಕಾಶವನ್ನು ಸಂಪೂರ್ಣವಾಗಿ ದುರುಪಯೋಗ ಪಡಿಸಿಕೊಳ್ಳಬಹುದು. ಈ ಕಾನೂನುಗಳಡಿಯಲ್ಲಿ ಅಪರಾಧ ಸಾಬೀತಾದದ್ದು ಬಹಳ ಕಡಿಮೆ. ಟಾಡಾ ಬಂದದ್ದು ನಿರ್ದಿಷ್ಟವಾಗಿ ಪಂಜಾಬಿನ ಭಯೋತ್ಪಾದನೆಯನ್ನು ಎದುರಿಸಲು. ಅದರಡಿ ಪಂಜಾಬ್ ಒಂದರಲ್ಲಿಯೇ 15000ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಯಿತು. ಆದರೆ ಅಪರಾಧ ಸಾಬೀತಾದದ್ದು ಕೇವಲ 2ಶೇಕಡಾ ಮಾತ್ರ! ಅದೇ ರೀತಿ ಪೋಟ ಪರಿಶಿಲನಾ ಸಮಿತಿ, ಇತರ ಕಾನೂನುಗಳು ಸಾಕಿರುವಾಗ ಪೋಟವನ್ನು ಬಳಸಲು ಸಾಕಷ್ಟು ಸಮರ್ಥನೆ ಇಲ್ಲವೆಂದು ಗುಜರಾತಿನ ಗೋಧ್ರಾದಲ್ಲಿ ಬಂಧಿಸಲ್ಪಟ್ಟ ಸುಮಾರಾಗಿ ಎಲ್ಲಾರನ್ನು ಬಿಡುಗಡೆ ಮಾಡಬೇಕೆಂದು ಶಿಫಾರಸು ಮಾಡಿತು. ಈ 180 ದಿನಗಳಿಗೆ ಬಂಧನದ ಅವಧಿಯನ್ನು ಹೆಚ್ಚಿಸುವ ಅಂಶವನ್ನು ಕೈಬಿಡಬೇಕು ಎಂದು ಸಿಪಿಐ(ಎಂ) ತಿದ್ದುಪಡಿ ಸೂಚಿಸಿತ್ತು.

ಅಮೆರಿಕಾ 9/11 ರ ಘಟನೆಗಳ ನಂತರ ಬಹಳ ಕಠಿಣವಾದ ಭಯೋತ್ಪಾದಕ- ವಿರೋಧಿ ಕಾನೂನುಗಳನ್ನು ತಂದಿತು, ಭಾರತ ಹಾಗೆಯೆ ಮಾಡಬೇಕು ಎಂದೆಲ್ಲ ಈಗ ಬಹಳವಾಗಿ ಹೇಳಲಾಗುತ್ತದೆ. ಆದರೆ ಅಲ್ಲಿಯೂ ಯಾವುದೇ ನಾಗರಿಕನನ್ನು ಆರೋಪ ಪಟ್ಟಿ ಹಾಕದೆ ಎರಡು ದಿನಗಳಿಗಿಂತ ಹೆಚ್ಚು ಸಮಯ ಬಂಧನದಲ್ಲಿ ಇಡುವಂತಿಲ್ಲ. ಬ್ರಿಟನ್ನಿನಲ್ಲೂ ಈ ಬಗ್ಗೆ ಬಿಸಿ-ಬಿಸಿ ಚರ್ಚೆ ನಡೆಯಿತು. ಮೇಲ್ಮನೆಯಾದ ಹೌಸ್ ಆಫ್ ಲಾರ್ಡ್ಸ್ ಒಮ್ಮೆ ಮಸೂದೆಯನ್ನು ಹಿಂದಕ್ಕೂ ಕಳಿಸಿತು. ಅಲ್ಲಿಯೂ ಬಂಧನದ ಅವಧಿಯನ್ನು 28ರಿಂದ 56 ದಿನಗಳಿಗೆ ಹೆಚ್ಚಿಸಲಾಗಲಿಲ್ಲ. ಆರೋಪ ಪಟ್ಟಿ ಹಾಕದೆ ಬಂಧನದಲ್ಲಿಡುವ ಕರಾಳ ಶಾಸನಾಂಶಗಳ ವಿರುದ್ಧ ಅಂತರ್ರಾಷ್ಟ್ರೀಯವಾಗಿ ಕೂಗಿದ್ದರೂ, ಯುಪಿಎ ಸರಕಾರ ಬಂಧನದ ಅವಧಿಯನ್ನು 90ರಿಂದ 180 ದಿನಗಳವರೆಗೆ ಹೆಚ್ಚಿಸಬೇಕು ಎಂದು ಸೂಚಿಸುತ್ತಿದೆ.

ತಿರುಗುಮುರುಗಾದ ನಿಯಮ

ಎರಡನೇ ಕಲಮು 43ಇ. ಇದು ನಾಗರಿಕ ಸಮಾಜ ಸ್ವೀಕರಿಸಿರುವ ನ್ಯಾಯ ತತ್ವಶಾಸ್ತ್ರದ ಒಂದು ನಿಯಮವನ್ನೇ ತಿರುಗುಮುರುಗುಗೊಳಿಸುತ್ತದೆ. ಒಬ್ಬ ವ್ಯಕ್ತಿ ತಪ್ಪಿತಸ್ಥ ಎಂದು ಸಾಬೀತಾಗುವವರೆಗೆ ಆತ/ಆಕೆ ನಿರ್ದೋಷಿ ಎಂಬುದೇ ಆ ನಿಯಮ. ಆದರೆ ಇಲ್ಲಿ, ಈ ಕಲಮಿನ ಪ್ರಕಾರ ಅಪರಾಧ ನಡೆದ ಸ್ಥಳದಲ್ಲಿ ಕಂಡು ಬಂದ ಗುರುತು (ಕೈಬೆರಳು ಗುರುತು ಇತ್ಯಾದಿ) ಆಧಾರದಲ್ಲಿ ಆರೋಪ ಪಟ್ಟಿ ಸಲ್ಲಿಸಿದ್ದರೆ ಆತ/ಆಕೆ ತಾನು ನಿರ್ದೋಷಿ ಎಂದು ಸಾಬೀತು ಮಾಡದಿದ್ದರೆ ಆತ/ಆಕೆಯನ್ನು ದೋಷಿ ಎಂದು ಪರಿಗಣಿಸಲಾಗುತ್ತದೆ. ಇದಕ್ಕೆ ಸಿಪಿಐ(ಎಂ), ತನಿಖೆಯಲ್ಲಿ ಹೊರಬಂದ ಸಾಕ್ಷ್ಯವನ್ನು ನ್ಯಾಯಾಲಯಗಳು ಮಾಪನ ಮಾಡಿ ತಕ್ಕ ಶಿಕ್ಷೆಯನ್ನು ವಿಧಿಸುತ್ತವೆ ಎಂಬುದಾಗಿ ತಿದ್ದುಪಡಿ ಮಾಡಬೇಕು ಎಂದು ಸೂಚಿಸಿತು.

ಮೂರನೇ ಕಲಮು 43ಎಫ್(2). ಇದು ಪೋಲೀಸ್ ಸೂಪರಿಂಟೆಂಡೆಂಟ್ ಅಥವ ಅವರ ಮೇಲಿನ ಹುದ್ದೆಯ ತನಿಖಾಧಿಕಾರಿ ಕೇಳಿದಾಗ ಮಾಹಿತಿ ಒದಗಿಸುವಲ್ಲಿ ವಿಫಲತೆ ಅಥವಾ ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿ ನೀಡುವುದಕ್ಕೆ ಸಂಬಂಧಪಟ್ಟದ್ದು. ಈ ಕಲಮಿನ ಪ್ರಕಾರ ಅಂತಹ ವ್ಯಕ್ತಿ ಅಥವಾ ಸಂಸ್ಥೆ ಮೂರು ವರ್ಷಗಳ ಶಿಕ್ಷೆ ಅಥವ ದಂಡ ಅಥವಾ ಎರಡಕ್ಕೂ ಅರ್ಹರಾಗುತ್ತಾರೆ. ಇಲ್ಲಿ ಕೂಡಾ ಸಂಪೂರ್ಣ ದುರುಪಯೋಗದ ಸಾಧ್ಯತೆಯಿದೆ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಆಪಾದಿತರನ್ನು ನ್ಯಾಯಾಲಯಗಳು ನಿರ್ಧರಿಸುವ ಶಿಕ್ಷೆಗೆ ಒಳಪಡಿಸಬೇಕು ಎಂದು ತಿದ್ದುಪಡಿ ಸೂಚಿಸಲಾಯಿತು.

ಸರಕಾರ ಈ ತಿದ್ದುಪಡಿಗಳನ್ನು ಸ್ವೀಕರಿಸಿದ್ದರೆ ಈ ಶಾಸನಗಳ ಅಂಶಗಳನ್ನು ಸಂಪೂರ್ಣ ದುರುಪಯೋಗ ಪಡಿಸಿಕೊಂಡು ಮಾನವ ಹಕ್ಕುಗಳ ಉಲ್ಲಂಘನೆ ಮಾಡುವ ಸಾಧ್ಯತೆಗಳನ್ನು ಕನಿಷ್ಟಗೊಳಿಸಿ, ಭಯೋತ್ಪಾದನೆಯ ಅಪರಾಧಗಳ ತನಿಖೆಗಳನ್ನು ಬಲಪಡಿಸುವ ಉದ್ದೇಶವನ್ನು ಇನ್ನಷ್ಟು ಚೆನ್ನಾಗಿ ಈಡೇರಿಸಬಹುದಾಗಿತ್ತು.

'ಭಾರತದ ಸಾರ್ವಭೌಮತೆ, ಭದ್ರತೆ ಮತ್ತು ಸಮಗ್ರತೆಯನ್ನು ಬಾಧಿಸುವ ಅಪರಾಧಗಳನ್ನು ತನಿಖೆ ಮಾಡಲು ರಾಷ್ಟ್ರೀಯ ಮಟ್ಟದಲ್ಲಿ ಒಂದು ತನಿಖಾ ಸಂಸ್ಥೆಯನ್ನು ರಚಿಸುವುದು' ತನ್ನ ಉದ್ದೇಶ ಎಂದು ಎನ್ಐಎ ಮಸೂದೆ ನಿರೂಪಿಸುತ್ತದೆ. ಆದ್ದರಿಂದ ಇದು ಸಮಕಾಲೀನ ಭಾರತವನ್ನು ಬಾಧಿಸುತ್ತಲೇ ಇರುವ, ಪೀಡಿಸುತ್ತಲೇ ಇರುವ ಎಲ್ಲಾ ಭಯೋತ್ಪಾದಕ ಹಿಂಸಾಚಾರದ ಅಭಿವ್ಯಕ್ತಿಗಳನ್ನು, ಕೋಮುವಾದಿ ಮತ್ತು ಸಂಕುಚಿತವಾದಿ ಹಿಂಸಾಚಾರವನ್ನು ಕೂಡಾ ಒಳಗೊಳ್ಳುತ್ತದೆ ಎಂದು ದೇಶದ ಪ್ರಜಾಪ್ರಭುತ್ವವಾದಿಗಳು ನಿರೀಕ್ಷಿಸುತ್ತಾರೆ.

ವಿವಿಧ ರಾಜಕೀಯ ಪಕ್ಷಗಳಿಗೆ ಹೇಗಾದರೂ ಸರಿ ಅಧಿಕಾರದ ಕುರ್ಚಿ ಹಿಡಿಯುವುದೇ ಪರಮಗುರಿ. ಅದಕ್ಕೆ ಸಂಬಂಧಿಸಿದ ಅನೈತಿಕ ಮೇಲಾಟಗಳಲ್ಲೇ ಅವುಗಳ ಆಸಕ್ತಿ. ಜನರ ಬದುಕು, ನಾಡಿನ ಸೌಹಾರ್ದ ಪರಂಪರೆಗೆ ಬಂದೊದಗಿರುವ ಗಂಭೀರ ಅಪಾಯದ ಬಗೆಗೆ ಅವರಿಗೆಲ್ಲಿಯ ಕಾಳಜಿ. ಸರ್ವಜನಾಂಗದ ಶಾಂತಿ ತೋಟವನ್ನು ಹಾಳುಗೆಡವಿ ಕೋಮುವಾದದ ಬೆಂಕಿ ಹಚ್ಚಲು ನಿಂತಿರುವ ಕೋಮುವಾದಿಗಳ ಪ್ರಯತ್ನದ ಬಗೆಗೆ ಗಮನ ನೀಡಲು ಯಾರಿಗೆ ಪುರುಸೊತ್ತಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕೇವಲ ಒಂದು ರಾಜಕೀಯ ಪಕ್ಷವಲ್ಲ. ಅದೊಂದು ಆಂದೋಲನ. ಹಾಗಾಗಿಯೇ ಈ ಪ್ರಶ್ನೆಯನ್ನು ಗಂಭೀರವಾಗಿ ಕೈಗೆತ್ತಿಕೊಂಡಿದೆ. ಜನರ ಬದುಕಿನ ನಡುವೆ ಹಾಸುಹೊಕ್ಕಾಗಿ ಹಬ್ಬಿರುವ ಸೌಹಾರ್ದತೆಯ ಬಳ್ಳಿಗಳನ್ನು ಗುರುತಿಸಿ ಜತನದಿಂದ ಅದನ್ನು ಕಾಯ್ದುಕೊಂಡು ಹೋಗಬೇಕೆಂಬ ಉದ್ದೇಶದಿಂದ ಕರ್ನಾಟಕದಾದ್ಯಂತ ವ್ಯಾಪಕ ಸಂಚಾರ ನಡೆಸಿದ 4 ಸೌಹಾರ್ದ ಜಾಥಾಗಳನ್ನು ಸಿಪಿಐ(ಎಂ) ಸಂಘಟಿಸಿತ್ತು ಒಂದು ವರದಿ

ಸೌಹಾರ್ದ ಕರ್ನಾಟಕ ಜಾಥಾಗಳ ಸಮಾಗಮ

ಸರ್ವ ಜನಾಂಗದ ಶಾಂತಿಯ ತೋಟವನ್ನು ಸಂರಕ್ಷಿಸುವ ಸಂಕಲ್ಪ

'ಮಾನವ ಜನ್ಮ ಬಲು ದೊಡ್ಡದು ಅದನು ವ್ಯರ್ಥಗೊಳಿಸದಿರೋ ಹುಚ್ಚಪ್ಪಗಳಿರಾ' ಎಂಬ ಪುರಂದರದಾಸರ ಪದ ಒಂದು ಕಡೆ

'ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲಯನೇನಾದರೂ ಬಲ್ಲಿರಾ...ಬಲ್ಲಿರಾ... ಎಂಬ ಕನಕದಾಸರ ಪ್ರಶ್ನೆ ಒಂದು ವಾಹನದ ಮೇಲೆ.

.... ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನೋ ನಿಮ್ಮೊಳಗೆ... ಎಂಬ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪರವರ ಕಳಕಳಿಯ ಹಾಡು ಮತ್ತೊಂದು ವಾಹನದ ಮೇಲೆ.

ಹೌದು, ಇಂತಹ ಹತ್ತಾರು ಅಮೂಲ್ಯ ಸಂದೇಶವನ್ನು ಶಾಂತಿ ಪ್ರೀತಿಯನ್ನು ದಾಸ, ಸಂತ, ಕವಿ ವಾಣಿಯನ್ನು ವಿವೇಕನಂದಾ ಗಾಂಧೀಜಿ ಮುಂತಾದ ವಿವೇಕದ ನುಡಿಗಳನ್ನು ಹೊತ್ತು ನಾಡಿನಲ್ಲೆಲ್ಲಾ ಸಂಚರಿಸಿದ ಜಾಥಾಗಳು ಬೆಂಗಳೂರನ್ನು ತಲುಪಿದ್ದವು.

ಪ್ರಸ್ತುತ ದೇಶವನ್ನು, ರಾಜ್ಯವನ್ನು ಕಾಡುತ್ತಿರುವ ಎರಡು ಗಂಭೀರ ಸಮಸ್ಯೆಗಳಾದ ಭಯೋತ್ಪಾದನೆ ಹಾಗೂ ಕೋಮುವಾದಗಳ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಿಪಿಐ(ಎಂ) ನೇತೃತ್ವದಲ್ಲಿ ನಡೆದ 4 ಸೌಹಾರ್ದ ಜಾಥಾಗಳ ಸಮಾರೋಪ ಸಮಾರಂಭ ಹಾಗೂ ರಾಜ್ಯ ಮಟ್ಟದ ಸೌಹಾರ್ದ ರ್‍ಯಾಲಿಯು ಡಿಸೆಂಬರ್ 23, 2008 ರಂದು ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಡೆಯಿತು.



ಬೆಂಗಳೂರು ನಗರದ ರೈಲ್ವೆ ನಿಲ್ದಾಣದಿಂದ ಬೃಹತ್ ಸೌಹಾರ್ದ ಮೆರವಣಿಗೆಯು ಮೈಸೂರು ಬ್ಯಾಂಕ್ ವೃತ್ತದ ಮೂಲಕ ಹಾದು ಬನ್ನಪ್ಪ ಮೈದಾನದಲ್ಲಿ ಬಹಿರಂಗಸಭೆಯಾಗಿ ಮಾರ್ಪಟ್ಟಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಅವರ ಅಧ್ಯಕ್ಷತೆಯಲ್ಲಿ ಸೌಹಾರ್ದಸಭೆ ಉತ್ಸಾಹದಾಯಕ ವಾತಾವರಣದಲ್ಲಿ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಮತ್ ಎಲ್ಲರನ್ನೂ ಸ್ವಾಗತಿಸಿದರು. ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಮಾತನಾಡಿದರು. ಸೌಹಾರ್ದ ರ್‍ಯಾಲಿಯಲ್ಲಿ ನಾನು ಸಂತೋಷದಿಂದ ಪಾಲ್ಗೊಳ್ಳುತ್ತಿದ್ದೇನೆ. ಕೋಮುವಾದದ ಎಲ್ಲ ರೂಪಗಳನ್ನು ಎದುರಿಸುವ ಅಗತ್ಯತೆ ಕುರಿತು ವಿವರಿಸುವ 4 ಜಾಥಾಗಳು ಸೌಹಾರ್ದ ಸಂದೇಶದೊಂದಿಗೆ ಇಡೀ ರಾಜ್ಯವನ್ನು ಸುತ್ತಿ ಬಂದಿವೆ.

ದೇಶದಲ್ಲಿಂದು ಜಾತ್ಯಾತೀತ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಬೇಕಾಗಿದೆ. ಭಾರತ ಭಾಷೆ, ಧರ್ಮ, ಸಂಸ್ಕೃತಿಗಳಲ್ಲಿ ಮಹಾನ್ ವೈವಿಧ್ಯತೆಯನ್ನುಳ್ಳ ಅನನ್ಯ ದೇಶ. ಶತ ಶತಮಾನಗಳಿಂದ ಜನರು ಇಲ್ಲಿ ಐಕ್ಯತೆಯಿಂದ ಸಹಬಾಳ್ವೆ ನಡೆಸುತ್ತಿದ್ದಾರೆ. ಆದರೆ ಕೋಮುವಾದ, ಭಯೋತ್ಪಾದನೆಗಳಿಂದ ಈ ಸಹಬಾಳ್ವೆಗೆ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ರೂಪುಗೊಂಡ ಜನರ ಐಕ್ಯತೆಗೆ ಧಕ್ಕೆ ಬಂದಿದೆ. ಬಹುಸಂಖ್ಯಾತ ಧರ್ಮೀಯರ ಅಧಿಪತ್ಯ ಸ್ಥಾಪಿಸಬೇಕೆಂಬ- ಭಾರತವು ಒಂದು ಜಾತ್ಯಾತೀತ ಪ್ರಜಾಪ್ರಭುತ್ವವಾಗಿರಲು ಸಾಧ್ಯವೆಂಬ ನಂಬಿಕೆ ಇಲ್ಲದ ಮತೀಯ ಕೋಮುವಾದಿ ಶಕ್ತಿಗಳಿಂದ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ದಾಳಿಗಳು ನಡೆಯುತ್ತಿದೆ.

ಭಾರತದ ಯಾವುದೇ ವ್ಯಕ್ತಿ. ತನಗೆ ಸರಿ ಕಂಡ ಧರ್ಮವನ್ನು ಪಾಲಿಸಲು ಸ್ವಾತಂತ್ರ್ಯವಿರಬೇಕು. ಯಾವ ಸಂಘ, ಸಂಸ್ಥೆಗಳಿಗೂ ಸರ್ಕಾರ ಬೆಂಬಲ ನೀಡಬಾರದು. ಧರ್ಮ ಖಾಸಗಿ ವಿಚಾರ. ಸರ್ಕಾರದ ಹಣದಿಂದ ನಡೆಯುವ ಶಿಕ್ಷಣದಲ್ಲಿ ಧರ್ಮವನ್ನು ಬೆರೆಸುವುದು ಸರಿಯಲ್ಲ. ದುರದೃಷ್ಟವಶಾತ್ ಭಾರತದಲ್ಲಿ ರಾಜಕೀಯ ಮತ್ತು ಮತಧರ್ಮವನ್ನು ಬೆರೆಸಲಾಗುತ್ತಿದೆ. ಮತಧರ್ಮವನ್ನು ಬಳಸಿ ಜನರನ್ನು ರಾಜಕೀಯವಾಗಿ ಸೆಳೆಯಲು ಹಿಂಜರಿಯುತ್ತಿಲ್ಲ ಹಾಗೂ ಅದಕ್ಕಾಗಿ ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಲು ಕೂಡ ಹೇಸುತ್ತಿಲ್ಲ.

ಕರ್ನಾಟಕವು ಕೋಮುವಾದಿ ರಾಜಕೀಯವು ಬಲಗೊಳ್ಳುತ್ತಿರುವ ಒಂದು ರಾಜ್ಯವಾಗಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಕ್ರಿಶ್ಚಿಯನ್ನರು ಮುಸ್ಲಿಮರ ಮೇಲೆ ದಾಳಿಗಳು ನಡೆಯುತ್ತಿವೆ.ನಾವು ಜಾತ್ಯಾತೀತೆಯನ್ನು ನಂಬುತ್ತೇವೆ. ಅದರ ಬೆಂಬಲಕ್ಕೆ ನಿಲ್ಲುತ್ತೇವೆ. ಒರಿಸ್ಸಾದಲ್ಲಿ, ಕರ್ನಾಟಕದಲ್ಲಿ ಮಂಗಳೂರು ಇತರೆಡೆ ಚರ್ಚ್‌ಗಳ ಮೇಲೆ ನಿರಂತರ ದಾಳಿಗಳು ನಡೆದಾಗ, ಕೇಂದ್ರ ಸರ್ಕಾರ ಅಲ್ಪಸಂಖ್ಯಾತರ ಪ್ರಾಥಮಿಕ ಹಕ್ಕು ರಕ್ಷಿಸುವುದರಲ್ಲಿ ಸಹ ವಿಫಲವಾಯಿತು. ಒರಿಸ್ಸಾದಲ್ಲಿ ಒಂದೇ ಜಿಲ್ಲೆಯಲ್ಲಿ 40 ಸಾವಿರ ಅಲ್ಪಸಂಖ್ಯಾತರನ್ನು ನಿರಾಶ್ರಿತ ಶಿಬಿರಗಳಿಗೆ ತಳ್ಳಿದ ದಾಳಿಗಳು ನಡೆದವು.



ಕರ್ನಾಟಕದ ದಾವಣಗೆರೆಯಲ್ಲಿ ಚರ್ಚ್‌ಗೆ ಹೋಗಬಯಸುವ ಕ್ರಿಶ್ಚಿಯನ್ನರು ವ್ಯಕ್ತಿಗತ ಪ್ರಮಾಣ ಪತ್ರ ಕೊಡಬೇಕೆಂದು ಚರ್ಚ್‌ಗಳ ಮೇಲಿನ ದಾಳಿಗಳ ಕುರಿತ ವಿಚಾರಣಾ ಆಯೋಗದ ಅಧ್ಯಕ್ಷರು ಆದೇಶಿಸಿದ್ದಾರೆ. ಸಂವಿಧಾನದಲ್ಲಿ ಇದನ್ನು ಹೇಳಿಲ್ಲ. ಇದನ್ನು ಒಪ್ಪಲಾಗದು. ಯಾವ ರಾಜಕೀಯ ಪಕ್ಷ ಮತ್ತು ಶಕ್ತಿಗಳು ಕ್ರಿಶ್ಚಿಯನ್ನರು ವಿದೇಶಗಳಿಂದ ಹಣ ಪಡೆಯುತ್ತಿದ್ದಾರೆ, ಅದಕ್ಕೆ ದಾಳಿ ಮಾಡುತ್ತೇವೆ ಎನ್ನುತ್ತಾರೋ ಅವರೇ ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳನ್ನು ಇಲ್ಲಿಗೆ ಜನರನ್ನು ಶೋಷಿಸಲು ಆಹ್ವಾನಿಸುತ್ತಾರೆ. ಒರಿಸ್ಸಾ, ಕರ್ನಾಟಕ, ಮಹಾರಾಷ್ಟ್ರ, ಉತ್ತರ ಪ್ರದೇಶ, ಆಂಧ್ರ ಮುಂತಾದ ರಾಜ್ಯಗಳಲ್ಲಿ ರಾಜಕೀಯ ಲಾಭಕ್ಕಾಗಿ ವಿಭಜನಾಕಾರಿ ರಾಜಕೀಯ ತಂತ್ರವನ್ನು ಅನುಸರಿಸ ಲಾಗುತ್ತಿದೆ. ಕೋಮುಗಳ ಆಧಾರದಲ್ಲಿ ವಿಭಜನೆ ತರುವವರು ದೇಶ ವಿರೋಧಿಗಳು.

ಮುಂದಿನ ಲೋಕಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಜನಗಳ ನಡುವೆ ಕೋಮುದ್ವೇಷ ಹರಡಿ ಜನರನ್ನು ವಿಭಜಿಸಲಾಗುತ್ತಿದೆ. ಈ ಬಗೆಗೆ ಜನತೆ ಎಚ್ಚರ ವಹಿಸಬೇಕು. ಮುಂಬೈನ ಭಯೋತ್ಪಾದಕ ದಾಳಿಗೂ ಕೋಮು ವಾದಕ್ಕೂ ಸಂಭವಿದೆ. ಭಯೋತ್ಪಾದನೆ, ಕೋಮುವಾದ ಎರಡರ ವಿರುದ್ಧವೂ ಹೋರಾಟ ಸಾಗಬೇಕು. ಮುಂಬೈನ ಭೀಕರ ಭಯೋತ್ಪಾದಕ ದಾಳಿಯು ಪಾಕಿಸ್ತಾನದಿಂದ ಬಂದ 10 ಯುವಕರ ಕೃತ್ಯ ಎನ್ನುವುದು ಸ್ಪಷ್ಟವಾಗಿದೆ. ಈ ಬಗ್ಗೆ ಪಾಕಿಸ್ತಾನಕ್ಕೆ ಆಧಾರ ಒದಗಿಸಿ ಭಯೋತ್ಪಾದನೆ ವಿರುದ್ಧ ಕ್ರಮ ವಹಿಸಲು ಒತ್ತಡ ತರಬೇಕು. ಪಾಕಿಸ್ತಾನ ಸೂಕ್ತ ಕ್ರಮ ವಹಿಸದಿದ್ದರೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಗೆ ವಿಷಯವನ್ನು ಕೊಂಡೊಯ್ಯಬೇಕು. ರಷ್ಯಾ, ಚೀನಾ, ಜರ್ಮನಿ, ಫ್ರಾನ್ಸ್, ಮುಂತಾದ ಹಲವು ದೇಶಗಳು ಇರುವ ಭದ್ರತಾ ಮಂಡಳಿಗೆ ದೂರು ಒಯ್ಯುವುದೇ ಈ ವಿಷಯದಲ್ಲಿ ಸರಿಯಾದ ಕ್ರಮ.

ವಿಶ್ವ ಸಂಸ್ಥೆ ಭಯೋತ್ಪಾದನೆಯ ಕುರಿತು ಸಮಗ್ರವಾದ ನಿರ್ಣಯವನ್ನು ಅಂಗೀಕರಿಸಿದೆ. ಭಯೋತ್ಪಾದನೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಪಾಕಿಸ್ತಾನಕ್ಕೆ ಕಟ್ಟಪ್ಪಣೆ ಮಾಡುವ ಅಧಿಕಾರ ವಿಶ್ವ ಸಂಸ್ಥೆಗಿದೆ. ಆದರೆ ಕೇಂದ್ರ ಸರ್ಕಾರ ಅದನ್ನು ಬಿಟ್ಟು ತನ್ನ ಯುದ್ಧ ಮಿತ್ರ ಅಮೇರಿಕಾದ ಸಹಾಯ ಯಾಚಿಸುತ್ತಿದೆ ಇರಾಕ್ ಅಫಘಾನಿಸ್ತಾನಗಳ ಮೇಲೆ ದಾಳಿ ಮಾಡಿದ್ದು, ಜಗತ್ತಿನೆಲ್ಲೆಡೆ ಭಯೋತ್ಪಾದನೆಯನ್ನು ಅಮೇರಿಕಾ. ಇಂಥ ಅಮೇರಿಕಾದ ಹೆಗಲ ಮೇಲಿನಿಂದ ಭಯೋತ್ಪಾದನೆ ವಿರುದ್ಧ ಹೋರಾಟ ನಡೆಸುವುದು ಸಾಧ್ಯವಿಲ್ಲ.

ತಮ್ಮನ್ನು ಬಾರಿ ರಾಷ್ಟ್ರೀಯವಾದಿಗಳೆಂದು ಕರೆದುಕೊಳ್ಳುವ ನಾಟಕವಾಡುತ್ತಿರುವ ಬಿಜೆಪಿಯು ಕಾಂಗ್ರೆಸ್‌ನ ದೇಶ ವಿರೋಧಿ ಆರ್ಥಿಕ ನೀತಿಗಳಿಗೆ ಬೆಂಬಲ ನೀಡುತ್ತಿದೆ. ವಿಮಾ ರಂಗದಲ್ಲಿ ವಿದೇಶಿ ಬಂಡವಾಳದ ಮಿತಿಯನ್ನು 26 ರಿಂದ ಶೇ.49ರಷ್ಟಕ್ಕೆ ಏರಿಸುವ ಈಗಿನ ಯುಪಿಎ ಸರ್ಕಾರದ ಯತ್ನಕ್ಕೆ ಬಿಜೆಪಿ ಪಾರ್ಲಿಮೆಂಟ್‌ನಲ್ಲಿ ಬೆಂಬಲ ನೀಡುತ್ತಿದೆ ಹಾಗೂ ಈ ಯತ್ನ ಆರಂಭವಾದದ್ದೇ ವಾಜಪೇಯಿಯವರ ಸರ್ಕಾರದ ಅವಧಿಯಲ್ಲಿ. ಅದೇ ರೀತಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಶೇ.74 ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶ ನೀಡುವ ಅಪಾಯಕಾರಿ ನೀತಿಯನ್ನು ವಾಜಪೇಯಿ ಸರ್ಕಾರ ಸೂಚಿಸಿತ್ತು. ಈಗ ಅದನ್ನು ಜಾರಿ ಮಾಡುವ ಪ್ರಯತ್ನ ನಡೆದಿದೆ. ಸೂಕ್ಷ್ಮ ಹಣಕಾಸು ರಂಗವನ್ನು ಮುಕ್ತವಾಗಿ ತೆರೆದಿಡುವ ನೀತಿಗಳನ್ನು ತರುವ ಯತ್ನ ಸಾಗಿದೆ. ಅಮೇರಿಕಾದಲ್ಲಿ ಏನಾಗುತ್ತಿದೆ. ದೇಶದ ಬಹುದೊಡ್ಡ ಬ್ಯಾಂಕ್, ವಿಮಾ ಸಂಸ್ಥೆಗಳು ದಿವಾಳಿಯಾಗಿವೆ. ಇವರಿಗೆ ನಾಚಿಕೆಯಿಲ್ಲ. ಎಡಪಕ್ಷಗಳು ಮಾತ್ರ ಈ ದೇಶವಿರೋಧಿ ನೀತಿಗಳನ್ನು ದೃಢವಾಗಿ ವಿರೋಧಿಸಿದವು.

ಭಯೋತ್ಪಾದನೆಯು ಪಿಡುಗು ದೇಶವನ್ನು ಕಾಡುತ್ತಿದೆ. ದೇಶದೆಲ್ಲೆಡೆ ಸ್ಫೋಟಗಳು ನಡೆಯುತ್ತಿವೆ. ಸಮಾಜದಲ್ಲಿ ಕೋಮುವಾದಿ ವಿಭಜನೆಗಳು, ದ್ವೇಷ, ಉಗ್ರಗಾಮಿತನಕ್ಕೆ ಕಾರಣವಾಗಿದೆ. ಕೆಲವು ಮುಸ್ಲಿಂ ಯುವಕರು ಸರಣಿ ಬಾಂಬ್ ಸ್ಫೋಟಗಳನ್ನು ನಡೆಸಿದ್ದಾರೆ. ಆದರೆ ಈ ಸಂದರ್ಭದಲ್ಲಿ ಆರೆಸ್ಸೆಸ್ ಅದನ್ನು ಇಸ್ಲಾಮಿಕ್ ಭಯೋತ್ಪಾದನೆ ಎಂದು ಎಲ್ಲೆಡೆ ಪ್ರಚಾರ ನಡೆಸಿತು. ಆದರೆ ಇವರ ಮುಖ ಬಹಳ ಬೇಗ ಬಯಲಾಯ್ತು.

ಇದೀಗ ಬಹಿರಂಗವಾಗಿರುವ ಮಾಲೆಗಾಂವ್ ಸ್ಫೋಟ, ಹೈದರಾಬಾದ್‌ನ

ಮಕ್ಕಾ ಮಸೀದಿ ಸ್ಫೋಟ ರಾಜಸ್ಥಾನದ ಅಜ್ಮೀ ಬಾಂಬ್ ಸ್ಫೋಟ, ಹೀಗೆ ವಿವಿಧ ಪ್ರಕರಣಗಳಲ್ಲಿ ಹಿಂದುತ್ವ ಸಂಘಟನೆಗಳ ಪಾತ್ರವಿರುವುದು ಬ...ಲಾಗಿದೆ. ಅಕ್ಟೋಬರ್ 30 ರಂದು ಅಸ್ಸಾಂನಲ್ಲಿ ನ...ದ ಸರಣಿ ಬಾಂಬ್ ಸ್ಫೋಟಗಳಲ್ಲಿ 89 ಜನ ಸತ್ತರು. 'ಉಲ್ಫಾ' ಸಂಘಟನೆಯ ಯುವಕರು ಈ ಕೃತ್ಯ ನಡೆಸಿದವರು. ಹೀಗಾಗಿ ಭಯೋತ್ಪಾದನೆಯನ್ನು ಯಾವುದೇ ಒಂದು ಧರ್ಮಕ್ಕೆ ಅಂಟಿಸಬಾರದು. ಹಿಂದೂ ಭಯೋತ್ಪಾದನೆಯನ್ನು ಬಿಜೆಪಿ ನಿರ್ಲಕ್ಷಿಸುತ್ತಿದೆ ಹಾಗೂ ಮರೆಮಾಚಲು ಪ್ರಯತ್ನಿಸುತ್ತಿದೆ. ಅದು ತಪ್ಪು. ಕಾಂಗ್ರೆಸ್ ತನ್ನನ್ನು ಸೆಕ್ಯುಲರ್ (ಜಾತ್ಯಾತೀತ) ಎಂದು ಹೇಳಿಕೊಳ್ಳುತ್ತದೆ. ಆದರೆ ಕಾಂಗ್ರೆಸ್ ಜಾತ್ಯಾತೀತತೆಯನ್ನು ರಕ್ಷಿಸುವಲ್ಲಿ ವಿಫಲವಾಗಿದೆ. ಕ್ರಿಶ್ಚಿಯನ್ನರ ಮೇಲೆ ಒರಿಸ್ಸಾದಲ್ಲಿ ಮಂಗಳೂರು ಮುಂತಾದೆಡೆ ದಾಳಿ ನಡೆಯುವುದನ್ನು ತಡೆಯಲು ಸೂಕ್ತ ಕ್ರಮ ವಹಿಸಲಿಲ್ಲ. ಕಾಂಗ್ರೆಸ್‌ಗೆ ಧೈರ್ಯ ಇಲ್ಲ. ಯುಪಿಎ ಸರ್ಕಾರವನ್ನು ಹಾಗೂ ಕಾಂಗ್ರೆಸ್‌ನ್ನು ನಂಬಲಾಗದು. ಸೌಹಾರ್ದ ...ಟಕವು ಕರ್ನಾಟಕದಲ್ಲಿ ಜಾತ್ಯಾತೀತರನ್ನು ಅಣಿ ...ವ ವೇದಿಕೆಯಾಗಲಿ.

ದೇಶ ಹಾಗೂ ಕರ್ನಾಟಕಗಳಲ್ಲಿ ಮುಂದಿನ ದಿನಗಳಲ್ಲಿ ಗಂಭೀರ ಸಮಸ್ಯೆಗಳು ಎದುರಾಗಲಿವೆ. ಅಮೇರಿಕಾ, ಫ್ರಾನ್ಸ್, ಬ್ರಿಟನ್ ಮುಂತಾದ ದೇಶಗಳಲ್ಲಿ ಈಗಾಗಲೇ ಉದ್ಯೋಗಗಳು ನಾಶವಾಗುತ್ತಿವೆ. ಕೈಗಾರಿಕೆಗಳು ಮುಚ್ಚುತ್ತಿವೆ. ಲೇಆಫ್ (ಉತ್ಪಾದನಾ ಸ್ಥಗಿತ) ವ್ಯಾಪಕವಾಗುತ್ತಿದೆ. ಕೃಷಿ ಬಿಕ್ಕಟ್ಟು ತಲೆದೋರುತ್ತಿದೆ. ಕೃಷಿ ಉತ್ಪನ್ನಗಳ ಬೆಲೆ ಕುಸಿತ, ಮುಂತಾಗಿ ಸಮಸ್ಯೆಗಳು ಎದ್ದು ಬರಲಿವೆ. ಈ ಪರಿಸ್ಥಿತಿಯನ್ನು ನಿಬಾಯಿಸಲು ಸರ್ಕಾರ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡಬೇಕು. ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸಬೇಕು. ಉತ್ಪಾದನೆಯನ್ನು ಹೆಚ್ಚಿಸಬೇಕು. ...ತರು, ಕೂಲಿಕಾರರು, ಕುಶಲಕರ್ಮಿಗಳನ್ನು ...ಬೇಕು. ಆದರೆ ಈ ಪರಿಸ್ಥಿತಿಯಲ್ಲಿ ಸರ್ಕಾರ ...ತರ ಧಾನ್ಯ ಕಡಿತ ಮಾಡುತ್ತಿದೆ. ಜನರಿಗೆ ಅಗತ್ಯ ...ರ ಧಾನ್ಯವನ್ನು ನೀಡುತ್ತಿಲ್ಲ. ಕನಿಷ್ಠ ಕೂಲಿ ಜಾರಿ ...ಗೆಗೆ ಕ್ರಮ ವಹಿಸುತ್ತಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಕೋಮುವಾದಿ ಶಕ್ತಿಗಳು ...ನರನ್ನು ವಿಭಜಿಸದಂತೆ, ಎಚ್ಚರವಹಿಸಬೇಕು. ...ಹಾರ್ದ ಕರ್ನಾಟಕದ ಮೂಲಕ ಈಗ ...ಾಡಿರುವ ಪ್ರಯತ್ನ ಹೋರಾಟ ...ುಂದುವರಿಯುತ್ತದೆ ಎಂಬ ಭರವಸೆ ನನಗಿದೆ. ...ಭಿನಂದನೆಗಳು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ...ದಸ್ಯರೂ ಬಸವಕಲ್ಯಾಣದಿಂದ ಹೊರಟ ಜಾಥಾದ ...ುಖಂಡರಲ್ಲಿ ಒಬ್ಬರಾದ ಕೆ.ನೀಲಾ ದೊರೆತ ...ಪೂರ್ವ ಜನ ಬೆಂಬಲದ ಕುರಿತು ವಿವರಿಸಿದರು.

ವಿಷವನಿಳುಹಬಲ್ಲವನೇ ಗಾರುಡಿಗ

-ಕೆ.ನೀಲಾ

ಸೌಹಾರ್ದತೆ, ಕೂಡಿ ಬಾಳ ಬೇಕೆನ್ನುವ ...ನಸ್ಸು. ಜನರ ನಡುವೆ ಹಾಸು ಹೊಕ್ಕಾಗಿದೆ. ...ಸಾ ಬಂದೇ ನವಾಜ್ ದರ್ಗಾ, ಉತ್ಸವಕ್ಕೆ ಶರಣ ...ಪ್ಪ ಅಪ್ಪಾ ಅವರ ಮಠದಿಂದ ಪ್ರಸಾದ ...ುವುದು ಮುಂತಾದ ಹಲವು ಸೌಹಾರ್ದ ...ಸ್ಕೃತಿಯ ಪರಂಪರೆಯ ಆಚರಣೆಗಳ ಕುರಿತು ಜನರ ಮುಂದೆ ಪ್ರಸ್ತಾಪಿಸಿದಾಗ ಜನತೆ ಅದನ್ನು ಮನಸಿಟ್ಟು ಆಲಿಸಿ ಒಪ್ಪಿ ಮೆಚ್ಚುಗೆಯಿಂದ ಹೌದು ಹೌದು ಎಂದು ಹೇಳುತ್ತಿದ್ದ ವಿಚಾರವನ್ನು ಕೆ.ನೀಲಾ ಸಭೆಯ ಜನರ ಮುಂದು ಬಿಡಿಸಿಟ್ಟರು.

ಬೆಂಗಳೂರಿನ ಕುರುಬರಹಳ್ಳಿಯಲ್ಲಿ ನಡೆಸಿದಂತೆ ರಾಜ್ಯದ ಬೇರೆ ಬೇರೆ ಕಡೆ ದಾಳಿ ನಡೆಸಲು ಕೋಮುವಾದಿಗಳು ಯೋಜನೆ ಮಾಡಿದ್ದರು. ಆದರೆ ಸೌಹಾರ್ದ ಜಾಥಾದ ಸಭೆಗಳಿಗೆ ನೆರೆದ ಸಾವಿರ ಸಾವಿರ ಜನರನ್ನು ನೋಡಿ ಅವರು ಹಿಮ್ಮೆಟ್ಟಿದರು. ಅವರಿಗೆ ದಾಳಿ ಮಾಡಲು ಧೈರ್ಯ ಬರಲಿಲ್ಲ. ಎಂದ ನೀಲಾ ಜನರ ಹೊಟ್ಟೆ ತುಂಬಿಸುವುದೇ ನಿಜವಾದ ಧರ್ಮ, ಬಿಜೆಪಿ, ಕಾಂಗ್ರೆಸ್ ಸರ್ಕಾರಗಳು ರೇಷನ್ ಕಾರ್ಡ್ ಕೊಟ್ಟಿಲ್ಲದಿರುವುದು ಖಂಡನಾರ್ಹ. ಈ ನೆಲದಲ್ಲಿ ಹುಟ್ಟಿದ್ದೇವೆ. ಅಲ್ಲಾಹು, ಈ ನೆಲದಲ್ಲೇ ಸಾವು ಕೊಡು ಎಂದ ಮುಸ್ಲಿಂ ಬಂಧುಗಳು



ಅಸ್ಪೃಶ್ಯತೆಯ ನೋವನ್ನು ಬಿತ್ತಿರುವ ಮಾದಿಗ ಮಹಿಳೆಯೊಬ್ಬರು, ಜಾಥಾ ವಿಚಾರಗಳಿಂದ ಸ್ಫೂರ್ತಿಗೊಂಡು 'ನಮ್ಮ ಕೇರಿಗೆ ಬನ್ನಿ' ಎಂದು ಆಹ್ವಾನಿಸಿದ ಅನುಭವ ಹೀಗೆ ತಮ್ಮ ವಿಶಿಷ್ಟ ಅನುಭವಗಳನ್ನು ನೀಲಾ ನೆರೆದವರ ಮುಂದೆ ತೆರೆದಿಟ್ಟರು.

ಪೂರ್ಣ ಕರ್ನಾಟಕ ಕೋಮುವಾದಿಗಳ ಕೈ ಸೇರಿಲ್ಲ

-ಮಾರುತಿ ಮಾನ್ಪಡೆ

ಚಪ್ಪಲಿ ಹೊಲೆಯುವ ಲಕ್ಷ್ಮಮ್ಮ ಜಾಥಾಗೆ ತನ್ನ ಕಾಣಿಕೆ ನೀಡಿ ಸಂತಸಪಟ್ಟಿದ್ದು, ದನದ ಮಾಂಸದ ವಿಚಾರದಲ್ಲಿ ಅಲ್ಪಸಂಖ್ಯಾತರು, ದಲಿತರು ಮತ್ತಿತರ ಆಹಾರ ಹಕ್ಕಿನ ಮೇಲೆ ದಾಳಿ ಮಾಡುತ್ತಿರುವ ಸಂಘ ಪರಿವಾರ ದಾಳಿಯನ್ನು ಪ್ರಸ್ತಾಪಿಸಿದಾಗ ಜನರಿಂದ ದೊರೆತ ಸ್ಪಂದನ, ಇತ್ಯಾದಿ ವಿವರಿಸಿದ ಅವರು ಬಾಬಾಬುಡನ್‌ಗಿರಿ ಜಾಥಾದ ಮುಖಂಡರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಮಾರುತಿ ಮಾನ್ಪಡೆಯವರು. ಕರ್ನಾಟಕವೂ ಪೂರ್ತಿಯಾಗಿ ಕೋಮುವಾದಿಗಳ ಕೈ ಸೇರಿಲ್ಲ ಎಂಬುದನ್ನು ಜಾಥಾ ತಮಗೆ ಮನವರಿಕೆ ಮಾಡಿಕೊಟ್ಟುದುದನ್ನು ಕುರಿತು ವಿವರಿಸಿದರು. ಕರ್ನಾಟಕ ಎಂದರೆ ನಿಜವಾಗಿ ಏನು ಎಂದು ನೋಡಲು ಸಾಧ್ಯವಾಗಿದೆ ಎಂದ ಮಾನ್ಪಡೆ, ಹಲವಾರು ಜಾಥಾದ ವಿಚಾರಗಳಿಂದ ಆಕರ್ಷಿತರಾದ ಜನರು, ಯುವಜನರು, ಮತ್ತು ವಿಶೇಷವಾಗಿ ಮುಸ್ಲಿಂ ಯುವಕರು ಎಡ ಚಳುವಳಿಯ ಬಗೆಗೆ ಒಲವು ತೋರಿದ್ದನ್ನು ಕುರಿತು ವಿವರಿಸಿದರು.

ಭಯೋತ್ಪಾದನೆಯ ಅಪ್ಪ-ಅಮ್ಮ ಇಬ್ಬರೂ ಬಿಜೆಪಿಯವರೇ

- ಜಿವಿ.ಶ್ರೀರಾಮರೆಡ್ಡಿ

ಮಾಜಿ ಶಾಸಕರು, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡಿ, ಭಯೋತ್ಪಾದನೆ ಸಮಸ್ಯೆಗೆ ತಂದೆ ತಾಯಿ ಎರಡೂ ಬಿಜೆಪಿಯವರೇ, ಮಹಾತ್ಮಗಾಂಧಿಯವರನ್ನು ಕೊಂದದ್ದು 'ಅಭಿನವ ಭಾರತ' ಸಂಘಟನೆ. (ಮಾಲೆಗಾಂವ್ ಸ್ಫೋಟದ ಆರೋಪಿ ಸಾಧ್ವಿ ಪ್ರಗ್ಯಾಸಿಂಗ್ ಠಾಕೂರ್ ಇದೆ ಸಂಘಟನೆಗೆ ಸೇರಿದವರು ಹಾಗೂ ಎಬಿವಿಪಿಯ ನಾಯಕಿಯಾಗಿದ್ದವರು). ಹೀಗಾಗಿ ಬಿಜೆಪಿಗೆ ಭಯೋತ್ಪಾದನೆ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ. ಮತಾಂಧತೆ ಭಯೋತ್ಪಾದನೆ ಎರಡೂ ಒಂದೇ ನಾಣ್ಯದ ಎರಡು ಮುಖಗಳು ಎಂದರು.

1989ಕ್ಕೆ ಮೊದಲು ಭಾರತದಲ್ಲಿ ಮತಾಂಧ ಮೂಲದ ಭಯೋತ್ಪಾದನೆ ಇರಲಿಲ್ಲ. ಅಡ್ವಾನಿಯವರ ರಥಯಾತ್ರೆಯ ನಂತರ ಪ್ರಾರಂಭವಾಯಿತು. ಬಾಂಬೆ ಭಯೋತ್ಪಾದಕ ದಾಳಿಯ ನಂತರ ಪಾರ್ಲಿಮೆಂಟ್‌ನಲ್ಲಿ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಲಾಗಿದೆ. ಅದರ ಕೆಲವು ಅಂಶಗಳು ಸಂವಿಧಾನ ವಿರೋಧಿಯಾಗಿವೆ. ಆರೋಪಿಯೇ ತನ್ನ ನಿರಪರಾಧಿತನವನ್ನು ಸಾಬೀತು ಮಾಡಿಕೊಳ್ಳಬೇಕು ಎಂಬುದು ಸರಿಯಲ್ಲ. ಆರೋಪ ಹೊರಿಸಿದ ನಂತರ ಅಪರಾಧವನ್ನು ಸಾಬೀತುಪಡಿಸುವ ಹೊಣೆಗಾರಿಕೆ ಸರ್ಕಾರದ್ದು.

ಚರ್ಚ್‌ಗಳ ಮೇಲಿನ ದಾಳಿ ಸಂಬಂಧದ ವಿಚಾರಣಾ ಆಯೋಗದ ಅಧ್ಯಕ್ಷರಾದ ನ್ಯಾ.ಸೋಮಶೇಖರ್‌ಚರ್ಚ್‌ಗೆ ಹೋಗುವವರು ಪ್ರಮಾಣ ಪತ್ರ ಸಲ್ಲಿಸಬೇಕೆಂದು ಮಧ್ಯಂತರ ಆದೇಶ ಹೊರಡಿಸಿರುವುದು ತಪ್ಪು. ವಿಚಾರಣಾ ಆಯೋಗಕ್ಕೆ ಮಧ್ಯಂತರ ಆದೇಶ ಹೊರಡಿಸುವ ಅಧಿಕಾರ ಇಲ್ಲ.

ಅಸ್ಸಾಂನಲ್ಲಿ ಸರಣಿ ಬಾಂಬ್ ಸ್ಫೋಟ ನಡೆದಾಗ ಅಡ್ವಾಣಿಯವರು ಅದು ಬಾಂಗ್ಲಾದೇಶದ ಮುಸ್ಲಿಂ ಭಯೋತ್ಪಾದಕರ ದುಷ್ಕೃತ್ಯ ಎಂದರು. ಆದರೆ ಕೆಲವೇ ದಿನಗಳಲ್ಲಿ ಅದು ಉಲ್ಫಾ ಸಂಘಟನೆ ಎಸಗಿದ ದುಷ್ಕೃತ್ಯ ಎಂಬುದು ಬಯಲಾಯಿತು.

ಬಿಜಾಪುರ ಜಿಲ್ಲೆಯಲ್ಲಿ 4 ಜನ ಮುಸ್ಲಿಂ ಯುವಕರನ್ನು ಬಂಧಿಸಿ 4 ತಿಂಗಳು ಹಿಂಸೆ ನೀಡಿ ಆಮೇಲೆ ಅವರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಲಾಗಿದೆ. ಗೋಹತ್ಯೆ ಹೆಸರಿನಲ್ಲಿ ದಾಳಿ ನಡೆಸಲಾಗುತ್ತಿದೆ.

ಹಂದಿ, ಮೀನು ದೇವರಲ್ಲವೇ?

ದನ ದೇವರು ಎಂದಾದರೆ, ಹಂದಿ ದೇವರಲ್ಲವೇ? ದೇವರು ವರಾಹಾವತಾರ, ಮತ್ಸ್ಯಾವತಾರ ಎತ್ತಿದ್ದಾನೆಂದ ಮೇಲೆ ಹಂದಿ ಮೀನು ಸಹ ದೇವರಲ್ಲವೇ? ಅದನ್ನು ತಿನ್ನಬಹುದೇ? ವಸಿಷ್ಠ ಮುನಿ ಯಾಗ ನಡೆಸಿ ದನಗಳನ್ನು ಅರ್ಪಿಸಿದ್ದೆಷ್ಟು? ಶ್ರೀರಾಮ ಯಾಗ ನಡೆಸಿದಾಗ ದನಗಳನ್ನು ಬಲಿ ನೀಡಲಿಲ್ಲವೇ? ಎಂದು ಜಿ.ವಿ.ಶ್ರೀರಾಮರೆಡ್ಡಿ ಪ್ರಶ್ನಿಸಿದರು.

ರಾಜಕೀಯ ಅಧಿಕಾರಕ್ಕಾಗಿ ಗೋಹತ್ಯೆ ಇತ್ಯಾದಿ ಪ್ರಶ್ನೆ ಎತ್ತಲಾಗುತ್ತಿದೆ. ಅದು ಧರ್ಮ ರಕ್ಷಣೆಯಲ್ಲ. ಯಾರಾದರೂ ನಿಜವಾದ ಹಿಂದೂ ವಿರೋಧಿಗಳಿದ್ದರೆ ಅದು ಸಂಘ ಪರಿವಾರ. ಮತಾಂಧತೆ, ಭಯೋತ್ಪಾದನೆ ಎರಡು ದೆವ್ವಗಳು. ಈ ಕೇಂದ್ರ ಸರ್ಕಾರವು ಅಧಿಕಾರಕ್ಕಾಗಿ ಪಾಕಿಸ್ತಾನದ ವಿರುದ್ಧ ಯುದ್ಧ ಘೋಷಿಸುವ, ಅಪಾಯವಿದೆ. ಜನ ಇದಕ್ಕೆ ಅವಕಾಶ ನೀಡಬಾರದು. ಸಿಪಿಐ(ಎಂ) ಕೋಮುವಾದ ಭಯೋತ್ಪಾದನೆ ವಿರುದ್ಧ ಹೋರಾಟದಲ್ಲಿ ಅಪಾರ ತ್ಯಾಗ ಬಲಿದಾನ ಮಾಡಿದೆ. ಈ ಹೋರಾಟವನ್ನು ಮುಂದುವರೆಸುತ್ತದೆ. ಎಂದು ಅವರು ಘೋಷಿಸಿದರು.

ಭಯೋತ್ಪಾದಕರನ್ನು ಬಹಿಷ್ಕರಿಸೋಣ

- ರಜ್ವಿ

ಮಾಜಿ ಕಾರ್ಯದರ್ಶಿ ಕರ್ನಾಟಕ ಅಲ್ಪಸಂಖ್ಯಾತ ಆಯೋಗ

ನಾನು ಬಹಳ ವಿಚಾರಪೂರ್ಣ ವಾದ ಮಾತುಗಳನ್ನು ಈ ಬಹಿರಂಗ ಸಭೆಯಲ್ಲಿ ಕೇಳಿದೆ. ಕೋಮುವಾದ ಭಯೋತ್ಪಾದನೆಗೆ ಯಾವುದೇ ಧರ್ಮದ ಬೆಂಬಲವಿಲ್ಲ. ಭಯೋತ್ಪಾದನೆಯನ್ನು ಬೆಂಬಲಿಸುವುದನ್ನು ಯಾರೇ ಆದರೂ ಸಹಿಸುವುದು ಸಾಧ್ಯವಿಲ್ಲ. ಭಯೋತ್ಪಾದನೆಯನ್ನು ನಾವೆಲ್ಲಾ ತೀವ್ರವಾಗಿ ಖಂಡಿಸುತ್ತೇವೆ. ಭಯೋತ್ಪಾದನೆಗೆ ಯಾರೆಲ್ಲಾ ಬೆಂಬಲ ನೀಡುವರೋ ಅವರನ್ನು ಬಹಿಷ್ಕರಿಸೋಣ. ಹೋರಾಟ ಮುಂದುವರೆಯಲಿ.

ಬಹು ವೈವಿಧ್ಯತೆಯ ನಾಡು...

- ಜಿ.ಎನ್.ನಾಗರಾಜ್

ಇತರೆಲ್ಲಾ ಜಾಥಾಗಳು ವೇದ ವಿರೋಧಿಯಾದ ವಚನ ಚಳುವಳಿಯ ಕೇಂದ್ರ, ಸೂಫಿ ಪರಂಪರೆಯ ದರ್ಗಾ, ಮುಂತಾದ ಕಡೆ ಉದ್ಘಾಟನೆಗೊಂಡಿವೆ. ಗೋಕರ್ಣದಿಂದ ಹೊರಟ ಸೌಹಾರ್ದ ಜಾಥಾ ಉದ್ಘಾಟನೆಯಾದದ್ದು ಬ್ರಾಹ್ಮಣ ಸಭಾ ಭವನವೊಂದರಲ್ಲಿ. ಗೋಕರ್ಣ ಒಂದು ಹಿಂದೂ ದೇವಸ್ಥಾನ. ಏಕೆಂದರೆ ಸಂಘ ಪರಿವಾರ ಕೇವಲ ಮುಸ್ಲಿಂ, ಕ್ರಿಶ್ಚಿಯನ್ನರ ಪೂಜಾ ಸ್ಥಳಗಳ ಮೇಲೆ ಮಾತ್ರವೇ ದಾಳಿ ಮಾಡುತ್ತಿಲ್ಲ. ಹಿಂದೂ ಪೂಜಾ ಸ್ಥಳಗಳ ಮೇಲೆ ಎರಗಿದೆ. ಗೋಕರ್ಣ ದೇವಾಲಯವನ್ನು ಸಂಘ ಪರಿವಾರಕ್ಕೆ ಹತ್ತಿರದ

ಪುಟ 12ಕ್ಕೆ

ಸೌಹಾರ್ದ ಕರ್ನಾಟಕ ಜಾಥಾದಲ್ಲಿ ಜನಮನಗೆದ್ದ ನಾಟಕ

ಸಾರೇ ಜಂಹಾಂಸೆ ಅಚ್ಚಾ...

"ಸಾರೇ ಜಂಹಾಸೇ ಅಚ್ಚಾ
ಹಿಂದುಸ್ತಾನ್‌ಹಮಾರಾ"

ಹುಚ್ಚನು ಎರಡು ಕೈಗಳಿಂದ ಭಾರತದ ಬಾವುಟವನ್ನು ಎತ್ತಿ ಹಿಡಿದು ಭಗತ್‌ಸಿಂಗ್ ಪುತ್ಥಳಿಯ ಕೈಗಿಟ್ಟು, ಎಡಗೈಯನ್ನು ಹಣೆಗಿಟ್ಟು ಸೆಲ್ಯೂಟ್ ಮಾಡಿ ಮೇಲಿನ ಹಾಡು ಹಾಡತೊಡಗಿದನು. ಸುತ್ತೆಲ್ಲ ಬಿದ್ದುಕೊಂಡ ವಿವಿಧ ಧರ್ಮದವರು ಒಬ್ಬೊಬ್ಬರಾಗಿ ಎದ್ದು ಸಾವರಿಸಿಕೊಂಡು ನೋಡುತ್ತಾರೆ. ಮುಗಿಲಗಲಕ್ಕೂ ಭಾರತದ ಬಾವುಟ ಫಡಫಡಿಸುತ್ತಿದೆ. ಧಾರ್ಮಿಕ ನಂಬಿಕೆಯ ಮಿತಿಯ ಪರದೆ ಸರಿಸಿ ಅವರ ಕೈಗಳು ತಂತಾನೇ ಐಕ್ಯ ಭಾರತಕ್ಕೆ ಮಣಿದು ವಂದನೆ ಹೇಳಿದವು. ನೆರೆದ ಜನಸ್ತೋಮವು ಮುಗಿಲು ಮುಟ್ಟುವಂತೆ ಚಪ್ಪಾಳೆ ಸುರಿಮಳೆ ಗರೆಯಿತು. ಭಗತ್‌ಸಿಂಗ್ ಬಾವುಟಯೆತ್ತಿ 'ಇನ್‌ಕ್ವಿಲಾಬ್ ಜಿಂದಾಬಾದ್' 'ಸೌಹಾರ್ದ ಕರ್ನಾಟಕ ಚಿರಾಯುವಾಗಲಿ' ಘೋಷಣೆ ಮೊಳಗಿಸುತ್ತಾನೆ ಜನರೂ ದನಿಗೂಡಿಸುತ್ತಾರೆ.

ಹೌದು, ಬಸವಕಲ್ಯಾಣದಿಂದ ಹೊರಟ ಸೌಹಾರ್ದ ಜಾಥಾದ ಸಾಂಸ್ಕೃತಿಕ ತಂಡದವರು ಪ್ರಸ್ತುತ ಪಡಿಸುವ ಕಿರುನಾಟಕವಿದು. ಕೋಮುವಾದಿಗಳು ಸಾಂಸ್ಕೃತಿಕ ಲೋಕದ ಮೂಲಕವೇ ಜನರ ಮನಸಿನೊಳಗಿಳಿದು ಒಡಕುಂಟು ಮಾಡುವ ಹುನ್ನಾರ ಹೆಣೆದಿರುವಾಗ, ಸಾಮರಸ್ಯಕ್ಕಾಗಿ ಸೌಹಾರ್ದತೆಗಾಗಿ ನಾವು ಸಹ ಪರ್ಯಾಯ ಸಾಂಸ್ಕೃತಿಕ ಸಾಧ್ಯತೆಗಳನ್ನು ಕಟ್ಟಿಕೊಡುವಲ್ಲಿ ನಮ್ಮ ಜಾಥಾ ಪರಿಣಾಮಕಾರಿ ಕೆಲಸ ಮಾಡಿದೆ.

ಮೊದಲೆರಡು ಭಾವೈಕ್ಯತೆಯ ಹಾಡುಗಳೂ. ಮತ್ತೊಂದು 'ಹಸಿವಿನ ಪ್ರಶ್ನೆಯ ಹಾಡು, ಮಗದೊಂದು ಐಕ್ಯತೆಯ ಹಾಡು. ಭಾಷಣ, ಅಷ್ಟೊತ್ತಿಗಾಗಲೇ ಸಭೆಯಲ್ಲಿ ನೆರೆದ ಜನತೆಯು ಕ್ರಮೇಣ ಜಾತ್ಯಾತೀತ ಮೌಲ್ಯಗಳತ್ತ ಕೂಡಿ ಬಾಳುವತ್ತ ಚಿಂತನೆಗೆ ತೊಡಗಿರುತ್ತಾರೆ ಮತ್ತು ಈಗಾಗಲೇ ಕೂಡಿ ಬಾಳುತ್ತಿರುವ ಅವರೊಳಗಿನ ಬದುಕು ಎಳೆಗಳು ಮತ್ತಷ್ಟು ಬಲಗೊಳ್ಳುತ್ತಿರುವಾಗಲೇ 'ಐಕ್ಯತೆ ಅಥವಾ ಹಿಂದೂ-ಮುಸ್ಲಿಂ-ಸಿಖ್-ಇಸಾಯಿ ಹಮ್, ಸಬ್ ಹೈ ಭಾಯಿ-ಭಾಯಿ' ಎಂಬ ನಾಟಕವು ವೇದಿಕೆಯ ಮೇಲೆ ಅನಾವರಣಗೊಳ್ಳುತ್ತದೆ.

ಏನು ಹೇಳುತ್ತದೆ ನಾಟಕ?

ಕಾಡಿನಲ್ಲೊಂದು ಅದ್ಭುತ ಜೀವಂತ ಕಲ್ಲು. ಎತ್ತರ-ಅಗಲದ ಕಲ್ಲು. ಹೇಗೆ ಮಾಡಿದರೆ ಹಾಗಾಗುವ ಕಲ್ಲು. ಮೊದಲಿಗೊಬ್ಬ ವೈದಿಕ ಬಂದ. ಚಕಿತಗೊಂಡ. ಕಲ್ಲು ಕಡೆದು ಕೃಷ್ಣಮೂರ್ತಿ ಮಾಡಿ ಹರೆ ರಾಮ್ ಹರೇ ಕೃಷ್ಣ... ಹೇಳಿ ಭಕ್ತಿಯಿಂದ ಸಾಷ್ಟಾಂಗವೆರಗಿ ನಿರ್ಗಮಿಸಿದ. ಅದೇ ದಾರಿಯಲ್ಲೊಬ್ಬ ಕ್ರೈಸ್ತ ಬಂದ ಅದೇ ಮೂರ್ತಿಯನ್ನು ಕಡೆದು 'ಏಸು' ಮಾಡಿ ಪ್ರಾರ್ಥನೆ ಗೈದು ಮರಳಿದ. ಹಿಂದೆಯೇ ಮುಸ್ಲಿಂ ಒಬ್ಬ ಬಂದು ಕುರಾನ್ ಪಠಣದ ಆಕೃತಿಗೊಳಿಸಿ ನಮಾಜ್ ಮಾಡಿ ಹೊರಟ. ಸಿಖ್‌ನೂ ಅದೇ ಮಾರ್ಗದಲ್ಲಿ ಬಂದು ಆ ಮೂರ್ತಿಯನ್ನು ರೂಪಾಂತರಿಸಿ 'ವಾಹೇ ಗುರು' ಕೆತ್ತಿ ನಮಸ್ಕರಿಸಿ ಹೋದ. ಮರು ಹಿಂದೆಯೇ ಮೊದಲಿನ ವೈದಿಕ. ಆ ನಂತರ ಕ್ರೈಸ್ತ, ಮುಸ್ಲಿಂ-ಸಿಖ್ ಒಬ್ಬರಾದ ಮೇಲೊಬ್ಬರು ಬಂದು ತಾವು ಕಟೆದ ತಮ್ಮ ದೇವರ ವಿಗ್ರಹವು ಹೀಗೆ ಪರಧರ್ಮದವರ ಸೊತ್ತಾಗಿ ಬದಲಾಗಿದ್ದರಿಂದ ಪರಸ್ಪರ ಕಿತ್ತಾಡಿ ಆ ವಿಗ್ರಹವನ್ನು ತಮ್ಮ ಆರಾಧ್ಯ ದೇವರನ್ನು ಮಾಡಲಿಕ್ಕೋಸ್ಕರ ಹೆಣಗುತ್ತಾರೆ. ಹೊಡೆದಾಟ - ಬಡಿದಾಟ ನಡೆಯುತ್ತದೆ.

ಇದೆಲ್ಲವನ್ನು ನೋಡುತ್ತಾ ಕೂತಿದ್ದ ಅಲ್ಲೊಬ್ಬ ಹುಚ್ಚ. ಇವರ ಕಿತ್ತಾಟದಿಂದ ಧಾರ್ಮಿಕ ಹೊಡೆದಾಟದಿಂದ ವಿರೂಪಗೊಂಡ ಮೂರ್ತಿ ಮತ್ತು ಧಾರ್ಮಿಕ ದುರಾಭಿಮಾನಿಗಳ ಜಗಳ ಕಂಡು ಹುಚ್ಚನಿಗೆ ಭಯಂಕರ ಸಿಟ್ಟು ಬಂದು, ತನ್ನ ಶಕ್ತಿಯನ್ನು ಒಗ್ಗೂಡಿಸಿ ಕಿತ್ತಾಡುವವರ ಮೇಲೆರಗುತ್ತಾನೆ. ಎಲ್ಲರೂ ನೆಲಕ್ಕುರುಳುತ್ತಾರೆ. ಪ್ರಜ್ಞೆ ತಪ್ಪುತ್ತಾರೆ. ಹುಚ್ಚ ಮೂರ್ತಿಯ ಅವಸ್ಥೆ ಕಂಡು ಕಣ್ದುಂಬಿ ಬಿಕ್ಕುತ್ತಾನೆ. ತಮ್ಮ ತಮ್ಮ ಧರ್ಮಕ್ಕಾಗಿ ಕಿತ್ತಾಡಿ ಸುಂದರ ಕಲ್ಲನ್ನು ವಿರೂಪಗೊಳಿಸಿದ್ದಕ್ಕೆ ನೋಯುತ್ತಾನೆ. ಈ ಕಿತ್ತಾಟ ನಿಲ್ಲಬೇಕೆಂದು ಬಯಸುತ್ತಾರೆ.

ಅದಕ್ಕಾಗಿ ತಾನೇ ಆಲೋಚನೆ ಮಾಡಿ, ಅಸ್ತವ್ಯಸ್ತವಾಗಿ ಹರಡಿಕೊಂಡ ಕಲ್ಲನ್ನು ಚಿತ್ತವಿಟ್ಟು ಗಂಭೀರತೆಯಿಂದ ಕೆತ್ತುತ್ತಾನೆ. ಕ್ರಮ ಕ್ರಮೇಣ ಮೂರ್ತಿಯು ಸೆಟೆದೆದ್ದು ನಿಲ್ಲುತ್ತದೆ. ಒಂದು ಕೈ ಮೇಲೆತ್ತಿ ಎಡಗಾಲು ಮುಂದಿಟ್ಟು ಸ್ವಾಭಿಮಾನದ ಕತ್ತೆತ್ತಿ ನಿಲ್ಲುತ್ತದೆ. ಆ ಮೂರ್ತಿಯ ಕಣ್ಣ ಬೆಳಕು ಭಗತ್‌ಸಿಂಗ್‌ನದಾಗಿರುತ್ತದೆ. ಹೋರಾಟದ ಕೆಚ್ಚು ಮುಷ್ಠಿಯಲ್ಲಿ ಒಟ್ಟುಗೂಡಿರುತ್ತದೆ. ಸಮತೆಯ ಕನಸುಗಳು ಆ ನಡಿಗೆಯ ಗತಿಯಲ್ಲಿರುತ್ತದೆ. ಹುಚ್ಚ ಧೀರ ಹೆಜ್ಜೆಯಿಂದ ನಡೆದು ಬಂದು ಮೂರ್ತಿಯ ತಲೆಗೆ ಟೋಪಿಯನ್ನಿತ್ತು ಕೊರಳಿಗೆ ಹೂಹಾರ ಹಾಕುವಾಗ, ಆ ಪುತ್ಥಳಿಯು ಥೇಟ್ ಭಗತ್‌ಸಿಂಗ್‌ನ ತದ್ರೂಪು ಕಾಣುತ್ತದೆ. ಆನಂತರ ಭಾರತದ ಬಾವುಟ ಭಗತ್‌ಸಿಂಗ್‌ನ ಕೈಗೆ

ಸಾಂಸ್ಕೃತಿಕ ಲೋಕದ ಮೂಲಕವೇ ಜನರ ಮನಸಿನೊಳಗಿಳಿದು ಒಡಕುಂಟು ಮಾಡುವ ಹುನ್ನಾರ ಹೆಣೆದಿರುವಾಗ, ಸಾಮರಸ್ಯಕ್ಕಾಗಿ ಸೌಹಾರ್ದತೆಗಾಗಿ ನಾವು ಸಹ ಪರ್ಯಾ... ಸಾಂಸ್ಕೃತಿಕ ಸಾಧ್ಯತೆಗಳನ್ನು ಕಟ್ಟಿಕೊಡುವಲ್ಲಿ ನಮ್ಮ ಜಾಥಾ ಪರಿಣಾಮಕಾರಿ ಕೆಲಸ ಮಾಡಿದೆ.

ಕೊಡುತ್ತಾನೆ ಮತ್ತು ಹಣೆಗೆ ಕೈಯಿಟ್ಟು ಧ್ವ... ವಂದನೆ ಸಲ್ಲಿಸಿ 'ಸಾರೇ ಜಹಾಂಸೇ ಅಚ್ಚಾ... ಹಾಡು ದನಿಯೆತ್ತಿ ಹಾಡುವಾಗ, ನೆಲಕ್ಕುರುಳಿ... ಎಲ್ಲ ಧರ್ಮದ ಅವರುಗಳು ಕಣ್ಣೊರಿಸಿಕೊಂಡ... ಮೇಲೆದ್ದು. ಭಾರತದ ಸಮಗ್ರತೆ-ಐಕ್ಯತೆಗಾ... ಧಾರ್ಮಿಕ ದಂಗೆ ನಡೆಸಬಾರದು ಎಂಬ... ತಾವು ಧ್ವಜ ವಂದನೆ ಸಲ್ಲಿಸಿ,ಪರಸ್ಪ... ಆಲಂಗಿಸಿಕೊಂಡು 'ಮಾನವರಾಗೋ... ನಾವು...' ಹಾಡನ್ನು ಹಾಡತೊಡಗುತ್ತಾ... 'ಭಗತ್‌ಸಿಂಗ್‌ನ ಕನಸುಗಳನ್ನು ನನಸ... ಮಾಡುತ್ತೇವೆ. ದೇಶದ ಸೌಹಾರ್ದತೆ... ಹೊಣೆ...' ಎಂಬ ಘೋಷಣೆಗೆ ನೆರೆದ... ಸಮುದಾಯವೂ ದನಿಗೂಡಿಸುತ್ತದೆ.

ಈ ಮನಮುಟ್ಟುವಂಥ ನಾಟಕವನ... ಆಡಿದವರು. ಭಗತ್‌ಸಿಂಗ್‌ನನ್ನು ಎಲ್ಲ... ಎದೆಯಂಗಳಕ್ಕೆ ತಂದು ಇನ್ಕಿಲಾಬ... ಜಿಂದಾಬಾದ್ ಹೇಳಿದವರು ಈ ಎ... ಸಂಗಾತಿಗಳು: ವಿಜಯಕುಮಾರ್ ಸೋನಾ... ದಿನೇಶ್, ಏಸು, ಯಶವಂತ ಕುಚನಾಳ, ಸಿದ್ದ... ರಮೇಶ್, ಅನೀಲ, ಸುನೀಲ, ಎಂ.ರಂಗನಾಥ... ಭೀಮರಾಯ, ಮಲ್ಲಯ್ಯ, ಎಸ್‌ಎಫ್‌ಐ ರಾ... ಮುಖಂಡರಾದ ಅನಂತ ನಾಯಕ ನೇತೃತ್ವದ... ಹಾಡು-ನಾಟಕಗಳು ಸೌಹಾರ್ದ ಹೂಗಳ... ಅರಳಿದವು. ಥೇಟ್ ಭಗತ್‌ಸಿಂಗ್ ಪಾತ್ರದ... 'ಅಂಬರೀಶ್ ಮತ್ತು ಅಜಯ್' ಎಲ್ಲ... ಮನಮುಟ್ಟಿದರು.

■ ನೀಲಾ ಕೆ...

ಅಕ್ರಮಗಳ ಆರ್ಭಟ..

ಪುಟ 3 ರಿಂದ

ಅಲ್ಲಿಂದ ಅನಿವಾರ್ಯವಾಗಿ ವರ್ಗಾಯಿಸ ಬೇಕಾಯ್ತು. ಕೋಟ್ಯಾಂತರ ರೂಪಾಯಿಗಳ ಹಣವನ್ನು ಹೆಂಡ, ಸೀರೆಗಳನ್ನು ವಶಪಡಿಸಿಕೊಂಡದ್ದು ಅಕ್ರಮಗಳ ಒಂದು ಸಣ್ಣ ಉದಾಹರಣೆ. ಶಿಕ್ಷಣ ಸಚಿವರು ಉಸ್ತುವಾರಿ ಇರುವ ಕಾರವಾರ ಕ್ಷೇತ್ರದಲ್ಲಿ ಸರ್ಕಾರಿ ನೌಕರರು ಶಿಕ್ಷಕರು ಬಹಿರಂಗವಾಗಿಯೇ ಬಿಜೆಪಿ ಅಭ್ಯರ್ಥಿಗೆ ಮತ ನೀಡಬೇಕೆಂದು ಪ್ರಚಾರಿಸಿದರೂ ಸರ್ಕಾರದ ಕೃಪೆಯಿಂದ ಚಕಾರವೂ ಎತ್ತಿಲ್ಲ.

ಇದೇ ಚುನಾವಣಾ ಪ್ರಕ್ರಿಯೆ ಸಂದರ್ಭದಲ್ಲಿ ಕೆಲವು ಮತದಾರರ ಗುರುತಿನ ಚೀಟಿಗಳನ್ನು ಖರೀದಿಸುತ್ತಿದ್ದುದು ವರದಿಯಾಯಿತು. ಇವುಗಳನ್ನು ದುರ್ಬಳಕೆ ಮಾಡಿ ಅಕ್ರಮ ಮತದಾನಕ್ಕೆ ಬಳಸಲು ಸಂಚು ಹೆಣೆಯಲಾಗಿತ್ತು. ಇಂತಹದ್ದೇ ಅಕ್ರಮ ಎಸಗಿ ಮತದಾನ ಮಾಡಿಸಿಕೊಂಡು ಸಿಕ್ಕಿಬಿದ್ದ ಬಿಜೆಪಿ ವರಸೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರಲ್ಲಿ ಬಯಲಾಗಿತ್ತು.

ಇವರು ಗುರುತಿನ ಚೀಟಿ ತಯಾರಿಸುವ ಕಂಟ್ರಾಕ್ಟ್ ಹೊಂದಿದ್ದ ಕಂಪನಿಯನ್ನೇ ಬಳಸಿ ಪೋಟೋ ಬದಲಾಯಿಸಿ ಮತದಾರರ ಚೀಟಿ ಸಿದ್ದಗೊಳಿಸಿಕೊಂಡರು. ನಂತರ ಅವರ ಮೇಲೆ ಏನು ಕ್ರಮ ಜರುಗಿತು ಇದುವರೆಗೂ ತಿಳಿದಿಲ್ಲ.

ಆದ್ದರಿಂದ ಮತದಾನದ ದಿನ ಬಹುತೇಕ ಕ್ಷೇತ್ರಗಳಲ್ಲಿ ಮಧುಗಿರಿ, ದೊಡ್ಡಬಳ್ಳಾಪುರ, ತುರುವೇಕೆರೆ ಇತರೆಡೆ ಜೆಡಿ(ಎಸ್) ಅಭ್ಯರ್ಥಿಗಳು ಅಕ್ರಮಗಳ ವಿರುದ್ಧ ಬೀದಿ ಕಾಳಗಕ್ಕೆ ಇಳಿದಿದ್ದಾರೆ.

ಬಿಜೆಪಿ ಯಾವುದೇ ನೈತಿಕ ಭಯವಾಗಲಿ, ನೀತಿನಿಯಮಗಳನ್ನು ಪಾಲಿಸಬೇಕೆಂಬ ಕನಿಷ್ಟ ಹೊಣೆಗಾರಿಕೆಯಾಗಲೀ ಇಲ್ಲದೇ ಭಂಡತನದ ಪರಮಾವಧಿಯನ್ನು ತಲುಪಿದೆ. ಅದು ಪ್ರಜಾಪ್ರಭುತ್ವಕ್ಕೆ ಜನತೆಗೆ ವಿರುದ್ಧವಾಗಿರುವುದನ್ನು ಮತ್ತೊಮ್ಮೆ ಸಾಬೀತುಗೊಳಿಸಿದೆ. ಹಣ ಬಳಕೆಯಲ್ಲಿ ಉಳಿದ ಪಕ್ಷಗಳು ತಮ್ಮದೇ ಪಾತ್ರ ವಹಿಸಿವೆ. ಗಣಿ ಧಣಿಗಳ, ಭೂಮಾಫಿಯಾದ ಅಕ್ರಮ ಹಣ ಇಲ್ಲೂ ವಿಶೇಷ ಪಾತ್ರವನ್ನು ವಹಿಸಿದೆ.

ಇನ್ನೊಂದು ಸಂಗತಿಯೆಂದರೆ ಈ ಚುನಾವಣೆಯಲ್ಲಿ ಯಾವುದೇ ಗಂಭೀರವಾದ ಜ್ವಲಂತ ಪ್ರಶ್ನೆಗಳನ್ನು ಚುನಾವಣಾ ವಿಷಯುವನ್ನಾಗಿಸದೇ ಇರುವುದು. ಆರೋಪ, ಪ್ರತ್ಯಾರೋಪ, ವ್ಯಕ್ತಿಗತ ನೆಲೆಯಲ್ಲಿ ವೀರಾವೇಶದ ಸ್ವರೂಪದಲ್ಲಿ ಪ್ರಧಾನವಾಗಿ ಬಂದದ್ದು ಜನತೆಗೆ ಯಾಕೆ ಮತ ನೀಡಬೇಕು ಎಂಬ ರಾಜಕೀಯ ಚರ್ಚೆಯನ್ನು ಹುಟ್ಟುಹಾಕದೆ ಹೋದದ್ದು ಗಂಭೀರವಾದ ಸಂಗತಿಯಾಗಿದೆ. ಬಿಜೆಪಿಯು ಆರು ತಿಂಗಳಲ್ಲಿ ರಾಜ್ಯದಲ್ಲಿ ಸೃಷ್ಟಿಸಿರುವ ಅನಾಹುತ, ಆತಂಕಗಳನ್ನು, ಸಾಮಾಜಿಕ ಶಾಂತಿ ಸಾಮರಸ್ಯ ಕದಡಿ ದ್ವೇಷ ಹುಟ್ಟುಹಾಕಿರುವುದನ್ನು, ರೈತರನ್ನು ಬಲಿ ತೆಗೆದುಕೊಂಡದ್ದು, ಕೃಷಿ ಬಿಕ್ಕಟ್ಟು ಇತ್ಯಾದಿಗಳನ್ನು, ಅದರ ಆರ್ಥಿಕ ದಿವಾಳಿಕೋರ ನೀತಿಗಳು, ರಾಜ್ಯವನ್ನು ಸುಲಿಗೆಗಾರರಿಗೆ ಒಪ್ಪಿಸಿರುವುದು ಇತ್ಯಾದಿ ಹಲವು ಪ್ರಶ್ನೆಗಳನ್ನು ಎತ್ತ... ಇರುವುದರಲ್ಲಿ ಕಾಂಗ್ರೆಸ್‌ನಂತಹ ಪಕ್ಷಗಳು ವೈಫ... ಕಾಣುವುದು. ಈ ಪಕ್ಷಗಳಿಗೆ ನಿಜಕ್ಕೂ ಜನ... ಪ್ರಶ್ನೆಗಳನ್ನಾಧರಿಸಿದ ಚುನಾವಣಾ ಹೋರಾ... ಬೇಕಿಲ್ಲ. ಹಾಗಾದರೆ ಕನಿಷ್ಟವಾದರ... ಬದ್ಧವಾಗಿರಬೇಕಾಗುತ್ತದೆ. ಅದು ಇವರಿಗ್ಯಾಕೆ ಬೇಕ... ಆದ್ದರಿಂದ ವ್ಯಕ್ತಿಗತ ನೆಲೆಯ ಪ್ರಚಾರ ಜನರ ಗಮ... ಬೇರೆಡೆಗೆ ಸೆಳೆವ ತಂತ್ರ. ಹೀಗಿರುವಾಗಲೂ ಜನರ... ತಮ್ಮ ಬದುಕಿನ ಪ್ರಶ್ನೆಗಳೇ ಮುಖ್ಯವಾಗುತ್ತವೆ. ಜನ... ಅಭಿಮತವೇನು. ಈಗಾಗಲೇ ಉತ್ತರ ಭಾರತದ... ಕೆಲವು ರಾಜ್ಯಗಳ ವಿಧಾನಸಭೆಗೆ ನಡೆ... ಚುನಾವಣೆಯಲ್ಲಿ ನೋಡಿದ್ದೇವೆ. ಬಿಜೆಪಿ... ಕಾಂಗ್ರೆಸ್‌ಗೆ ಪರ್ಯಾಯವಾಗಿ ಮೂರನೇ... ಸೆಕ್ಯೂಲರ್ ಪರ್ಯಾಯದತ್ತ ಒಲ... ವ್ಯಕ್ತಪಡಿಸಿರುವುದು ಹೊಸ ಬೆಳವಣಿಗೆ... ಸೂಚಕವಾಗಿದೆ. ರಾಜ್ಯದಲ್ಲಿಯೂ ಅಂತಹ ಸ... ಹೊರಟೀತೆ? 30 ರಂದು ನೋಡಬೇಕ... ಹೇಗಿದ್ದರೂ ಬಿಜೆಪಿಗೆ ಪ್ರಬಲ ಪ್ರತಿರೋ... ಇರುವುದಂತೂ ಎದ್ದು ಕಂಡಿದೆ.

ಕ್ಯೂಬಾ ವಿಮೋಚನೆಗೆ 50 ವರ್ಷ

ಹಲವು ಪುಸ್ತಕಗಳು ಫಿಡೆಲ್ ಕ್ಯಾಸ್ಟ್ರೋ ಜಗತ್ತಿನಲ್ಲಿ ಅತಿ ದೀರ್ಘಕಾಲ ಆಡಳಿತ ನಡೆಸಿದ ಸರ್ವಾಧಿಕಾರಿ ಎನ್ನುವ ಪ್ರಚಾರ ಮಾಡುತ್ತವೆ. ಅಮೇರಿಕಾ ಕಾಪಾಪೋಷಿತ ಟಿ.ವಿ. ಚಾನೆಲ್‌ಗಳು ಪತ್ರಿಕೆಗಳ ಬಗೆಗಂತೂ ಕೇಳುವುದೇ ಬೇಡ. ಕ್ಯೂಬಾದ ಕುರಿತ ಹಸಿ ಹಸಿ ಸುಳ್ಳೆಗಳೇ ವಿಜೃಂಭಿಸುತ್ತವೆ. ಹಾಗಿದ್ದರೆ ಕ್ಯೂಬಾ ದೇಶದ ಸಮಾಜದೊಳಗಿನ ಪರಿಸ್ಥಿತಿ, ಜನರ ಹಕ್ಕು, ಬಾಧ್ಯತೆ, ಸ್ವಾತಂತ್ರ್ಯ ಹೇಗಿದೆ. ಕ್ಯೂಬಾ ಸಾಧಿಸಿದ್ದೇನು? ಓದಿ ಕ್ಯೂಬಾದ ರಾಯಭಾರಿ ಸಂಸ್ಕೃತಿ ಮತ್ತು ಪತ್ರಿಕೆಗಳ ವಿಭಾಗದ ಎರಡನೇ ಕಾರ್ಯದರ್ಶಿ **ಡಲ್ಲಾಮಿ ಡೈಸ್ ಮ್ಯುನೋಜ್** ಅವರನ್ನು ಸಂದರ್ಶಿಸಿದ್ದಾರೆ. ವಿದ್ಯಾರ್ಥಿ ಮುಖಂಡ **ಆದಿತ್ಯ ಚಟರ್ಜಿ** ದೆಹಲಿಯಲ್ಲಿ...



ಡಲ್ಲಾಮಿ ಡೈಸ್ ಮ್ಯುನೋಜ್

ಕ್ಯೂಬಾ ಸರ್ವಾಧಿಕಾರಿ ದೇಶವಲ್ಲ ಸಮಾಜವಾದಿ ಪ್ರಜಾಪ್ರಭುತ್ವ ಶಿಕ್ಷಣ ಆರೋಗ್ಯ ಇಲ್ಲಿ ಸಂಪೂರ್ಣ ಉಚಿತ

ಎಲ್ಲ ಪ್ರಗತಿಪರ ದೇಶಗಳಿಗೂ ಪ್ರಜಾಪ್ರಭುತ್ವ ಎಂಬುದು ಒರೆಗಲ್ಲಾಗಿರುತ್ತದೆ. ಅದೇ ಸಂದರ್ಭದಲ್ಲಿ ಕ್ಯೂಬಾ ಎಂಬುದು ಸರ್ವಾಧಿಕಾರಿ ದೇಶ ಎಂದು ಅಮೆರಿಕ ನೆರಳಿನ ಮಾಧ್ಯಮಗಳು ಬಿಂಬಿಸುತ್ತಿವೆ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು?

- ಮೊದಲನೆಯದಾಗಿ ಕ್ಯೂಬಾ ಸರ್ವಾಧಿಕಾರಿ ದೇಶವಲ್ಲ-ಅದೊಂದು ಸಮಾಜವಾದಿ ಪ್ರಜಾಪ್ರಭುತ್ವ. ಜಗತ್ತಿನ ಎಲ್ಲ ಕಡೆಗಳಲ್ಲೂ ಇರುವ ನಂಬಿಕೆಗೆ ವಿರುದ್ಧವಾಗಿ ಕ್ಯೂಬಾ ತನ್ನ ನಾಯಕರನ್ನು ಪ್ರಜಾಸತ್ತಾತ್ಮಕವಾಗಿ ಆಯ್ಕೆ ಮಾಡುತ್ತದೆ. ಪ್ರತಿ ಎರಡೂವರೆ ವರ್ಷಕ್ಕೊಮ್ಮೆ ಸ್ಥಳೀಯ ಮತ್ತು ಐದು ವರ್ಷಗಳಿಗೊಮ್ಮೆ ರಾಷ್ಟ್ರೀಯ ಮಟ್ಟದಲ್ಲಿ ಚುನಾವಣೆಗಳನ್ನು ನಡೆಸಲಾಗುವುದು. ಸ್ಥಳೀಯ ಮಟ್ಟದಲ್ಲಿ ಮೊದಲ ಹಂತದಲ್ಲಿ ಇಬ್ಬರು ಪ್ರತಿನಿಧಿಗಳನ್ನು ಅಲ್ಲಿನ ಜನತೆ ಆಯ್ಕೆ ಮಾಡುತ್ತಾರೆ. ಇದರಲ್ಲಿ ಆಯ್ಕೆಯಾದ ಪ್ರತಿ ಅಭ್ಯರ್ಥಿ ಶೇಕಡ 50ಕ್ಕಿಂತ ಹೆಚ್ಚು ಮತಗಳನ್ನು ಗಳಿಸಬೇಕಾಗಿರುವುದು ನಿಯಮ. ರಾಷ್ಟ್ರೀಯ ಮಟ್ಟದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ರಾಷ್ಟ್ರೀಯ ಅಸೆಂಬ್ಲಿಗೆ ಆಯ್ಕೆಯಾದ ಶೇಕಡ 50ರಷ್ಟು ಪ್ರತಿನಿಧಿಗಳು ಸ್ಥಳೀಯ ಪ್ರತಿನಿಧಿಗಳಿಂದ ಆಯ್ಕೆಯಾಗಿರುತ್ತಾರೆ. ಉಳಿದ ಶೇಕಡ 50 ಪ್ರತಿನಿಧಿಗಳನ್ನು ಸರ್ಕಾರೇತರ ಸಂಘಸಂಸ್ಥೆಗಳು, ಸಾಮಾಜಿಕ ಸಂಘಸಂಸ್ಥೆಗಳು ಮತ್ತು ಸಾಮೂಹಿಕ ಸಂಘಟನೆಗಳಿಂದ ಆಯ್ಕೆ ಮಾಡಲಾಗುತ್ತದೆ.

ಚುನಾವಣೆಗಳ ಮೇಲೆ ಮತ್ತು ಆಯ್ಕೆಯಾದ ಪ್ರತಿನಿಧಿಗಳ ಮೇಲೆ ಕಮ್ಯುನಿಸ್ಟ್ ಪಕ್ಷ ನೇರವಾಗಿ ಹಿಡಿತ ಹೊಂದಿರುತ್ತದೆಯೇ?

- ಇಲ್ಲ. ಪಕ್ಷ ನಿಯಮಾನುಸಾರ ಯಾವುದೇ ಚುನಾವಣೆ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗಿಯಾಗುವುದಿಲ್ಲ. ಪಕ್ಷ ನಿರ್ವಹಿಸುವ ಏಕೈಕ ಮೇಲ್ವಿಚಾರಣೆ ಎಂದರೆ ಸಾಮೂಹಿಕ ಸಂಘಟನೆಗಳು ನಿರ್ವಹಿಸುವ ಕಾರ್ಯ. ಆದರೂ ಪಕ್ಷ ಯಾವುದೇ ಅಭ್ಯರ್ಥಿಯನ್ನು ಸೂಚಿಸುವ ಇಲ್ಲವೇ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕ್ರಿಯೆಯಲ್ಲಿ ತೊಡಗುವುದಿಲ್ಲ. ಇಷ್ಟೇ ಅಲ್ಲ ಆಯ್ದ ಪ್ರತಿನಿಧಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಯಾವುದೇ ಸಂದರ್ಭದಲ್ಲಿ ಅವರನ್ನು ಕಿತ್ತು ಹಾಕಬಹುದು. ಇದಕ್ಕಾಗಿ ಅಗತ್ಯ ಸಂಖ್ಯೆಯ ಸದಸ್ಯರ ಅನುಮೋದನೆ ಅಗತ್ಯ.

ಅಧ್ಯಕ್ಷರ ಹುದ್ದೆಗೂ ಇದು ಅನ್ವಯವಾಗುತ್ತದೆಯೇ ?

- ಹೌದು. ಅಧ್ಯಕ್ಷರ ಹುದ್ದೆಗೂ ಇದು ಅನ್ವಯಿಸುತ್ತದೆ.

ರಾಷ್ಟ್ರೀಯ ಅಸೆಂಬ್ಲಿ ಆಯ್ಕೆಯಾದ ನಂತರ ಏನು ಮಾಡುತ್ತದೆ?

- ರಾಷ್ಟ್ರೀಯ ಅಸೆಂಬ್ಲಿ ಆಯ್ಕೆಯಾದ ನಂತರ ರಾಜ್ಯ ಪರಿಷತ್ತುಗಳನ್ನು (ಕೌನ್ಸಿಲ್ ಸ್ಟೇಟ್ಸ್) ರೂಪಿಸಲು 53 ಮಂದಿಯನ್ನು ಆಯ್ಕೆ ಮಾಡಲಾಗುತ್ತದೆ. ಈ ರಾಜ್ಯ ಪರಿಷತ್ತುಗಳಿಂದ ಸದಸ್ಯರನ್ನು ದೇಶದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಈ ಪ್ರಕ್ರಿಯೆ ಪ್ರತಿ ಐದು ವರ್ಷಕ್ಕೊಮ್ಮೆ ನಡೆಯಲಿದೆ.

ಹಾಗಾದರೆ 1959ರಿಂದಲೂ ಫಿಡೆಲ್ ಕ್ಯಾಸ್ಟ್ರೊ 11 ಬಾರಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ!!

-ಇಲ್ಲ. 1959ರಿಂದ ಅಲ್ಲ. ಏಕೆಂದರೆ ಚುನಾವಣೆ ಪ್ರಕ್ರಿಯೆ ಜಾರಿಗೆ ಬಂದಿದ್ದೇ 1975ರಿಂದ. ಅದಕ್ಕೆ ಮೊದಲು ಕ್ಯೂಬಾದಲ್ಲಿ ಚುನಾವಣೆಗಳು ಇರಲಿಲ್ಲ. 1975-76ರಲ್ಲಿ ಹೊಸ ಸಂವಿಧಾನವನ್ನು ಅಂಗೀಕರಿಸಲಾಯಿತು. ಅಂದಿನಿಂದ ಚುನಾವಣೆಗಳು ನಡೆಯುತ್ತಿವೆ.

ಕ್ಯೂಬಾದಲ್ಲಿ ನ್ಯಾಯಾಂಗ ಹೇಗೆ ಕಾರ್ಯನಿರ್ವಹಿಸುತ್ತದೆ?

-ಕ್ಯೂಬಾದಲ್ಲಿ ಸ್ಥಳೀಯ ಪುರಸಭೆ ಮಟ್ಟದಲ್ಲಿ ಪ್ರಾಂತೀಯ ಮಟ್ಟದಲ್ಲಿ ನ್ಯಾಯಾಲಯಗಳು ಅಸ್ತಿತ್ವದಲ್ಲಿವೆ. ರಾಷ್ಟ್ರೀಯ ಮಟ್ಟದಲ್ಲಿ ಸುಪ್ರೀಮ್ ಕೋರ್ಟ್ ಹೊಂದಿದ್ದೇವೆ. ಮಾಧ್ಯಮಗಳು ಬಿತ್ತರಿಸುವುದಕ್ಕೆ ವಿರುದ್ಧವಾಗಿ ಕ್ಯೂಬಾದಲ್ಲಿ ನ್ಯಾಯಾಲಯಗಳು ಪಕ್ಷದಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ. ಭಾರತದಲ್ಲಿನಂತೆ ಕ್ಯೂಬಾದಲ್ಲಿ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ.

ರಾಷ್ಟ್ರಾಧ್ಯಕ್ಷರನ್ನೂ ನ್ಯಾಯಾಲಯಕ್ಕೆ ಎಳೆಬಹುದೆ?

- ತಾಂತ್ರಿಕವಾಗಿ ಇದು ಸಾಧ್ಯ. ಇದುವರೆಗೂ ಅಂತಹ ಪರಿಸ್ಥಿತಿಯೇನೂ ಬಂದಿಲ್ಲ. (ನಗು) ಆದರೆ ಉನ್ನತ ಅಧಿಕಾರ ಸ್ಥಾನದಲ್ಲಿರುವವರನ್ನು ನ್ಯಾಯಾಲಯಕ್ಕೆ ಎಳೆದಿರುವ ಕೆಲವು ಪ್ರಕರಣಗಳು ನಡೆದಿವೆ.

ಕ್ಯೂಬಾದಲ್ಲಿ ಅಭಿವ್ಯಕ್ತಿ ಸ್ವಾತಂತ್ರ ಮತ್ತು ಪತ್ರಿಕಾ ಸ್ವಾತಂತ್ರದ ಪರಿಸ್ಥಿತಿ ಏನು?

- ಮೊದಲಿಗೆ ಮತ್ತು ಅತ್ಯಂತ ಮುಖ್ಯವಾಗಿ ಕ್ಯೂಬನ್ ಪತ್ರಿಕಾ ಮಾಧ್ಯಮ ಸಂಪೂರ್ಣವಾಗಿ ಮುಕ್ತವಾಗಿದೆ. ಪ್ರತಿಯೊಬ್ಬರೂ ದೇಶದಲ್ಲಿನ ಪ್ರತಿಯೊಂದನ್ನೂ ಟೀಕಿಸುವ, ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಹಕ್ಕನ್ನು ಸಂವಿಧಾನದಲ್ಲಿ ಕಲ್ಪಿಸಲಾಗಿದೆ.

ಕ್ಯೂಬಾ ಜನತೆ ಮುಷ್ಕರದ ಹಕ್ಕು ಹೊಂದಿದ್ದಾರೆಯೇ?

-ಕ್ಯೂಬಾದಲ್ಲಿ ಮುಷ್ಕರ ನಡೆಸುವ ಹಕ್ಕು ಇಲ್ಲ. ಕಳೆದ 50 ವರ್ಷಗಳಿಂದ ಒಂದೂ ಮುಷ್ಕರ ನಡೆದಿಲ್ಲ. ಜನತೆ ತಮ್ಮ ನೋವು, ಸಮಸ್ಯೆ, ಸಂಕಷ್ಟಗಳನ್ನು ವ್ಯಕ್ತಪಡಿಸಲು ಇನ್ನಿತರ ಹಲವಾರು ಅವಕಾಶಗಳಿವೆ. ಆದರೆ ಮುಷ್ಕರ ನಡೆಸುವ ಹಕ್ಕು ಇಲ್ಲ. ಕಾರ್ಮಿಕ ಸಂಘಟನೆಗಳು, ಸಾಮಾಜಿಕ ಸಂಘಟನೆಗಳಿದ್ದು ಪ್ರತಿ 6 ತಿಂಗಳಿಗೊಮ್ಮೆ ಸಭೆಗಳನ್ನು ನಡೆಸುತ್ತವೆ. ಸ್ಥಳೀಯ ಸಂಸ್ಥೆಗಳ ಸಭೆಗಳನ್ನೂ ನಿಗದಿತವಾಗಿ ನಡೆಸಲಿದ್ದು ಪ್ರತಿಯೊಬ್ಬರೂ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವ ಅವಕಾಶವಿದೆ. ವಾಸ್ತವವಾಗಿ ಈ ಸಭೆಗಳು ತುಂಬಾ ಪರಿಣಾಮಕಾರಿಯಾಗಿವೆ. ಹಲವಾರು ಸಂದರ್ಭಗಳಲ್ಲಿ ಸ್ಥಳೀಯ ಜನತೆ ಈ ಸಭೆಗಳ ಮೂಲಕ ಸರ್ಕಾರಕ್ಕೆ ಸಲಹೆಗಳನ್ನೂ ನೀಡುತ್ತಾರೆ. ರಾಜಕೀಯ ಮತ್ತು ಆರ್ಥಿಕ ನೀತಿಗಳು ಸೇರಿದಂತೆ ಎಲ್ಲ ವಿಷಯಗಳ ಕುರಿತು ಸಲಹೆಗಳನ್ನು ನೀಡಿದ್ದಾರೆ.

ಶೈಕ್ಷಣಿಕ ಪರಿಸ್ಥಿತಿ ಹೇಗೆ?

- ಶಿಕ್ಷಣ ಉಚಿತವಾಗಿದ್ದು (ಶಾಲಾ ಪೂರ್ವ ಶಿಕ್ಷಣದಿಂದ ಆರಂಭಿಸಿ ಸ್ನಾತಕೋತ್ತರ ಹಂತದವರೆಗೆ) ಕೆಜಿ ಯಿಂದ ಪಿಜಿ ವರೆಗೂ ಹಕ್ಕು ಸಹ ಆಗಿವೆ. ಮಾನಸಿಕ ಮತ್ತು ದೈಹಿಕವಾಗಿ ದುರ್ಬಲರಾದವರಿಗೂ ಶಿಕ್ಷಣ ಉಚಿತ ಮತ್ತು ಕಡ್ಡಾಯ. ಮಕ್ಕಳು ಗ್ರಾಮೀಣ ಪ್ರದೇಶದಲ್ಲಿರಲಿ, ನಗರ ಪ್ರದೇಶದಲ್ಲಿರಲಿ ಅವರಿಗೆ ಶಿಕ್ಷಣ ನೀಡುವುದು ಸರ್ಕಾರದ ಪ್ರಮುಖ ಜವಾಬ್ದಾರಿ. ಉನ್ನತ ಶಿಕ್ಷಣ ಪಡೆಯಬೇಕಾದರೆ ವಿದ್ಯಾರ್ಥಿಗಳು ಶಾಲಾ ಹಂತದಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕಾಗಿರುತ್ತದೆ. ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳ ಕುರಿತು ಹೊಂದಿರುವ ಜ್ಞಾನಕ್ಕೆ ಅನುಗುಣವಾಗಿ ವಿವಿಗಳು ಮತ್ತು ಇತರ ಉನ್ನತ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೀಟ್‌ಗಳನ್ನು ಹಂಚಿಕೆ ಮಾಡಲಾಗುವುದು.

ಯಾವ ವಿಷಯಗಳನ್ನು ವಿದ್ಯಾರ್ಥಿಗಳು ಪಡೆಯಬೇಕು? ಆಯ್ಕೆ ಹೇಗೆ?

-ವಿದ್ಯಾರ್ಥಿ ಇಂತದೇ ವಿಷಯಗಳನ್ನು ಅಭ್ಯಸಿಸಬೇಕೆಂಬ ಕಡ್ಡಾಯ ಇಲ್ಲ. ಕನಿಷ್ಠ ಪ್ರಮಾಣದ ಅಂಕಗಳನ್ನು ಪಡೆದಿದ್ದಲ್ಲಿ ಅವರಿಗೆ ಇಷ್ಟವಾದ ಯಾವುದೇ ವಿಷಯವನ್ನು ಅಧ್ಯಯನ ಮಾಡಬಹುದು. ಪ್ರತಿಯೊಂದು ವೆಚ್ಚವನ್ನೂ ಸರ್ಕಾರವೇ ಭರಿಸುವುದರಿಂದ ಖಾಸಗಿ ಶಿಕ್ಷಣ ಸಂಸ್ಥೆಗಳು ತಲೆ ಎತ್ತಲು ಅವಕಾಶವೇ ಇಲ್ಲ.

ಮಕ್ಕಳನ್ನು ಶಾಲೆಗೆ ಕಳಿಸದಿದ್ದರೆ ಕ್ರಮ ಏನು?

-ಇದು ಸಾಧ್ಯವೇ ಇಲ್ಲ. ಮಕ್ಕಳು ಶಾಲೆಗೆ ಸೇರ್ಪಡೆಯಾಗದಿದ್ದಲ್ಲಿ ಪೋಷಕರನ್ನು ಶಿಕ್ಷೆಗೆ ಗುರಿಪಡಿಸುವ ಕಾನೂನು ಇದೆ. ಪ್ರಾಯೋಗಿಕವಾಗಿ ಕ್ಯೂಬಾದಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸದಿರಲು ಸಾಧ್ಯವೇ ಇಲ್ಲ. ಮಗುವನ್ನು ಶಾಲೆಗೆ ಕಳಿಸದಿದ್ದರೆ ಕ್ರಮವೇನು ಎಂಬ ಪ್ರಶ್ನೆಯೇ ಎದುರಾಗುವುದಿಲ್ಲ.

ಪ್ರಾಥಮಿಕ ಶಿಕ್ಷಣ (9ನೇ ತರಗತಿ) ಮುಗಿದ ನಂತರದ ಪರಿಸ್ಥಿತಿ ಏನು?

- 9ನೇ ತರಗತಿ ನಂತರ ವಿದ್ಯಾರ್ಥಿಗಳು ತಾವು ಗಳಿಸಿದ ಅಂಕಗಳ ಆಧಾರದಲ್ಲಿ ಮುಂದಿನ ಶಿಕ್ಷಣ ಮುಂದುವರೆಸುತ್ತಾರೆ. ಮೂರು ವರ್ಷಗಳ ನಂತರ ಅವರು ಗಳಿಸಿದ ಅಂಕ ಮತ್ತು ಅವರ ಆಸಕ್ತಿಗೆ ಅನುಸಾರವಾಗಿ ವಿವಿಗೆ ಸೇರ್ಪಡೆಯಾಗುತ್ತಾರೆ. ವಿಷಯದ ಆಯ್ಕೆ ಅವರಿಗೆ ಬಿಟ್ಟಿದ್ದಾಗಿದೆ.

ಕ್ಯೂಬಾದಲ್ಲಿ ಎರಡು ಕ್ಷೇತ್ರಗಳಲ್ಲಿ ಅಪಾರ ಪ್ರಗತಿ ಸಾಧಿಸಲಾಗಿದೆ. ಶೈಕ್ಷಣಿಕ ಕ್ಷೇತ್ರ ಹೊರತುಪಡಿಸಿದರೆ ವೈದ್ಯಕೀಯ ಕ್ಷೇತ್ರವಾಗಿದೆ. ಈ ಕುರಿತು ಕ್ಯೂಬಾ ಸರ್ಕಾರದ ನೀತಿಯನ್ನು ವಿವರಿಸುತ್ತೀರಾ?

- ಹೌದು ನಿಜ. ವಿಶ್ವದ ಇತರೆಡೆಗಳಂತೆ ಕ್ಯೂಬಾದಲ್ಲೂ ಆರೋಗ್ಯ ಒಂದು ಪ್ರಧಾನ ಕಾಳಜಿಯ ವಿಷಯವಾಗಿದೆ. ಕ್ಯೂಬಾ ವೈದ್ಯಕೀಯ ಕ್ಷೇತ್ರದಲ್ಲಿ ಅಪಾರ ಪ್ರಗತಿ ಸಾಸಿದೆ. ಶಿಕ್ಷಣದಂತೆ ಆರೋಗ್ಯ ಸಹ ಸಂಪೂರ್ಣವಾಗಿ ಉಚಿತವಾಗಿದೆ. ತರಬೇತಿ ಹೊಂದಿದ ವೈದ್ಯಕೀಯ ಚಿಕಿತ್ಸಕರನ್ನು

ಜನಶಕ್ತಿ ಕನ್ನಡ ವಾರಪತ್ರಿಕೆ
ಜನವರಿ 04, 2009

ಪುಟ 11 ರಿಂದ

ಕ್ಯೂಬಾ ವಿಮೋಚನೆ....

ಹೊಂದಿರುವ ಆರೋಗ್ಯ ಕೇಂದ್ರಗಳು ಪ್ರತಿ ಊರಲ್ಲೂ ಇವೆ. ಆರೋಗ್ಯಧಿಕಾರಿಗಳಿದ್ದಾರೆ. ಪ್ರತಿಯೊಬ್ಬರ ಆರೋಗ್ಯ ಸಮಸ್ಯೆಗಳಿಗೆ ಸ್ಪಂದಿಸುವುದೇ ಅವರ ಮುಖ್ಯ ಕಾರ್ಯ. ಪ್ರತಿಯೊಬ್ಬರೂ ಉಚಿತವಾಗಿ ವಿಶೇಷ ವೈದ್ಯಕೀಯ ಚಿಕಿತ್ಸೆ ಲಭ್ಯ. ಸಾಮಾನ್ಯ ನೆಗಡಿಯಿಂದ ಹಿಡಿದು ಕ್ಯಾನ್ಸರ್‌ನಂತಹ ದೊಡ್ಡ ಕಾಯಿಲೆವರೆಗೂ ಚಿಕಿತ್ಸೆ ಉಚಿತ. ಅರೆ ವೈದ್ಯಕೀಯ ಸೇವೆಗಳನ್ನು ಒದಗಿಸಲು ಕ್ಯೂಬಾ ಸರ್ಕಾರ ಇತ್ತೀಚೆಗೆ ಹೆಚ್ಚು ಗಮನ ನೀಡುತ್ತಿದೆ. . ಫುಟ್ ಬಾಲ್ ದಂತ ಕಥೆ ಮರಡೋನಾ ಅಂತವರಿಗೂ ಕ್ಯೂಬಾ ಚಿಕಿತ್ಸೆ ನೀಡುತ್ತಿದೆ ಎಂಬುದು ಕ್ಯೂಬಾ ದೇಶದ ಆರೋಗ್ಯ ವ್ಯವಸ್ಥೆ ಹೇಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಇಡೀ ಜಗತ್ತನ್ನು ಕಾಡುತ್ತಿರುವ ಮತ್ತೊಂದು ಪ್ರಮುಖ ಪ್ರಶ್ನೆಯೊಂದಿದೆ. ಕಳೆದ 50 ವರ್ಷಗಳಿಂದ ಅಮೆರಿಕ ಕ್ಯೂಬಾ ಮೇಲೆ ಆರ್ಥಿಕ ದಿಗ್ಬಂಧನ ಹೇರಿದೆ ಹಲವಾರು ರೀತಿಯಲ್ಲಿ ಕಿರುಕುಳ ನೀಡುತ್ತಿದೆ. ಆದರೆ ಅಮೆರಿಕದ ನ್ಯೂಆರ್ಲಿಯನ್ಸ್ ಮೇಲೆ ಚಂಡಮಾರುತ ಕತ್ರಿನಾ ದಾಳಿ ಮಾಡಿದಾಗ ಮೊದಲ ವೈದ್ಯರ ತಂಡ ರವಾನಿಸಿದ್ದೇ ಕ್ಯೂಬಾ. ವಿಶ್ವಸಂಸ್ಥೆಯ ವೈದ್ಯಕೀಯ ತಂಡಗಳು ಭೇಟಿ ನೀಡುವ ಮುನ್ನವೇ ಕ್ಯೂಬಾ ಕಳಿಸಿತ್ತು. ಯಾಕೆ?

- ಪ್ರಕೃತಿ ವಿಕೋಪ ಸಂಭವಿಸಿದಾಗ ಅದಕ್ಕೆ ಅಮೆರಿಕ, ನಮೀಬಿಯಾ ಅಥವಾ ಕ್ಯೂಬಾ ಎಂಬುದು ಇರುವುದಿಲ್ಲ. ಒಟ್ಟಾರೆ ಎಲ್ಲ ಜನತೆಯನ್ನೂ ಭಾದಿಸುತ್ತದೆ. ನೆರವಿನ ಅಗತ್ಯ ಬಿದ್ದಾಗ ತಂಡಗಳನ್ನು ಕಳಿಸುವುದು ಸ್ವಾಭಾವಿಕ. ಈ ಕುರಿತಂತೆ ಹೇಳುವುದಾದರೆ ಅಮೆರಿಕ ಮಾತ್ರವಲ್ಲ, ಪಾಕಿಸ್ತಾನದಲ್ಲಿ ಭೂಕಂಪ ಸಂಭವಿಸಿದಾಗಲೂ ಕ್ಯೂಬಾ ವೈದ್ಯರು ಮೊಟ್ಟ ಮೊದಲು ಅಲ್ಲಿಗೆ ತೆರಳಿದ್ದರು. ಅಮೆರಿಕದೊಂದಿಗೆ ವ್ಯೂಹಾತ್ಮಕ (ಸಮರ) ಮೈತ್ರಿ ಒಪ್ಪಂದ ಹೊಂದಿರುವುದರಿಂದ ಪಾಕಿಸ್ತಾನ ಕ್ಯೂಬಾ ತಂಡವನ್ನು ಹಿಂದೆ ಕಳಿಸಿದ್ದು ಬೇರೆ ವಿಷಯ. ಆದರೆ ಕ್ಯೂಬಾ ಒಂದು ದೇಶವಾಗಿ ಇತರ ಯಾವುದೇ ದೇಶದಲ್ಲಿ ನೆರವಿನ ಅಗತ್ಯವಿದ್ದಾಗ ಮುಂದಾಗಲಿದೆ. 1960ರಿಂದಲೂ ಕಾಂಗೋ, ಅಲ್ಜೀರಿಯಾ, ಬೊಲಿವಿಯಾ... ಸೇರಿದಂತೆ ಹಲವಾರು ದೇಶಗಳಲ್ಲಿ ನೆರವಿನ ಅಗತ್ಯವಿದ್ದಾಗ ಕ್ಯೂಬಾ ಮುಂದಾಗಿದೆ.

ಅಮೆರಿಕ ಅಧ್ಯಕ್ಷರಾಗಿ ಒಬಾಮ ಆಯ್ಕೆಯಾಗಿರುವುದರಿಂದ ಕ್ಯೂಬಾ ಅಮೆರಿಕ ನಡುವಿನ ವಾಣಿಜ್ಯ ಮತ್ತು ಸಂಬಂಧಗಳಲ್ಲಿ ಬದಲಾವಣೆ ಕಾಣುವ ನಿರೀಕ್ಷೆ ಹೊಂದಿದ್ದೀರಾ?ಯೂರೋಪ್ ಇತ್ತೀಚೆಗೆ ಕ್ಯೂಬಾ ಮೇಲೆ ವಿಸಿದ್ದ ನಿಷೇಧವನ್ನು ತೆರವುಗೊಳಿಸಿತು. ಅಮೆರಿಕ ಸಹ ಇದನ್ನು ಅನುಸರಿಸಬಹುದೇ?

- ಇದು ತುಂಬಾ ಮೌಲ್ಯಯುತವಾದ ಪ್ರಶ್ನೆ. ಇಡೀ ಜಗತ್ತು ನಿರೀಕ್ಷಿಸಿರುವಂತೆ ಸ್ವಲ್ಪ ಬದಲಾವಣೆಗಳು ಕಾಣಬಹುದು. ಕ್ಯೂಬಾಗೆ ಸಂಬಂಧಿಸಿ ಹೇಳುವುದಾದರೆ ನಾವು ಯಾವುದೇ ಬದಲಾವಣೆ ನಿರೀಕ್ಷೆ ಹೊಂದಿಲ್ಲ. ಅಧ್ಯಕ್ಷರು ಬದಲಾಗಿದ್ದಾರೆ ಎಂಬುದನ್ನು ಬಿಟ್ಟರೆ ಬೇರೆ ವ್ಯತ್ಯಾಸ ಇಲ್ಲ. ಆರ್ಥಿಕ ನಿಷೇಧ ಹೇರಿದ ದಿನದಿಂದಲೂ 10 ಅಧ್ಯಕ್ಷರ ಬದಲಾವಣೆಗಳನ್ನು ನಾವು ನೋಡಿದ್ದೇವೆ. ಇದುವರೆಗೂ ಹೆಚ್ಚಿನ ಬದಲಾವಣೆಗಳನ್ನು ಕಂಡಿಲ್ಲ. ಹಾಗೇಯೇ ಒಬಾಮ ಆಯ್ಕೆಯಾದರೂ ಕ್ಯೂಬಾಗೆ ಯಾವುದೇ ಬದಲಾವಣೆ ಇಲ್ಲ. ಆದರೂ ಏನಾದರೂ ಬದಲಾವಣೆ ಕಾಣಬಹುದು ಎಂದು ನಿರೀಕ್ಷಿಸಿದರೆ ಅದು ಅಮೆರಿಕದ ವಿದೇಶಾಂಗ ನೀತಿಯಷ್ಟೇ. ಒಬಾಮ ಏನೋ ಬದಲಾಗಿದ್ದಾರೆ ಆದರೆ ಹೊಸ ಸರ್ಕಾರದ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಅವರೇ ಅಲ್ಲವೇ.

ಕಳೆದ ಒಂದು ದಶಕದಲ್ಲಿ ಲ್ಯಾಟಿನ್ ಅಮೆರಿಕದಲ್ಲಿ ಕಂಡುಬಂದಿರುವ ಅಗಾಧ ಪ್ರಮಾಣದ ರಾಜಕೀಯ ಬದಲಾವಣೆಗಳ ಕುರಿತು ನಿಮ್ಮ ಅಭಿಪ್ರಾಯವೇನು. ಈ ಬದಲಾವಣೆಗಳನ್ನು ತರುವಲ್ಲಿ ಕ್ಯೂಬಾ ನಿರ್ವಹಿಸಿದ ಪಾತ್ರ ಏನು?

- ಕಳೆದ ಒಂದು ದಶಕದಲ್ಲಿ ಲ್ಯಾಟಿನ್ ಅಮೆರಿಕದಲ್ಲಿ ಆಗಿರುವ ಮತ್ತು ಆಗುತ್ತಿರುವ ರಾಜಕೀಯ ಬದಲಾವಣೆಗಳ ಬಗ್ಗೆ ನಾವು ತುಂಬಾ ಸಂತೋಷಗೊಂಡಿದ್ದೇವೆ. ಕ್ಯೂಬಾ ಸದಾ ವೆನಿಜುವೆಲಾ, ಬೊಲಿವಿಯಾ, ಬ್ರೆಜಿಲ್, ನಿಕರಾಗುವ ಮತ್ತು ಇತರ ದೇಶಗಳ ಜನತೆಗೆ ಬೆಂಬಲ ನೀಡಿದೆ. ಇಲ್ಲಿ ಕ್ಯೂಬಾ ಒಂದು ಅಂತಾರಾಷ್ಟ್ರೀಯ ಬೆಂಬಲಿತ ದೇಶವಾಗಿ ಪಾತ್ರ ನಿರ್ವಹಿಸಿದೆ. ಕೆಲವು ನಿರ್ದಿಷ್ಟ ದೇಶಗಳಲ್ಲಿ ಕಂಡುಬಂದಿರುವ ತೀವ್ರತರವಾದ ಬದಲಾವಣೆಗಳಿಗೆ ಜನತೆಯ ಅಗಣಿತ ಹೋರಾಟಗಳು ಪ್ರಮುಖ ಕಾರಣವಾಗಿವೆ.

ಭಾರತ-ಕ್ಯೂಬಾ ನಡುವಿನ ಸಂಬಂಧ ಹೇಗಿದೆ?

- ಭಾರತ-ಕ್ಯೂಬಾ ನಡುವಿನ ಸಂಬಂಧ ಉತ್ತಮವಾಗಿದೆ. ದೀರ್ಘಕಾಲದಿಂದ ನಾವು ಭಾರತದಲ್ಲಿ ಅಸಂಖ್ಯಾತ ಸ್ನೇಹಿತರನ್ನು ಹೊಂದಿದ್ದೇವೆ. ಕ್ಯೂಬಾಗೆ ಭಾರತ ಸಹಕಾರಿಯುತ ದೇಶವಾಗಿದೆ. ಭಾರತದೊಂದಿಗೆ ದೀರ್ಘಕಾಲೀನ ಸಂಬಂಧಗಳನ್ನು ಅಭಿವೃದ್ಧಿಪಡಿಸುವ ಪ್ರಯತ್ನದಲ್ಲಿ ಇದ್ದೇವೆ. ಇತ್ತೀಚೆಗೆ ಕ್ಯೂಬಾದ ವಾಣಿಜ್ಯ ನಿಯೋಗವೊಂದು ಭಾರತಕ್ಕೆ ಭೇಟಿ ನೀಡಿದ್ದು ಈ ಪ್ರಕ್ರಿಯೆ ಚಾಲನೆಯಲ್ಲಿದೆ. ಮುಂದಿನ ವರ್ಷ ಮತ್ತು ಭವಿಷ್ಯದಲ್ಲಿ ಇಂತಹ ವಾಣಿಜ್ಯ ಸಂಬಂಧಗಳು ಎರಡೂ ದೇಶಗಳ ನಡುವಿನ ಸಂಬಂಧ ಹೆಚ್ಚಿಸುವಲ್ಲಿ ಮತ್ತು ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ನೆರವಾಗಲಿದೆ.

ರಾಜಕೀಯ ವಲಯಗಳಲ್ಲಿ ಸದಾ ಕಾಡುತ್ತಿರುವ ಮತ್ತೊಂದು ಪ್ರಮುಖ ಪ್ರಶ್ನೆ ಎಂದರೆ ಫಿಡೆಲ್ ಕ್ಯಾಸ್ಟ್ರೊ ನಂತರ ಏನು? ಎಂಬುದು. ಈಗ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಿಕೊಂಡಿದೆ. ಅಲ್ಲಿನ ರಾಜಕಾರಣದಲ್ಲಿ ಭಾರಿ ಬದಲಾವಣೆಗಳು ಕಾಣಲಿವೆಯೇ?

- ಬದಲಾವಣೆಯೊಂದೇ ಶಾಶ್ವತ. ಹೊಸ ಅಧ್ಯಕ್ಷರಿಂದ ಬದಲಾವಣೆಯಾಗಲಿದೆ ಎಂಬುದಲ್ಲ. ಕಳೆದ 50 ವರ್ಷಗಳಿಂದಲೂ ಕ್ಯೂಬಾ ಪ್ರಗತಿಪಥದತ್ತ ಬದಲಾಗುತ್ತಾ ಬಂದಿದೆ. ನಮ್ಮ ದೇಶವನ್ನು ಯಾರು ಮುನ್ನಡೆಸುತ್ತಿದ್ದಾರೆ ಎಂಬುದರ ಮೇಲೆ ಇದು ಅವಲಂಬನೆಯಾಗಿಲ್ಲ ಎಂಬುದನ್ನು ಮರೆಯಬಾರದು. ಜನತೆ ಮತ್ತು ಎಂತಹ ರಾಜಕೀಯ ವ್ಯವಸ್ಥೆ ದೇಶವನ್ನು ಮುನ್ನಡೆಸುತ್ತಿದೆ ಎಂಬುದರ ಮೇಲೆ ಈ ಬದಲಾವಣೆ ನಿಂತಿದೆ. ಗಂಭೀರವಾದ ಬದಲಾವಣೆಗಳು ಕಾಣಬೇಕಾದ ಸಂದರ್ಭದಲ್ಲಿ ಜನತೆ ಮತ್ತು ರಾಜಕೀಯ ವ್ಯವಸ್ಥೆಯೇ ಅದನ್ನು ನಿರ್ಧರಿಸುತ್ತದೆ. ಕಳೆದ 5 ದಶಕಗಳಿಂದಲೂ ಇದು ಮುನ್ನಡೆಯುತ್ತಾ ಸಾಗಿದೆ.

ಕ್ಯೂಬಾದಿಂದ ಇಡೀ ಜಗತ್ತು ಕಲಿಯಬೇಕಾದ ಪಾಠ ಏನು?

- ಕ್ಯೂಬಾದಿಂದ ಮಾತ್ರವಲ್ಲ. ಒಂದು ದೇಶದಿಂದ ಮತ್ತೊಂದು ದೇಶ ಪರಸ್ಪರ ಕಲಿಯಬೇಕಾದ್ದು ಸಾಕಷ್ಟಿದೆ. ಆದರೆ ಇಡೀ ಜಗತ್ತು ಕ್ಯೂಬಾದಿಂದ ಕಲಿಯಲೇಬೇಕಾದ ಒಂದು ವಿಷಯ ಎಂದರೆ ರಾಜಕೀಯ ಇಚ್ಛಾಶಕ್ತಿ ಇದ್ದರೆ [illegible] ಬದಲಾವಣೆಗಳನ್ನು ತರಬಹುದು ಎಂ[illegible] ಬೇರೊಬ್ಬರು ಬದಲಾವಣೆ ತರಬೇಕೆಂದು ಅವರ ಕರುಣೆಯ ಮೇಲೆ ನಾವು ಬದುಕಬೇಕಾದ ಅಗತ್ಯವಿಲ್ಲ. ಬಹುಷ ಭಾರತ ಭಯೋತ್ಪಾದನೆ ವಿರುದ್ಧ ನಿರ್ಣಾಯಕ ಹೋರಾಟ ನಡೆಸಬೇಕಾದರ ಇದೇ ಸಂಕಲ್ಪ ಅನ್ವಯಿಸುತ್ತದೆ ಎಂಬುದು ನಮ್ಮ ಭಾವನೆಯಾಗಿದೆ.

ಪ್ರಗತಿಯ ಪಥದಲ್ಲಿ ಎಲ್ಲ ದೇಶಗಳೂ ಪಾಲುದಾರರಾಗಿ ಮುನ್ನಡೆಯುವುದು ಎಲ್ಲ ದೇಶಗಳಿಗೂ ಒಳಿತು ಎಂಬುದು ನಮ್ಮ ವಿಶ್ವಾಸವಾಗಿದೆ. ಜಗತ್ತಿನಲ್ಲಿ ಬದುಕಿರುವ ನಮ್ಮಂತಹ ಕೋಟ್ಯಂತರ ಮಂದಿ ಇಂದಿಗೂ ಸಂಕಷ್ಟದಲ್ಲಿ ಇದ್ದಾರೆ. ಬದುಕುವುದಕ್ಕಾಗಿ ಹೆಣಗಾಡುತ್ತಿರುವ ಅಂತಹ ಕೋಟ್ಯಂತರ ಜನತೆಗೆ ಕ್ಯೂಬಾ ಭುಜಕ್ಕೆ ಭುಜ ಕೊಟ್ಟು ನಿಲ್ಲಲಿದೆ. ಅವರ ಹೋರಾಟಗಳಲ್ಲಿ ಪಾಲುದಾರರಾಗಿ ನಿಲ್ಲುತ್ತದೆ. ಇವತ್ತಲ್ಲ ನಾಳೆ [illegible] ಎಲ್ಲ ಜನತೆ ಉತ್ತಮ ಜೀವನ ಸಾಗಿಸಲಿದ್ದಾರೆ ಎಂ[illegible] ವಿಶ್ವಾಸವನ್ನು ನಾವು ಹೊಂದಿದ್ದೇವೆ.

ಸೌಹಾರ್ದ ಕರ್ನಾಟಕ ಜಾಥಾ...

ಪುಟ 9 ರಿಂದ

ರಾಮಚಂದ್ರಪುರ ಮಠಕ್ಕೆ ಕೊಟ್ಟಿದೆ.

ಕರ್ನಾಟಕವು ಭಾಷೆ, ಸಂಸ್ಕೃತಿ ದೃಷ್ಟಿಯಿಂದ ಬಹು ವೈವಿಧ್ಯತೆ ಹೊಂದಿರುವ ನಾಡು, ಗೋಕರ್ಣ ಜಾಥಾವು ಕೊಂಕಣಿ, ತುಳು, ಕೊಡವ, ಹವ್ಯಕ ಮುಂತಾದ ಭಾಷೆಗಳನ್ನಾಡುವ ಸ್ಥಳಗಳಲ್ಲಿ ಸಂಚರಿಸಿದೆ. ಕುಂದಾಪುರ ಕನ್ನಡವೇ ಒಂದು ಬಗೆ. ತಾಲ್ಲೂಕು ತಾಲ್ಲೂಕಿಗೂ ಇಲ್ಲಿ ಭಿನ್ನತೆ, ವೈವಿಧ್ಯತೆ ಕಾಣುತ್ತದೆ. ಮುಸ್ಲಿಮರಲ್ಲೇ ನವಾಯತ ಮುಸ್ಲಿಂ, ಬ್ಯಾರಿ ಮುಸ್ಲಿಂ, ಉರ್ದು ಮಾತನಾಡುವ ಮುಸ್ಲಿಂ, ಕೊಂಕಣಿ ಮಾತನಾಡುವ ಮುಸ್ಲಿಮರು ಹೀಗೆ ವೈವಿಧ್ಯತೆ ಇದೆ.

ರೇಷನ್‌ಗೆ ಸಿಗಬೇಕಾದ ಹಣ ಮಠಕ್ಕೆ... ಎಂದರೆ...

ಜಾಥಾದಲ್ಲಿ, ಜನರು ಅಕ್ಕಿ, ರೇಷನ್ ಇತ್ಯಾದಿಗಳಿಗೆ ಕೊಡಬೇಕಾದ ಹಣವನ್ನು ಸರ್ಕಾರ ಮಠಗಳು, ಮಠಾಧೀಶರಿಗೆ ಕೊಡುತ್ತಿದೆ ಎಂದಾಗ ಅದನ್ನು ಅರ್ಥ ಮಾಡಿಕೊಂಡು ಅದಕ್ಕೆ ಸ್ಪಂದಿಸಿದರು. ಭಜರಂಗದಳದ ಗೂಂಡಾಗಿರಿಯ ಬಗೆಗೆ ಮಾತನಾಡಿದಾಗ ಪೋಲೀಸರು ನಿಷ್ಕ್ರಿಯರಾಗಿರುವ ಬಗೆಗೆ ಮಾತನಾಡಿದಾಗ, ಅದೇ ರೀತಿ ಇದು ಬಿಜೆಪಿ ಸರ್ಕಾರ ವಲ್ಲ ಭಜರಂಗದಳದ ಸರ್ಕಾರ ವಾಗುತ್ತಿದೆ ಎಂದಾಗ ಅದರ ಅಪಾಯವನ್ನು ಅರಿತು ಉತ್ತಮವಾಗಿ ಸ್ಪಂದಿಸಿದರು. ಹಾಗಾಗಲೂ ಬಿಡುವುದಿಲ್ಲ ಎಂಬ ಪ್ರತಿಕ್ರಿಯೆಯೂ ಜನರಿಂದ ಬಂದಿದೆ.

ಪ್ರಜಾಪ್ರಭುತ್ವ ರಕ್ಷಣೆ ದುಡಿಯುವ ಜನರಿಂದ

- ವಿ.ಜೆ.ಕೆ.ನಾಯರ್

ಕೋಮುವಾದ ವಿರೋಧಿ ಹೋರಾಟ ಗೆಲ್ಲಬೇಕಾದರೆ, ಪ್ರಜಾಪ್ರಭುತ್ವ ಉಳಿಯಬೇಕು. ಪೋಲೀಸರೇ ಹೋಗಿ ಚರ್ಚ್ ಮೇಲೆ ದಾಳಿ ನಡೆಸುವುದು. ಚರ್ಚ್‌ಗೆ ಬೆಂಕಿ ಕೊಡುವುದು ಮ್ಯಾಜಿಸ್ಟ್ರೇಟ್ ಒಬ್ಬರು, ಜನ ಚರ್ಚ್‌ಗೆ ಹೋಗಬೇಕಾದರೆ ಪ್ರಮಾಣ ಪತ್ರ ಸಲ್ಲಿಸಿ ಎನ್ನುವುದು ನೋಡಿದರೆ ಮುಂದೆ ಒಂದು ದಿನ ಶೈವ, ವೈಷ್ಣವರೂ ತಮ್ಮ ತಮ್ಮ ದೇವಸ್ಥಾನಗಳಿಗೆ ಹೋಗಬೇಕಾದರೆ ತಾವು ಶೈವರು, ವೈಷ್ಣವರು ಎಂದು ಪ್ರಮಾಣಪತ್ರ ಕೊಡಬೇಕಾಗಬಹುದು. ಕಮ್ಯುನಿಸ್ಟ್ ಪಕ್ಷದ ಸಭೆಗೆ ಹೋಗಬೇಕಾದರೆ ಕಮ್ಯೂನಿಸ್ಟ್ ನಾನು ಎಂದು ಪ್ರಮಾಣ ಪತ್ರ ಕೊಡಬೇಕಾಗಬಹುದು. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ.

ಇತ್ತೀಚೆಗೆ ಮುಂಬೈ ದಾಳಿಯ ನಂತರ ಸಾಕಪ್ಪ ಸಾಕು. ರಾಜಕೀಯವೇ ಸಾಕು ಎಂಬ ವಾದ ಕೇಳಿ ಬರುತ್ತಿದೆ. ಪ್ರಜಾಪ್ರಭುತ್ವವೇ ಸಾಕು ಅಂತ ಅವರು ಹೇಳುತ್ತಿದ್ದಾರೆ. ಬದಲಿಗೆ ಭೂ ಮಾಲೀಕ ಬಂಡವಾಳಶಾಹಿ ವರ್ಗದ ಆಡಳಿತ ಸಾಕು ಅಂತ ಹೇಳಬೇಕು.

ಕಾರ್ಮಿಕ ಆಂದೋಲನ:

ಜನರು ರೇಷನ್ ಕೊಡಿ, ಮನೆ, ನಿವೇಶನ ಕೊಡಿ ಅಂತ ವ್ಯವಸ್ಥಿತ ಹೋರಾಟ ನಡೆಸಬೇಕು. ಕಾರ್ಮಿಕ ಸಂಘಟನೆ (ಸಿಐಟಿಯು) ಮುಂದಿನ ಇಡೀ ಜನವರಿ ತಿಂಗಳಲ್ಲಿ ಕನಿಷ್ಠ ಕೂಲಿ ಹೆಚ್ಚಳಕ್ಕಾಗಿ ಹಾಗೂ ಜಾರಿಗಾಗಿ ಸಮಾನ ಕನಿಷ್ಠ ಕೂಲಿಗಾಗಿ ರಾಜ್ಯವ್ಯಾಪಿ ಎಲ್ಲ-ಬಸ್ ನಿಲ್ದಾಣಗಳಲ್ಲಿ ಪ್ರಚಾರಾಂದೋಲನ ನಡೆಸಲಿದೆ. ಅಲ್ಲದೆ ಗುತ್ತಿಗೆ ಕಾರ್ಮಿಕ ಪದ್ಧತಿ ಹೋಗಬೇಕೆಂದು, ಫೆಬ್ರವರಿ 5 ರಂದು ಬೃಹತ್ ಮತ ಪ್ರದರ್ಶನ ನಡೆಸಲಿದೆ.

ಜಾತ್ಯಾತೀತತೆ, ಸ್ವಾತಂತ್ರ್ಯ ಪ್ರಜಾಪ್ರಭುತ್ವ, ಸಮಾಜವಾದ ಈ ಸಮಾಜ ನಾಲ್ಕು ಆಧಾರ ಸ್ತಂಭಗಳು. ಒಂದೇ ಕಂಬದ ಮೇಲೆ ಸಮಾಜ ಸದೃಢವಾಗಿ ನಿಲ್ಲಲಾರದು ಈ ನಾಲ್ಕು ಕಂಬಗಳ ಆಧಾರಬೇಕು. ಇವುಗಳನ್ನು ಕಾಪಾಡುವುದು ದುಡಿಯುವ, ವರ್ಗಕ್ಕೆ ಮಾತ್ರ ಸಾಧ್ಯ.

ರ್‍ಯಾಲಿಯ ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ.ಮಾಧವ, ಜಿ.ಸಿ.ಬಯ್ಯಾರೆಡ್ಡಿ, ಪ್ರಸನ್ನಕುಮಾರ್ ಮುಂತಾದವರದಿದ್ದರು. ನಿಡುಮಾಮಿಡಿ ಶ್ರೀಗಳ ಸಂದೇಶವನ್ನು ಓದಲಾಯಿತು.

ಫೋಟೋಗಳು:
ಜಿ.ವೆಂಕಟೇಶ್ [illegible]

ಕ್ಯೂಬಾ ಕ್ರಾಂತಿಗೆ ಸುವರ್ಣ ಸಂಭ್ರಮ

ಜನವರಿ 1- ಹೊಸ ವರುಷವನ್ನು ಸ್ವಾಗತಿಸುತ್ತಿರುವಾಗಲೇ ಕ್ರಾಂತಿಕಾರಿಗಳಿಗೆ, ಸಮಾಜವಾದಿಗಳಿಗೆ ತಕ್ಷಣ ನೆನಪಾಗುವುದು ಕ್ಯೂಬಾ ಕ್ರಾಂತಿ. ಅದರಲ್ಲೂ 2009ರ ಜನವರಿ ಇನ್ನೂ ವಿಶೇಷ. ಕ್ಯೂಬಾದ ಕ್ರಾಂತಿಗೆ ಐವತ್ತು ತುಂಬಿದೆ. ಕೇವಲ 110 ಲಕ್ಷ ಜನರನ್ನು ಒಳಗೊಂಡ ಪುಟ್ಟ ಕ್ಯೂಬಾ ತನ್ನಿಂದ 90 ಮೈಲಿಗಳಾಚೆ ಇರುವ ದೈತ್ಯ ಅಮೇರಿಕಾದ ಸಾಮ್ರಾಜ್ಯಶಾಹಿ ನೀತಿಗಳನ್ನು ಸಮರ್ಥವಾಗಿ ವಿರೋಧಿಸುತ್ತಿರುವಾಗ, 110 ಕೋಟಿ ಜನರ ಸರಕಾರ ನಡೆಸುತ್ತಿರುವ ಭಾರತದ ಆಡಳಿತಗಾರರಿಗೆ ನಾಚಿಕೆಯಾಗಬೇಕು. ಕ್ಯೂಬಾ ಕ್ರಾಂತಿಗೆ 50 ತುಂಬಿದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್‌ರವರು ಬರೆದಿರುವ ಲೇಖನ ಇಲ್ಲಿದೆ.

ಕತ್ತಲೆಯೊಂದಿಗೆ ಸೆಣಸುತ್ತಿರುವ ದಿಟ್ಟ ಹಣತೆ, ಕ್ಯೂಬಾ

50 ವರ್ಷಗಳ ಹಿಂದೆ ಜನವರಿ 1 ರಂದು ಫಿಡೆಲ್ ಕ್ಯಾಸ್ಟ್ರೋ ಅವರ ನೇತೃತ್ವದ ಸೈನ್ಯ ಕ್ಯೂಬಾದ ರಾಜದಾನಿ ಹವಾನದತ್ತ ಮುನ್ನುಗ್ಗುತ್ತಲೇ ಸರ್ವಾಧಿಕಾರಿ ಬ್ಯಾಟಿಸ್ಟಾ ಕುರ್ಚಿ ಖಾಲಿ ಮಾಡಿ ಓಡಿಹೋದ. ಜನವರಿ 8 ರಂದು ಫಿಡೆಲ್ ಕ್ಯಾಸ್ಟ್ರೋರವರ ಸೇನೆ ಹವಾನವನ್ನು ಪ್ರವೇಶಿಸಿ ಜಯ ಸಾಧಿಸಿತು.

ಅಂದಿನ ಸಂದರ್ಭದಲ್ಲಿ ಈ ಘಟನೆಯನ್ನು ಸರ್ವಾಧಿಕಾರಿಯ ವಿರುದ್ಧದ ಜನತೆಯ ಬಂಡಾಯ ಎಂದಷ್ಟೇ ಭಾವಿಸಲಾಗಿತ್ತು. ಆದರೆ ಮುಂದಿನ ಎರಡು ವರ್ಷಗಳಲ್ಲಿ ಇದು ಸಮಾಜವಾದಿ ಕ್ರಾಂತಿ ಎಂಬುದು ಸಾಬೀತಾಯಿತು. 1961ರ ಎಪ್ರಿಲ್‌ನಲ್ಲಿ ಪ್ರಥಮ ಬಾರಿಗೆ ಫಿಡೆಲ್ ಕ್ಯಾಸ್ಟ್ರೋರವರು "ಇದು ಶೋಷಿತರ (humble), ಶೋಷಿತರಿಂದ, ಶೋಷಿತರಿಗಾಗಿರುವ ಸಮಾಜವಾದಿ ಮತ್ತು ಪ್ರಜಾಪ್ರಭುತ್ವ ಕ್ರಾಂತಿ' ಎಂದು ಘೋಷಿಸಿದರು.

ಕ್ಯೂಬಾವನ್ನು ತನ್ನ ಅರೆ-ವಸಾಹತನ್ನಾಗಿ ಮಾಡಿಕೊಂಡಿದ್ದ ಅಮೇರಿಕಾವು ಕ್ಯಾಸ್ಟ್ರೋ ಮತ್ತು ಅವರ ಸಂಗಡಿಗರನ್ನು ಅಪಾಯಕಾರಿ ಕ್ರಾಂತಿಕಾರಿಗಳೆಂದು ಹೇಳಿತು. ಏಕೆಂದರೆ ಕ್ಯೂಬಾದಲ್ಲಿ 1959 ರ ಮೇನಲ್ಲಿ ಜ್ಯಾರಿಗೆ ತಂದ 'ಕೃಷಿ ಸುಧಾರಣಾ ಕಾಯಿದೆ'ಯು ದೊಡ್ಡ ಜಮೀನ್ದಾರರ ಹಾಗೂ ಅಮೇರಿಕಾದ ಕಂಪನಿಗಳ ಭೂಮಿಯನ್ನು ವಶಪಡಿಸಿಕೊಂಡಿತು. ಅದೇ ವರ್ಷದ ಜೂನ್ ತಿಂಗಳಲ್ಲಿ ಸೋವಿಯತ್ ಯೂನಿಯನ್‌ನಿಂದ ಬಂದ ತೈಲವನ್ನು ಶುದ್ಧೀಕರಿಸಲು ಒಪ್ಪದಿದ್ದಾಗ ಟೆಕ್ಸಾಕೊ, ಶೆಲ್ ಮತ್ತು ಎಸ್ಸೋ ಕಂಪನಿಗಳಿಗೆ ಸೇರಿದ ತೈಲ ಶುದ್ಧೀಕರಣ ಸ್ಥಾವರಗಳನ್ನು ಕ್ಯೂಬಾ ಸರಕಾರವು ಮುಟ್ಟುಗೋಲು ಹಾಕಿಕೊಂಡಿತು. 1959 ಡಿಸೆಂಬರ್‌ನಲ್ಲಿ ಅಮೇರಿಕಾದ ಅಧ್ಯಕ್ಷ ಐಸೆನ್ ಹೋವರ್‌ರವರು 'ಒಂದೇ ವರ್ಷದಲ್ಲಿ ಕ್ಯಾಸ್ಟ್ರೋ ರವರನ್ನು ಉರುಳಿಸಿ ಅಮೇರಿಕಾ ಪರ 'ಜುಂಟಾ' ಸರಕಾರವನ್ನು ರಚಿಸಬೇಕು' ಎಂದು ಸಿಐಎ ತಯಾರಿಸಿದ್ದ ಯೋಜನೆಗೆ ಒಪ್ಪಿಗೆ ನೀಡಿದ್ದರು. ಅಂದಿನಿಂದ ಕ್ಯೂಬಾದ ಸಮಾಜವಾದಿ ಸರಕಾರವನ್ನು ಕಿತ್ತೊಗೆಯಲು ಅಮೇರಿಕಾದ ಹತ್ತು ಅಧ್ಯಕ್ಷರು ಮಾಡುತ್ತಾ ಬಂದಿರುವ ಪ್ರಯತ್ನವನ್ನು ಕ್ಯೂಬಾದ ಜನತೆ ಮತ್ತು ಫಿಡೆಲ್ ಕ್ಯಾಸ್ಟ್ರೋ ಯಶಸ್ವಿಯಾಗಿ ಎದುರಿಸಿದ್ದಾರೆ.

ಮಹಾನ್ ಹೋರಾಟ :

ಲ್ಯಾಟಿನ್ ಅಮೇರಿಕಾ ದೇಶಗಳ ಮೇಲೆ ಪ್ರಭುತ್ವ ಸಾಧಿಸುವ ಹಾಗೂ ಲಾಭಕೋರ ಬಂಡವಾಳವಾದವನ್ನು ವಿಸ್ತರಿಸುವುದಕ್ಕೆ ಕ್ಯೂಬಾ ತಡೆಯೊಡ್ಡುತ್ತದೆ ಎಂಬುದನ್ನು ಅಮೇರಿಕಾ ಮನಗಂಡಿತ್ತು. ಅದಕ್ಕಾಗಿ ಆ ಭಾಗದಲ್ಲಿ ನಡೆದ ಪ್ರಥಮ ಸಮಾಜವಾದಿ ಕ್ರಾಂತಿಯನ್ನು ಕಿತ್ತೊಗೆಯಬೇಕಿತ್ತು. ಆದ್ದರಿಂದಲೇ 1961 ರಲ್ಲಿ ಪ್ರಥಮ ದಾಳಿ ಎಂಬಂತೆ ಪ್ಲಾಯಾ ಗಿರಾನ್‌ನಲ್ಲಿ 'ಬೇ ಆಫ್ ಪಿಗ್ಸ್' ಎಂಬ ಹೆಸರಿನಲ್ಲಿ ಆಕ್ರಮಣ ನಡೆಸಿತು. ಸಿಐಎ ಬೆಂಬಲಿತ ಈ ಸೈನ್ಯವನ್ನು ಹಿಮ್ಮೆಟ್ಟಿಸಿದ ಕ್ಯೂಬಾ ಕ್ರಾಂತಿ ಪಡೆ ಮುಂದೆ ನಡೆದ ಎಲ್ಲಾ ದುಷ್ಟ ಕೃತ್ಯಗಳನ್ನು ತಡೆಯುವಲ್ಲಿ ಯಶಸ್ವಿಯಾಯಿತು.

1975 ರಲ್ಲಿ ಅಮೇರಿಕಾದ ಕಾಂಗ್ರೆಸ್ಸಿನ ಸಮಿತಿಯ ವರದಿಗಳೇ ಹೇಳಿದಂತೆ ಹತ್ತಾರು ಬಾರಿ ಫಿಡೆಲ್ ಕ್ಯಾಸ್ಟ್ರೋರವರನ್ನು ಕೊಲೆ ಮಾಡಲು ಪ್ರಯತ್ನಿಸಿದ್ದಲ್ಲದೆ ಪ್ರಜಾಪ್ರಭುತ್ವವನ್ನು ನಾಶಪಡಿಸಲು ಭಯೋತ್ಪಾದಕರಿಗೆ ಹಣಕಾಸು



ಮತ್ತಿತರ ಸಹಾಯವನ್ನೂ ನೀಡಲಾಯ್ತು. 1976 ರಲ್ಲಿ ಬಾರ್ಬಡಸ್‌ನಲ್ಲಿ ಕ್ಯೂಬಾದ ನಾಗರೀಕರು ಪ್ರಯಾಣಿಸುತ್ತಿದ್ದ ವಿಮಾನವನ್ನು ಕೆಡವಿ 73 ಜನ ಅಮಾಯಕರ ಸಾವಿಗೆ ಕಾರಣವಾದುದು ಒಂದು ಪ್ರಮುಖ ಉದಾಹರಣೆ. ಭಯೋತ್ಪಾದಕ ಲೂಯಿಸ್ ಪೊಸಾಡ್ವಾ ಕ್ಯಾರಿಲ್ಸ್‌ನ ಕ್ಯೂಬಾಕ್ಕೆ ವರ್ಗಾಯಿಸದೆ ರಕ್ಷಣೆ ನೀಡುತ್ತಿದೆ.

ಆರ್ಥಿಕ ಸಮರ

ಈ ಎಲ್ಲಾ 50 ವರ್ಷಗಳಲ್ಲಿ ಕ್ಯೂಬಾದ ವಿರುದ್ಧ ಆರ್ಥಿಕ ದಿಗ್ಬಂಧನವನ್ನೇ ಹೇರಲಾಗಿತ್ತು. ಅಧ್ಯಕ್ಷ ರೇಗನ್‌ರ ಅವಧಿಯಲ್ಲಿ ಆರ್ಥಿಕ ದಿಗ್ಬಂಧನವನ್ನು ಹೆಚ್ಚಿಸಿದ್ದು ಮಾತ್ರವಲ್ಲದೆ, ಬುಶ್ ಅವಧಿಯಲ್ಲಿ ಹೊಸ ಕಟ್ಟುಪಾಡುಗಳನ್ನು ಹೇರಲಾಯ್ತು. ಈ ದಿಗ್ಬಂಧನದಲ್ಲಿ ಔಷಧಗಳೂ ಸೇರಿದ್ದು, ಕ್ಯೂಬಾದ ಜನತೆ ತೀವ್ರ ಸಂಕಷ್ಟಕ್ಕೆ ಗುರಿಯಾಗುವಂತಾಯ್ತು. ಮಕ್ಕಳ 'ಡಯಾಲಿಸಿಸ್'ಗೆ ಬೇಕಾಗುವ ಉಪಕರಣವನ್ನು ಕ್ಯೂಬಾಕ್ಕೆ ರಫ್ತು ಮಾಡದಂತೆ ಅಮೇರಿಕಾವು ಅಂತರರಾಷ್ಟ್ರೀಯ ಕಂಪನಿಗಳಿಗೆ ತಾಕೀತು ಮಾಡಿತು. 2008 ರ ನವೆಂಬರ್‌ನಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು ಆರ್ಥಿಕ ದಿಗ್ಬಂಧನವನ್ನು ನಿಲ್ಲಿಸಬೇಕೆಂದು ಎರಡು ದೇಶಗಳನ್ನು ಹೊರತುಪಡಿಸಿ (ಇಸ್ರೇಲ್ ಮತ್ತು ಪಾಲಾವು) ಉಳಿದವರೆಲ್ಲರೂ ಮತ ನೀಡಿದರೂ ಅಮೇರಿಕಾ ತನ್ನ ಹಗೆತನವನ್ನು ನಿಲ್ಲಿಸಲಿಲ್ಲ.

ಅಪರಿಮಿತ ಸಾಧನೆ

ಜಗತ್ತಿನ ಅತ್ಯಂತ ಬಲಾಢ್ಯ ಸಾಮ್ರಾಜ್ಯಶಾಹಿ ದೇಶದಿಂದ ಅಘೋಷಿತ ಯುದ್ಧವನ್ನು ಎದುರಿಸಿಯೂ ಕ್ಯೂಬಾ ಸಮಾಜವಾದದ ದಾರಿಯಲ್ಲಿ ಮುಂದೆ ಸಾಗಿದೆ. 1 ಕೋಟಿ 10 ಲಕ್ಷ ಜನ ಸಂಖ್ಯೆಯ ಪುಟ್ಟ ದೇಶದ ಸಾಧನೆ ನಿಜಕ್ಕೂ ಶ್ಲಾಘನೀಯ. ಸಾಮೂಹಿಕ ಸಾಕ್ಷರತೆಯ ಮೂಲಕ ಒಂದೇ ವರ್ಷದಲ್ಲಿ ನಿರಕ್ಷರತೆಯನ್ನು ಹೋಗಲಾಡಿಸಲಾಯ್ತು. ಇದು ಜಗತ್ತಿನ ಎಲ್ಲಾ ದೇಶಗಳಿಗೆ ಮಾದರಿಯಾಗಿದೆ. ಕ್ಯೂಬಾದಿಂದ ಸ್ಫೂರ್ತಿ ಪಡೆದ ಲ್ಯಾಟಿನ್ ಅಮೇರಿಕಾದ ಇನ್ನೆರಡು ದೇಶಗಳಾದ ವೆನೆಜುವೆಲಾ 2005 ರಲ್ಲಿ ಮತ್ತು ಬೊಲಿವಿಯಾ 2008 ರಲ್ಲಿ ನಿರಕ್ಷರತೆಯನ್ನು ಸಂಪೂರ್ಣವಾಗಿ ದೂರ ಮಾಡಿತು.

ಕ್ಯೂಬಾದ ಆರೋಗ್ಯ ಸೇವೆ ಜಗತ್ತಿಗೇ ಮಾದರಿಯಾಗಿದೆ. ಅಲ್ಲಿ 1 ಲಕ್ಷ ಜನರಿಗೆ 591 ಡಾಕ್ಟರುಗಳಿದ್ದಾರೆ. ಅಮೇರಿಕಾದಲ್ಲಿ 1 ಲಕ್ಷ ಜನರಿಗೆ ಕೇವಲ 256 ಡಾಕ್ಟರುಗಳು ಮಾತ್ರ ಇದ್ದಾರೆ. ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಉತ್ತಮವಾಗಿರುವುದರ ಫಲವಾಗಿ ಶಿಶು ಮರಣ ಪ್ರಮಾಣ ಅತ್ಯಂತ ಕಡಿಮೆ ಇದ್ದು (1 ಸಾವಿರಕ್ಕೆ 5.3) ಜೀವಿತದ ಅವಧಿ ಅಮೇರಿಕಾಕ್ಕಿಂತ ಹೆಚ್ಚಾಗಿದೆ. (ಸರಾಸರಿ 77.7 ವರ್ಷ) ಕ್ಯೂಬಾ ತನ್ನ ಒಟ್ಟು ಉತ್ಪಾದನೆ (ಜಿಡಿ.ಪಿ)ಯ ಶೇ.6.3 ರಷ್ಟು ಆರೋಗ್ಯ ಸೇವೆಗೆ ಬಳಸಿದರೆ ಶೇ.7ರಷ್ಟನ್ನು ಶಿಕ್ಷಣಕ್ಕೆ ಮೀಸಲಾಗಿರಿಸಿದೆ. ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಬೆಳವಣಿಗೆ ಹೊಂದುತ್ತಿರುವ ಯಾವುದೇ ದೇಶಗಳಿಗೆ ಹೋಲಿಸಲು ಸಾಧ್ಯವಿಲ್ಲ. ನಮ್ಮ ದೇಶವು ತನ್ನ ಒಟ್ಟು ಉತ್ಪಾದನೆಯಲ್ಲಿ (ಜಿಡಿಪಿ) ಕೇವಲ ಶೇ.1ರಷ್ಟು ಮಾತ್ರ ಆರೋಗ್ಯ ಸೇವೆಗೆ ಬಳಸುತ್ತದೆ.

17ನೇ ಶತಮಾನದಲ್ಲಿ ಆಫ್ರಿಕಾ ದೇಶಗಳಿಂದ ಕಪ್ಪು ಗುಲಾಮರನ್ನು ಆಮದು ಮಾಡಿಕೊಳ್ಳುತ್ತಿದ್ದ ಕ್ಯೂಬಾ ಇಂದು ವರ್ಣಬೇಧವೇ ಇಲ್ಲದ ಸಮಾಜವನ್ನು ನಿರ್ಮಿಸಿದೆ. ಮಹಿಳಾ ಸಮಾನತೆ ಮತ್ತು ಮಕ್ಕಳ ಹಕ್ಕುಗಳಲ್ಲಿಯೂ ಕ್ಯೂಬಾ ಪ್ರಧಾನ ಪಾತ್ರವನ್ನು ವಹಿಸಿದೆ.

ಕ್ಯೂಬಾದಲ್ಲಿ ನಿರ್ಮಾಣವಾದ ಸಾಮಾಜಿಕ ವಿಮೋಚನೆಯಿಂದಾಗಿ ಜಗತ್ತಿಗೆ ಉತ್ತಮವಾದ ಸಿನೆಮಾ, ಸಾಹಿತ್ಯ, ಕಲೆ ಮತ್ತು ಕ್ರೀಡೆಗಳನ್ನು ನೀಡಲು ಆ ಸಮಾಜಕ್ಕೆ ಸಾಧ್ಯವಾಗಿದೆ.

ಸಮಾಜವಾದದ ಅಂತರರಾಷ್ಟ್ರೀಯತೆ

ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾ ದೇಶಗಳ ರಾಷ್ಟ್ರೀಯ ವಿಮೋಚನಾ ಚಳುವಳಿಗೆ ಕ್ಯೂಬಾದ ಕ್ರಾಂತಿಯು ಸ್ಫೂರ್ತಿಯ ದಾರಿದೀಪವಾಗಿದೆ. ಸಾಮ್ರಾಜ್ಯಶಾಹಿ ವಿರೋಧದಿಂದ ಹುಟ್ಟಿದ ಅಲ್ಲಿನ ಕ್ರಾಂತಿಯು ತನ್ನ ಅಂತರರಾಷ್ಟ್ರೀಯ ಕರ್ತವ್ಯವನ್ನು ಪೂರೈಸುವುದರಲ್ಲಿ ಇನ್ಯಾವುದೇ ಸಮಾಜವಾದಿ ರಾಷ್ಟ್ರಗಳಿಗಿಂತ ಹೆಚ್ಚಾಗಿ ಕ್ಯೂಬಾ ತೊಡಗಿದೆ. ಅಂಗೋಲಾದ ವಿಮೋಚನಾ ಚಳುವಳಿಗೆ ನೀಡಿದ ಸಹಾಯ ಚರಿತ್ರೆಯಲ್ಲಿಯೇ ಅಪರೂಪ. ಅಂಗೋಲಾದ ರಾಜಧಾನಿ ಲಾಂಡಾದಲ್ಲಿ ಅಂದಿನ ದಕ್ಷಿಣ ಆಫ್ರಿಕಾದ ವರ್ಣಭೇದದ ಸೈನ್ಯವು ಮುನ್ನುಗ್ಗುತ್ತಿದ್ದ ಸಂದರ್ಭದಲ್ಲಿ ಕ್ಯೂಬಾದ ಪಡೆಯು ತಡೆದು ನಿಲ್ಲಿಸಿತು. ಕ್ಯೂಬಾದ 40,000 ಸೈನಿಕ ಪಡೆ ಸಮರಶೀಲ ಹೋರಾಟ ನಡೆಸಿ ಅಂಗೋಲಾದಿಂದ ದಕ್ಷಿಣ ಆಫ್ರಿಕಾದ ಸೈನ್ಯವನ್ನು ಓಡಿಸಿತು. ದಕ್ಷಿಣ ಆಫ್ರಿಕಾ ದೇಶಗಳು, ಅಂಗೋಲಾ, ಮೊಜಾಂಬಿಕ್, ಜಿಂಬಾಬ್ವೆ, ನಮಿಬಿಯಾ ಮೊದಲಾದ ದೇಶಗಳ ವಿಮೋಚನಾ ಹೋರಾಟದ ಸಂದರ್ಭದಲ್ಲಿ ಕ್ಯೂಬಾದ ಕ್ರಾಂತಿಕಾರಿ ಸೇನಾಪಡೆ ವಹಿಸಿದ ಪಾತ್ರ ಸ್ಮರಣೀಯ. ತನ್ನ ಡಾಕ್ಟರುಗಳು ಮತ್ತು ಆರೋಗ್ಯ ಸೇವಾ ನೌಕರರನ್ನು ವಿವಿಧ ದೇಶಗಳಿಗೆ ಕಳಿಸುವ ಮೂಲಕ ಕ್ಯೂಬಾ ಮಹತ್ವದ ಸೇವೆಯನ್ನು ಮಾಡುತ್ತಿದೆ. ಲ್ಯಾಟಿನ್ ಅಮೇರಿಕಾ

ಪುಟ 15ಕ್ಕೆ

ಮಹಾ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿರುವ ಫಿಡಲ್ ಕ್ಯಾಸ್ಟ್ರೋ



ಜಗದಗಲ

ಶರತ್‌ಚಂದ್ರ

ಗ್ರೀಕ್ ಪ್ರತಿಭಟನೆ - ಯುರೋಪಿನ ತುಂಬಾ ಹರಡುವವೇ?

ಡಿಸೆಂಬರ್ ಎರಡನೇ ವಾರದಲ್ಲಿ ಗ್ರೀಸ್ ನಲ್ಲಿ ನಡೆದ ವ್ಯಾಪಕ ಪ್ರತಿಭಟನೆ ಮತ್ತು ಯುವಕರ ದಂಗೆ ಎಲ್ಲರನ್ನೂ ದಂಗು ಬಡಿಸಿದೆ. ಎಲ್ಲಾ ಮಾಧ್ಯಮಗಳು ಇವನ್ನು 'ದಂಗೆಗಳು' ಎಂದು ಕರೆದು ಎಂದಿನಂತೆ ಕೆಲವರು ನಡೆಸಿದ ಹಿಂಸಾಚಾರದ ಮೇಲೆ ಮಾತ್ರ ಒತ್ತು ನೀಡಿದವು. ನಿಜವಾಗಿಯೂ ಇದು ಗ್ರೀಕ್ ಸರ್ಕಾರದ ಜನ-ವಿರೋಧಿ ನೀತಿಗಳು ದುರ್ಭರ ಆರ್ಥಿಕ ಪರಿಸ್ಥಿತಿಯ ವಿರುದ್ಧ ಯುವಕರ, ಕಾರ್ಮಿಕರ, ಶಿಕ್ಷಕರ, ನಾಗರೀಕರ ದೇಶ-ವ್ಯಾಪಿ ಪ್ರತಿಭಟನೆ. ಹಲವು ದಿನಗಳ ಕಾಲ ಪೋಲೀಸರನ್ನು ತುದಿಗಾಲಿನಲ್ಲಿ ನಿಲ್ಲಿಸಿದ ಈ ಪ್ರತಿಭಟನೆಗೆ ಕಾಪನ್ ಹೆಗನ್‌ನಿಂದ ಮಾಸ್ಕೋವರೆಗೆ ವ್ಯಾಪಕ ಸಹಾನುಭೂತಿ ದೊರಕಿದೆ. ಇಂತಹ ದಂಗೆಗಳು ಯುರೋಪಿನ ಯಾವುದೇ ದೇಶದಲ್ಲಿ ಯಾವಾಗ ಬೇಕಾದರೂ ನಡೆಯಬಹುದು ಎಂಬ ಮಾಧ್ಯಮಗಳ ಟಿಪ್ಪಣಿ ಯುರೋಪಿನ ಆಳುವ ವರ್ಗಗಳು ಮತ್ತು ಸರ್ಕಾರಗಳನ್ನು ನಡುಗಿಸಿದೆ. ಇದು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಪರಿಣಾಮಗಳಿಂದ ನರಳುತ್ತಿರುವ ಜನತೆಯ ಮೊದಲ ಪ್ರಬಲ ಪ್ರತಿಭಟನೆ ಎನ್ನಲಾಗಿದೆ.

ವ್ಯಾಪಕ ಪ್ರತಿಭಟನೆ ಆರಂಭವಾದ್ದು ಯುವಕರ ಪ್ರತಿಭಟನಾ ಪ್ರದರ್ಶನದ ಮೇಲೆ ಪೋಲಿಸರು ಗೋಲಿಬಾರು ಮಾಡಿ 15 ವರ್ಷದ ಬಾಲಕ ಅಲೆಕ್ಸಾಂಡ್ರೋಸ್‌ನನ್ನು ಸಾಯಿಸಿದಾಗ. ಗ್ರೀಸ್ ನ ಸರ್ಕಾರ ಅದರ ಜನ-ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಪ್ರತಿಭಟಿಸುವ ಜನರೆಲ್ಲಾ 'ಭಯೋತ್ಪಾದಕರು', ಅವರನ್ನು ಕ್ರೂರವಾಗಿ ಮಟ್ಟ ಹಾಕಬೇಕು ಎಂಬ ತರಬೇತಿಯನ್ನು ಪೋಲೀಸರಿಗೆ ನೀಡಿದೆ. ಇತ್ತೀಚೆಗೆ ಯುರೋಪಿಯನ್ ಒಕ್ಕೂಟ ಪಾಸು ಮಾಡಿದ 'ಭಯೋತ್ಪಾದನೆ-ವಿರೋಧಿ'



ಕಾನೂನುಗಳನ್ನು ಅವರು ಬಳಸಿಕೊಳ್ಳುತ್ತಿದ್ದಾರೆ. ಕಾರ್ಮಿಕರು, ಉದ್ಯೋಗಿಗಳು, ವಿದ್ಯಾರ್ಥಿಗಳು, ಯುವಕರು ಪೋಲೀಸರ ಈ ಕ್ರೌರ್ಯವನ್ನು ಇತ್ತೀಚೀನ ವರ್ಷಗಳಲ್ಲಿ ಎದುರಿಸುತ್ತಾ ಬಂದಿದ್ದಾರೆ. ಈ ಸಂದರ್ಭದಲ್ಲಿ ಮಾತ್ರ ಸಹನೆಯ ಕಟ್ಟೊಡೆಯಿತು. ದೇಶದ ಎಲ್ಲಾ ನಾಲ್ಕು ವಿಶ್ವವಿದ್ಯಾಲಯಗಳ, ಕಾಲೇಜುಗಳ, ಸ್ಕೂಲುಗಳ ವಿದ್ಯಾರ್ಥಿಗಳು ತರಗತಿಗಳ ಬಹಿಷ್ಕಾರ ಮಾಡಿದರು. ಹಲವು ದಿನಗಳ ಕಾಲ ಶಿಕ್ಷಣ ಸಂಸ್ಥೆಗಳು ಮುಚ್ಚಿದ್ದವು. ಶಿಕ್ಷಕರೂ, ಕಾರ್ಮಿಕರು, ಉದ್ಯೋಗಿಗಳು, ಯುವಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ದೇಶದಾದ್ಯಂತ ಗ್ರೀಕ್ ಕಮ್ಯುನಿಸ್ಟ್ ಪಕ್ಷ ಮತ್ತು ಯುವ ಕಮ್ಯುನಿಸ್ಟ್ ಲೀಗ್ ಈ ಪ್ರತಿಭಟನೆ ಸಂಘಟಿಸುವಲ್ಲಿ ದೊಡ್ಡ ಪಾತ್ರ ವಹಿಸಿತು. ಹಳ್ಳಿಗಳಲ್ಲೂ ರೈತರು, ಸಣ್ಣ ವ್ಯಾಪಾರಿಗಳು, ಯುವಕರು ಹೆದ್ದಾರಿಗಳಲ್ಲಿ ರಾಸ್ತಾ ರೋಕೋ ಮಾಡಿ ಪ್ರತಿಭಟಿಸಿದರು.

ಇದಕ್ಕೆ ಮೊದಲೇ ಡಿಸೆಂಬರ್ 10 ರಂದು ರೈತ-ಕಾರ್ಮಿಕ-ಯುವಜನ ಸಂಘಟನೆಗಳು ಸಾರ್ವತ್ರಿಕ ಮಹಾ ಮುಷ್ಕರಕ್ಕೆ ಕರೆ ನೀಡಿದ್ದವು. ಪೆನ್ಶನ್, ವೇತನ ಏರಿಕೆ, ಲೇ-ಆಫ್‌ಗಳಿಗೆ ತಡೆ, ಶಿಕ್ಷಣ ಮತ್ತು ಆರೋಗ್ಯ ಸೇವೆಯ ಹಕ್ಕಿಗಾಗಿ ಈ ಮುಷ್ಕರಕ್ಕೆ ಕರೆ ನೀಡಲಾಗಿತ್ತು. ಮುಷ್ಕರ ದೊಡ್ಡ ರೀತಿಯಲ್ಲಿ ಸಫಲವಾಗಿ ಗ್ರೀಕ್ ಜನಜೀವನ ಅಂದು ಸ್ತಬ್ಧವಾಗಿತ್ತು. ಕಳೆದ ಎರಡು ತಿಂಗಳೊಳಗೆ ಇದು ಸಫಲತೆ ಕಂಡ ಎರಡನೇ ಸಾರ್ವತ್ರಿಕ ಮುಷ್ಕರ. ಇದರಿಂದಲೇ ಸರ್ಕಾರದ ವಿರುದ್ಧ ಗ್ರೀಕ್ ಜನತೆಯ ಆಕ್ರೋಶದ ಅಂದಾಜು ಮಾಡಬಹುದು. ಈ ಸನ್ನಿವೇಶದಲ್ಲಿ ಅರಾಜಕತಾವಾದಿಗಳು ಮತ್ತು ಗೂಂಡಾ ಜನ ವ್ಯಾಪಕ ಲೂಟಿ, ಹಿಂಸಾಚಾರ ನಡೆಸ ಹತ್ತಿದರು. ರಾಜಧಾನಿಯಲ್ಲಿ ದೊಡ್ಡ ಪ್ರಮಾಣದ ಲೂಟಿ ನಡೆಯಿತು. ದೇಶವ್ಯಾಪಿ ಪ್ರತಿಭಟನೆಯ ಮೇಲೆ ಹಿಂಸಾಚಾರದ ಆರೋಪ ಮಾಡಿ ಅದನ್ನು ನಿಲ್ಲಿಸಲು ಸರ್ಕಾರ ಪ್ರಯತ್ನಿಸಿತು. ಜನರ ಪ್ರತಿಭಟನೆ ಹಿಂಸಾಚಾರವನ್ನು ಖಂಡಿಸಿ ಮುಂದುವರೆಯಿತು. 'ಕೆಲವು ಗೂಂಡಾಗಳ ಅತಿರೇಕ', 'ಯುವಕರ ತಾತ್ಕಾಲಿಕ ಆಕ್ರೋಶ' ಎಂದು ಅದನ್ನು ಜರೆಯುವ, ಹತ್ತಿಕ್ಕುವ ಸರ್ಕಾರದ ಪ್ರಯ[...] ಫಲಿಸಲಿಲ್ಲ. ಹೊಸ ಜನವಿಭಾಗಗಳು ಪ್ರತಿಭಟನೆ[...] ಸೇರಿದವು.

ಯುರೋಪಿನಾದ್ಯಂತ ಕಾಪನ್ ಹೆಗನ್‌ನಿಂ[...] ಮಾಸ್ಕೋವರೆಗೆ ಸಹಾನುಭೂತಿ ಪ್ರದರ್ಶನಗ[...] ನಡೆದು, ಗ್ರೀಕ್ ಪ್ರತಿಭಟನೆಗೆ ವ್ಯಾಪಕ ರೂ[...] ನೀಡಿದವು. ಇದು ಜಾಗತಿಕ ಆರ್ಥಿಕ ಬಿಕ್ಕಟ್ಟಿ[...] ಪರಿಣಾಮಗಳಿಂದ ನರಳುತ್ತಿರುವ ಜನತೆಯ[...] ಪ್ರತಿಭಟನೆ ಎಂಬುದು ಈಗ ಎಲ್ಲರಿಗ[...] ಸ್ಪಷ್ಟವಾಗುತ್ತಿದೆ. ಗ್ರೀಕ್ ನಿರುದ್ಯೋಗದ ಪ್ರಮಾ[...] (ಶೇ. 7.4) ಯುರೋಪಿನ ಸರಾಸರಿ[...] ಇದ್ದರೂ, ಯುವ (16-25 ವರ್ಷದ) ನಿರು[...] ಶೆ. 30 ರ ವರೆಗೆ ಇದೆ ಎಂದು ಅಂದಾ[...] ಮಾಡಲಾಗಿದೆ. ಯುವ ಜನರಲ್ಲಿ ಬಡತನ ಸ[...] ಶೇ. 25 ರಷ್ಟಿದೆ. ನಿರುದ್ಯೋಗ ಹೆಚ್ಚುತ್ತಿದ್ದು ತಮ[...] ಭವಿಷ್ಯವೇ ಇಲ್ಲ ಎಂಬ ಆಕ್ರೋಶ ಯುವಕರ[...] ವ್ಯಾಪಕವಾಗಿದೆ. ಅದರಲ್ಲೂ ವಿಶ್ವವಿದ್ಯಾಲ[...] ಶಿಕ್ಷಣದಿಂದ (ದುಬಾರಿ ಉಚ್ಚ ಶಿಕ್ಷಣದಿಂದಾ[...] ವಂಚಿತರಾದವರ ಆಕ್ರೋಶ ಇನ್ನೂ ಹೆಚ್ಚು. ಗ್ರೀ[...] ಸರ್ಕಾರದ ಜನ-ವಿರೋಧಿ ಧೋರಣೆ ಯಾವು[...] ಆಶಾಭಾವನೆಯನ್ನು ಹೊಸಕಿ ಹಾಕಿದೆ. ಇ[...] ಗ್ರೀಸ್‌ನಲ್ಲಿ ಈ ಆಕ್ರೋಶ ಸ್ಫೋಟ ಆಗಲೂ ಕಾರ[...] ಎನ್ನಲಾಗಿದೆ. ಆದರೆ ಯುರೋಪಿನ ಫ್ರಾನ್[...] ಇಟಲಿ ಯಂತಹ ಇತರ ದೇಶಗಳಲ್ಲೂ ಇಂತಹು[...] ಸ್ಥಿತಿ ಇದೆ. ಅದು ಯಾವಾಗ ಬೇಕಾದ[...] ಸ್ಫೋಟವಾಗಬಹುದು ಎಂದು ರಾಜಕೀ[...] ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ.

'ಬ್ಯಾಂಕ್ ಆಫ್ ಅಮೆರಿಕಾ, ನಿಮಗೆ ಬೇಲ್ ಸಿಕ್ಕಿತು, ಆದರೆ ನಾವು ಸೇಲೆ ಆದೆವು !'

ಅಮೆರಿಕದ ಚುನಾಯಿತ ಅಧ್ಯಕ್ಷರ ಊರಿನಿಂದ ಒಂದು ಒಳ್ಳೆಯ ಸುದ್ದಿ. ಇಲ್ಲ ಒಬಾಮಾ ಯಾವ ಜನಪರ ಆರ್ಥಿಕ ನೀತಿ ಪ್ರಕಟ ಮಾಡಿಲ್ಲ. ಅಥವಾ ಜನಪರ ವ್ಯಕ್ತಿಗಳನ್ನು ತಮ್ಮ ತಂಡಕ್ಕೆ ಸೇರಿಸಿಕೊಂಡಿಲ್ಲ. ಚಿಕಾಗೋದ ಒಂದು ಸಣ್ಣ ಕಾರ್ಖಾನೆಯ ಕಾರ್ಮಿಕರು ತಮ್ಮ ಹೋರಾಟದಿಂದ ತಮ್ಮ ಕಾನೂನು ಬದ್ಧ ಹಕ್ಕು-ಸವಲತ್ತುಗಳನ್ನು ಪಡೆದರು. ಅದರಲ್ಲಿ ಏನು ವಿಶೇಷ ಎಂದಿರಾ? ಇಂದಿನ ಅಮೆರಿಕದಲ್ಲಿ ಅದು ದೊಡ್ಡ ವಿಶೇಷ! ಕಾರ್ಮಿಕರು ತಮ್ಮ ಕಾನೂನು ಬದ್ಧ ಹಕ್ಕು-ಸವಲತ್ತುಗಳನ್ನು ಪಡೆಯಲು ಹೋರಾಟ ಮಾಡುವ ಧೈರ್ಯ ಮಾಡುವುದು ಮತ್ತು ಗೆಲ್ಲುವದು ಎರಡೂ ಬಹಳ ವಿಶೇಷ. 300 ಕಾರ್ಮಿಕರು ಕೆಲಸ ಮಾಡುವ 'ರಿಪಬ್ಲಿಕ್ ವಿಂಡೋಸ್ ಅಂಡ್ ಡೋರ್ಸ್' ಮಾಲಿಕರು ಏಕಾಏಕಿ ಡಿಸೆಂಬರ್ 5 ರಂದು ಕಾರ್ಖಾನೆ ಮುಚ್ಚುವ ಘೋಷಣೆ ಮಾಡಿದರು. ಮನೆಗಳ ಕಟ್ಟುವ ರಿಪೇರಿ ಮಾಡುವ ವಹಿವಾಟು ನಡೆಸುತ್ತಿದ್ದು, ಇತ್ತೀಚಿನ 'ಸಬ್ ಪ್ರೈಮ್ ಮನೆಸಾಲ' ಬಿಕ್ಕಟ್ಟಿನಿಂದ ಬೇಡಿಕೆ ಕಳೆದು ಕೊಂಡಿತ್ತು. ಕಾರ್ಖಾನೆ ಮಾಲಿಕರು 50 ಲಕ್ಷ ಡಾಲರು ಸಾಲಕ್ಕೆ ಬ್ಯಾಂಕ್ ಆಫ್ ಅಮೆರಿಕ ಮತ್ತು ಜೆ ಪಿ ಮೋರ್ಗನ್ ಚೇಸ್ ಬ್ಯಾಂಕುಗಳಿಗೆ ಅರ್ಜಿ ಕೊಟ್ಟರು. ಅದನ್ನು ಆ ಬ್ಯಾಂಕುಗಳು ನಿರಾಕರಿಸಿದವು.

ಆ ಬ್ಯಾಂಕುಗಳಿಂದ ಸಾಲ ಪಡೆದು ಅದರ ಒಡೆತನದಲ್ಲಿ ಇರುವ 'ರಿಪಬ್ಲಿಕ್' ಕಾರ್ಖಾನೆ ತಕ್ಷಣ ಮುಚ್ಚಬೇಕು. ಅಮೆರಿಕದ ಕಾನೂನು ಪ್ರಕಾರ ಅಗತ್ಯ ಎರಡು ತಿಂಗಳ ನೋಟೀಸ್ ಕೊಡುವ ಅಥವಾ ಆ ಅವಧಿಯ (ಚಿಕಾಗೋದ ಪ್ರಾಂತೀಯ ಕಾನೂನು ಪ್ರಕಾರ 75 ದಿನಗಳ) ವೇತನ ಕೊಡುವ ಅಗತ್ಯ ಇಲ್ಲ. ಹೀಗೆ ಅಪ್ಪಣೆ ಕೊಡಿಸಿದವು, ಸರ್ಕಾರದಿಂದ ಇತ್ತೀಚೆಗೆ 300 ಶತಕೋಟಿ ಡಾಲರುಗಳ 'ಬೆಲ್ ಔಟ್' ಪಡೆದಿರುವ ಪ್ರಮುಖ ಬ್ಯಾಂಕುಗಳ ಪಟ್ಟಿಯಲ್ಲಿ ಇರುವ ಆ ಬ್ಯಾಂಕುಗಳು. ಆದರೆ ಯೂನಿಯನ್‌ನಲ್ಲಿ ಸಂಘಟಿತರಾದ (ಅದೂ ಇಂದಿನ ಅಮೆರಿಕದಲ್ಲಿ ಅಪರೂಪವೇ!) ರಿಪಬ್ಲಿಕ್ ಕಾರ್ಮಿಕರು ಸುಮ್ಮನಿರಲಿಲ್ಲ. ಪ್ರತಿಭಟನೆಗೆ ಮಾಲೀಕರು-ಬ್ಯಾಂಕುಗಳು ಸೊಪ್ಪು ಹಾಕದಿದ್ದಾಗ ಕಾರ್ಖಾನೆಯು ಒಳಗೆ ಸೇರಿಕೊಂಡು ವಶಪಡಿಸಿಕೊಂಡರು. ಅವರ ಯೂನಿಯನಿನ ರಾಷ್ಟ್ರೀಯ ಫೆಡರೇಶನ್ 'ಯುನೈಟೆಡ್ ಇಲೆಕ್ಟ್ರಿಕಲ್ ವರ್ಕರ್ಸ್' ಬೆಂಬಲಕ್ಕೆ ನಿಂತಿತು. ಅದು 1930 ರ ದಶಕದಲ್ಲಿ ಸಮರಶೀಲ ಚರಿತ್ರೆ ಹೊಂದಿರುವ ಯೂನಿಯನ್. ರಿಪಬ್ಲಿಕ್ ಕಾರ್ಮಿಕರಿಗೆ ಬೆಂಬಲ, ಸಹಾನುಭೂತಿ ಹರಿದು ಬಂತು. ಇಂದಿನ ಅಮೆರಿಕದಲ್ಲಿ ಅದೂ ಭಾರೀ ವಿಶೇಷವೇ.

ಸ್ಥಳೀಯವಾಗಿ ಇತರ ಕಾರ್ಖಾನೆಗಳ ಕಾರ್ಮಿಕರು (ಕೆಲಸ ಕಳೆದುಕೊಂಡವರು ಸೇರಿದಂತೆ), ನಾಗರಿಕರು, ಚರ್ಚು ಸಂಘಟನೆಗ[...] ಸಾಮಾಜಿಕ ಕಾರ್ಯಕರ್ತರು ರಿಪಬ್ಲಿಕ್ ಕಾರ್ಮಿ[...] ಬೆಂಬಲಕ್ಕೆ ನಿಂತರು. ಅವರಿಗೆ ಊಟ, ಧನಸಹಾ[...] ಮಾಡಿ ಅವರ ಹೋರಾಟ ಮುಂದುವರೆಯುವ[...] ಮಾಡಿದರು. ಈ ವ್ಯಾಪಕ ಜನಬೆಂಬಲ ನೋ[...] ಪೋಲೀಸರಿಗೆ ಅವರ ಮೇಲೆ ಕಾರ್ಯಾಚ[...] ಮಾಡುವ ಧೈರ್ಯ ಬರಲಿಲ್ಲ. ಬೇಲ್ ಔಟ್ [...] 25 ಶತಕೋಟಿ ಡಾಲರು ಪಡೆದಿರುವ ಬ್ಯಾ[...] ಆಫ್ ಅಮೆರಿಕದ ವಿರುದ್ಧ ಜನ ತಿರುಗಿ ಬಿದ್ದ[...] ರಿಪಬ್ಲಿಕ್ ಕಾರ್ಮಿಕರಿಗೆ ಬರಬೇಕಾದ ಕಾನೂನು[...] ಸವಲತ್ತು ಕೊಡದಿದ್ದರೆ ಆ ಬ್ಯಾಂಕನ್ನು ದೇಶದಾದ್[...] ಬಹಿಷ್ಕರಿಸುವುದಾಗಿ ಒಂದು ಕೋಟಿ ಸದಸ್ಯರಿ[...] 'ಯುನೈಟೆಡ್ ಆಟೋ ವರ್ಕರ್ಸ್' ಯೂನಿಯ[...] ಬೆದರಿಸಿತು. ಸ್ಥಳೀಯ ಮತ್ತು ಪ್ರಾಂತೀ[...] ಸರ್ಕಾರಗಳು ಸಹ ಬೆಂಬಲಿಸಿ ಬ್ಯಾಂಕ್ ಆ[...] ಅಮೆರಿಕಕ್ಕೆ ಬಹಿಷ್ಕಾರದ ಬೆದರಿಕೆ ಹಾಕಿ[...] ಒಬಾಮಾ ಸಹ ರಿಪಬ್ಲಿಕ್ ಕಾರ್ಮಿ[...] ಕಾನೂನುಬದ್ಧ ಸವಲತ್ತು ಕೊಡಬೇಕು ಎಂದು [...] ಬೆಂಬಲಿಸಿದರು.

ಕ್ಯೂಬಾ ಕ್ರಾಂತಿಗೆ ಸುವರ್ಣ ಸಂಭ್ರಮ.....

ಪುಟ 13 ರಿಂದ

ರಿಬಿಯಾ ಮತ್ತು ಆಫ್ರಿಕಾ ದೇಶಗಳಿಗೆ ತನ್ನ ,000 ಕ್ಕೂ ಹೆಚ್ಚು ಡಾಕ್ಟರುಗಳನ್ನು ಕಳಿಸಿದೆ. ಅವರ ರ್ಥರಹಿತ ಸೇವೆಯು ಸಾಮಾನ್ಯ ಜನರಿಗೆ ್ಯೂಬಾವನ್ನು ಪರಿಚಯಿಸಿದೆ.

ಶೇಷ ಮತ್ತು ಕಷ್ಟದ ಅವಧಿ

ಸೋವಿಯತ್ ಯೂನಿಯನ್‌ನ ವಿಘಟನೆಯು ್ಯೂಬಾವನ್ನು ಬಿಕ್ಕಟ್ಟಿನ ಸ್ಥಿತಿಗೆ ಕೊಂಡೊಯ್ದಿತು. ್ಯೂಬಾದ ಬಹುತೇಕ ವಾಣಿಜ್ಯ ಮತ್ತು ಆರ್ಥಿಕ ಕಾರವು ಅಂದಿನ ಸೋವಿಯತ್ ಯೂನಿಯನ್ ತ್ತು ಪೂರ್ವ ಯುರೋಪ್ ರಾಷ್ಟ್ರಗಳೊಂದಿಗೆ ಯುತ್ತಿತ್ತು. ಅಲ್ಲಿನ ಕಮ್ಯೂನಿಸ್ಟ್ ಸರಕಾರಗಳ ನದ ನಂತರ ವ್ಯಾಪಾರ, ವಹಿವಾಟುಗಳ ತದಿಂದಾಗಿ 1991 ರಲ್ಲಿ ಒಟ್ಟು ಉತ್ಪಾದನೆ .10ರಷ್ಟು ಕುಸಿತ ಕಂಡರೆ 1993 ರಲ್ಲಿ ಶೇ.14.9 ತ ಹೊಂದಿತು. ಅಮೇರಿಕಾ ಮತ್ತು ವಲಯಗಳಲ್ಲಿ ಕ್ಯೂಬಾ ಬಿಕ್ಕಟ್ಟಿನಿಂದ ರಬರಲು ಸಾಧ್ಯವಿಲ್ಲ ಎಂದು ಸಂತೋಷ ಾಡಿತು. ಆದರೆ ಮೂರು ದಶಕಗಳಲ್ಲಿ ವಣಿಗೆ ಸಾಧಿಸಿದ ಸಮಾಜವಾದಿ ವ್ಯವಸ್ಥೆಯ ತರ್ಗತ ಶಕ್ತಿಯು ದೃಢತೆಯಿಂದ ಮುನ್ನುಗ್ಗಿ ಟ್ಟನ್ನು ಎದುರಿಸಿತು. ಈ ವಿಶೇಷ ಅವಧಿಯಲ್ಲಿ ಆರ್ಥಿಕ ಸ್ವಾವಲಂಬನೆ ಕಾಯ್ದುಕೊಳ್ಳಲು, ಕೃಷಿ ತ್ಪಾದನೆ ಹೆಚ್ಚಿಸಲು, ಇಂಧನವನ್ನು ಸಂರಕ್ಷಿಸಲು ವ್ರವಾದ ಪ್ರಯತ್ನಗಳನ್ನು ನಡೆಸಿತು.

ಇನ್ನೊಂದೆಡೆ ಅಮೇರಿಕಾ ಕ್ಯೂಬಾದ ವಿರುದ್ಧ ಲ್ಸ್ ಬರ್ಟನ್ ಕಾಯಿದೆ ಮೂಲಕ ಮೂರನೇ ಶಗಳು ಕ್ಯೂಬಾದೊಂದಿಗೆ ಸಹಕರಿಸದಂತೆ ್ರಂಧನವನ್ನು ಇನ್ನಷ್ಟು ಬಿಗಿಗೊಳಿಸಿತು. ಸಂಕಷ್ಟದ ಈ ಅವಧಿಯನ್ನು ಎದುರಿಸಲು ್ಯೂಬಾ ಸರಕಾರ ಮತ್ತು ಕಮ್ಯೂನಿಸ್ಟ್ ಪಕ್ಷವು ಸವ ಅಣಿನೆರೆಸಿತು. ಕ್ಯೂಬಾ ಬಿಟ್ಟು ಅಮೇರಿಕಾಕ್ಕೆ ತೆರಳಿದವರಿಗೆ ಅಮೇರಿಕಾದ ನಾಗರೀಕರನ್ನಾಗಿ ಪರಿಗಣಿಸಲಾಗುವುದೆಂಬ ನೀತಿಯನ್ನು ಪ್ರಕಟಿಸಿದುದರಿಂದ ಹತ್ತಾರು ಸಾವಿರ ಜನರು ಅಮೇರಿಕಾಕ್ಕೆ ಹೋದರೂ ಕ್ಯೂಬಾವು ತನ್ನ ಆರ್ಥಿಕತೆಯನ್ನು ಪುನಶ್ಚೇತನಗೊಳಿಸಿಕೊಂಡು ಸವಾಲನ್ನೆದುರಿಸಿತು. ಇಷ್ಟೆಲ್ಲಾ ಸಮಸ್ಯೆಗಳು ಎದುರಾದರೂ ಶಿಕ್ಷಣ, ಆರೋಗ್ಯ, ರೇಷನ್ ಮೊದಲಾದ ಸಾಮಾಜಿಕ ಕಲ್ಯಾಣ ವ್ಯವಸ್ಥೆಗೆ ಯಾವುದೇ ಕುಂದು ಬಾರದಂತೆ ಕ್ಯೂಬಾ ಸರ್ಕಾರ ನೋಡಿಕೊಂಡಿತು.

ಸಮಾಜವಾದದ ಬಲ

ತನ್ನ ಆರ್ಥಿಕತೆಯನ್ನು ಸರಿದೂಗಿಸಲು ಮತ್ತು ಸಾಮ್ರಾಜ್ಯಶಾಹಿ ಕುಕೃತ್ಯಗಳನ್ನು ಹೋಗಲಾಡಿಸಲು ಹೋರಾಟ ಮಾಡುತ್ತಲೇ ಫಿಡೆಲ್ ಕ್ಯಾಸ್ಟ್ರೋ ನೇತೃತ್ವದ ಕ್ಯೂಬಾ, ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಮತ್ತು ಉದಾರೀಕರಣ ನೀತಿಗಳ ವಿರುದ್ಧ ವಿವಿಧ ಶಕ್ತಿಗಳನ್ನು ಅಣಿ ನೆರೆಸಲು ಮುಂದಾಳತ್ವ ವಹಿಸಿತು. ಈ ದಿಸೆಯಲ್ಲಿ ಲ್ಯಾಟಿನ್ ಅಮೇರಿಕಾ ದೇಶಗಳ ಜನರಿಗೆ ಸ್ಫೂರ್ತಿಯಾಯಿತು. ಈ ನಿಟ್ಟಿನಲ್ಲಿ ಬೊಲಿವಿಯಾ ಮತ್ತು ವೆನಿಜುವೆಲಾ ಕ್ಯೂಬಾದೊಂದಿಗೆ ಸೇರಿ 'ಬೊಲಿವಿಯಾ ಪರ್ಯಾಯ'ಕ್ಕಾಗಿ ಕೆಲಸ ಮಾಡುತ್ತಿದೆ. ಅಲ್ಲಿನ ಜನತೆಯು ನಿರಂತರ ಹೋರಾಟ ಮತ್ತು ಚಳುವಳಿಗಳಿಂದಾಗಿ ಹಲವಾರು ದೇಶಗಳಲ್ಲಿ ಪ್ರಗತಿಪರ ಸರಕಾರಗಳು ಅಸ್ತಿತ್ವಕ್ಕೆ ಬಂದಿವೆ.

ಇಂದು ಕ್ಯೂಬಾ ಏಕಾಂಗಿಯಲ್ಲ. ಫಿಡೆಲ್, ಚೆ ಮತ್ತು ಇತರೆ 81 ಕ್ರಾಂತಿಕಾರಿಗಳು ಗ್ರಾನ್ಮಾದಲ್ಲಿ ಸಂಚರಿಸಿ ಕ್ಯೂಬಾದಲ್ಲಿ ಇರಿಸಿದ ಹೆಜ್ಜೆ ಕ್ಯೂಬಾದಲ್ಲಿ ಮತ್ತು ಇತರೆ ಲ್ಯಾಟಿನ್ ಅಮೇರಿಕಾ ದೇಶಗಳಲ್ಲಿ ಇಂದಿಗೂ ಮುಂದು ವರೆಯುತ್ತಿದೆ.

ನಮ್ಮ ಸೌಹಾರ್ದ ಬೆಂಬಲ

ವಿಯೆಟ್ನಾಂ ವಿಮೋಚನಾ ಸಮರದ ನಂತರದ ದಿನಗಳಲ್ಲಿ ಭಾರತದ ಪ್ರಗತಿಪರ ಹಾಗೂ ಪ್ರಜಾಸತ್ತಾತ್ಮಕ ಜನತೆಗೆ ಕ್ಯೂಬಾವು ನಿರಂತರ ಸ್ಫೂರ್ತಿಯ ಸೆಲೆಯಾಗಿದೆ. ಸಾವಿರಾರು ಮೈಲಿಗಳ ದೂರದಲ್ಲಿದ್ದರೂ ಈ ಪುಟ್ಟ ದೇಶದ ಕ್ರಾಂತಿಕಾರಿ ಪರಿವರ್ತನೆಯ ಗಾಳಿ ಭಾರತಕ್ಕೂ ಬೀಸಿದೆ. ಕ್ಯೂಬಾವು ಸಂಕಷ್ಟ ದಲ್ಲಿದ್ದಾಗ ಕಾಮ್ರೇಡ್ ಹರ್‌ಕಿಶನ್ ಸಿಂಗ್ ಸುರ್ಜಿತ್ ಅವರ ನೇತೃತ್ವ ದಲ್ಲಿ ಒಂದು ಹಡಗಿನ ತುಂಬಾ ದವಸ ಧಾನ್ಯವನ್ನು ಸಂಗ್ರಹಿಸಿ ಕಳುಹಿಸ ಲಾಗಿತ್ತು.



ಕ್ಯೂಬಾದ ಕ್ರಾಂತಿಯ 50ನೇ ವರುಷದ ಆಚರಣೆಯ ಚಾರಿತ್ರಿಕ ಸಂದರ್ಭದಲ್ಲಿ ಕಾಮ್ರೇಡ್ ಫಿಡೆಲ್ ಕ್ಯಾಸ್ಟ್ರೋ ಮತ್ತು ಕ್ಯೂಬಾದ ಕಮ್ಯೂನಿಸ್ಟ್ ಪಕ್ಷಕ್ಕೆ ಸಿಪಿಐ(ಎಂ) ಹರುಷದ ಶುಭಾಷಯ ಗಳನ್ನು ಕಳುಹಿಸಬಯಸುತ್ತದೆ. ಕ್ಯೂಬಾ ಜನತೆಯ ಈ ಹರ್ಷದಾಯಕ ಆಚರಣೆಯಲ್ಲಿ ನಾವು ಸೇರಬಯಸುವುದು ಮಾತ್ರವಲ್ಲದೇ ಕ್ಯೂಬಾದ ಜನತೆಗೆ ಸಂಪೂರ್ಣ ಸೌಹಾರ್ದತೆಯನ್ನು ಪುನಃ ವ್ಯಕ್ತಪಡಿಸುತ್ತೇವೆ.

ಪುಟ 5 ರಿಂದ

ವಚನ ಚಳುವಳಿಯ ಕಂಪು ಹೊತ್ತ ಜಾಥಾ

ಬುದ್ಧ ಬಸವ ಅಂಬೇಡ್ಕರ್ ಏಸು ಮತ್ತಿತರ ಮಹಾತ್ಮರಿರುವ ಬ್ಯಾನರ್‌ನ್ನು ಕಿತ್ತು ಕಾಲಲ್ಲಿ ತುಳಿದರು. ವಾಹನದ ಕಟೌಟ್ ಹರಿದರು. ಕಲ್ಲು ತೂರಿದರು. ವಾಹನದ ಗ್ಲಾಸು ಜಖಂಗೊಂಡಿತು. ನಮ್ಮ ಸಂಗಾತಿಗಳು 'ಇನ್‌ಕ್ವಿಲಾಬ್ ಜಿಂದಾಬಾದ್' ಹೇಳಿದರು. ಭಾರತದ ಬಗ್ಗೆ ಏನೇನು ಪ್ರೇಮವಿಲ್ಲದ ದ್ವೇಷ ಸಂಸ್ಕೃತಿಯ ಶ್ರೀರಾಮಸೇನೆಯ ಗೂಂಡಾಗಳು 'ಭಾರತ್ ಮಾತಾಕಿ ಜೈ' ಎನ್ನುತ್ತಿದ್ದರು. ಹಗಲು ಸುಳ್ಳು ಮುಖವಾಡದ ಅವರು ಸ್ವಯಂ ಭಯೋತ್ಪಾದಕರೆಂಬುದು ಸಾಬೀತುಗೊಳಿಸಿದರು. ಸಂಘ ಗ್ಯಾಂಗಿನ ಗೂಂಡಾಗಿರಿಗೆ ರಾಜ್ಯಮಟ್ಟದ ಸಮಾವೇಶ ಖಂಡಿಸಿ ಧಿಕ್ಕಾರ ಹೇಳಿತು. ನಮ್ಮ ಸಂಗಾತಿಗಳು ವಿಚಲಿತರಾಗದೆ ಶಾಂತಿಯ ಬಾವುಟ ಹಿಡಿದು ಮುನ್ನಡೆದರು? ನನಗೆ ದೋಹಾ ನೆನಪಾಯ್ತು.

'ಹೋತಿ ಪಡ್ ಪಟಕಲ್ ಜಗ ಹೊವ್ವಾ
ಪಂಡಿತ ಭಯಾನಕೋಯಿ
ಥಾಯಿ ಅಕ್ಷರ ಪ್ರೇಮಕಾ
ಪಡೆಸೋ ಪಂಡಿತ ಹೋಯಿ'

ಎರಡುವರೆ ಅಕ್ಷರದ ಪ್ರೇಮವನರಿಯದವರು ದೇಶಪ್ರೇಮಿಗಳೂ ಅಲ್ಲ ಪಂಡಿತರೂ ಅಲ್ಲ. ನಾವು ಅದಮ್ಯ ಸಹನೆ ರೂಢಿಸಿಕೊಂಡಿದ್ದೆವು. ಗೌರವ ಸೂಚಕವಲ್ಲದ ಹಗುರ ಶಬ್ದಗಳನ್ನು ಸಹ ನಾವು ಬಳಸುತ್ತಿರಲಿಲ್ಲ. ಜನರ ಹೃದಯ ಮತ್ತು ಮೆದುಳಿಗೆ ಪ್ರವೇಶಿಸಲು ಮಾತ್ರ ಪ್ರಯತ್ನಿಸುತ್ತಿದ್ದೆವು. ಅವರ ಸಮಸ್ಯೆಗಳನ್ನು ಅರಿಯಲು ಹೆಣಗುತ್ತಿದ್ದೆವು.

ರಾಜ್ಯದುದ್ದಕ್ಕೂ ಜನರ ಹಕ್ಕೊತ್ತಾಯ ಒಂದೇ ಆಗಿತ್ತು. ಅದು ತುತ್ತಿನಚೀಲದ ಪ್ರಶ್ನೆ. ಘನತೆಯಿಂದ ಬದುಕುವ ಪ್ರಶ್ನೆ. ರೇಷನ್ ಕಾರ್ಡ್‌ಇಲ್ಲ, ಗ್ರಾಮಗಳಲ್ಲಿ ನಿರುದ್ಯೋಗ ತೊಡೆಯಲು ನಾವು ಬಡಿದಾಡಿ ಕಾಯ್ದೆಯಾಗಿಸಿದ ಉದ್ಯೋಗ ಖಾತ್ರಿ ರೇಗಾ ಜಾರಿ ಮಾಡುತ್ತಿಲ್ಲ. ಮನೆಯಲ್ಲಿ ನೀರಿಲ್ಲ ಕೆಲಸವಿಲ್ಲ. ಜಾತಿಯ ದಬ್ಬಾಳಿಕೆ.. ಇದು ಒಟ್ಟೂ ಜನರ ಸ್ಥಿತಿಯಾಗಿತ್ತು. ಅವರು ನಿಜದ ಪಕ್ಷವನ್ನು ಹುಡುಕುತ್ತಿದ್ದಾರೆ. ಪರ್ಯಾಯ ಕಟ್ಟಿಕೊಡುವ ಮಾನವೀಯ ಪರಂಪರೆಗಾಗಿ ತಹ ತಹಿಸುತ್ತಿದ್ದಾರೆ.

ಈಗಾಗಲೇ ಅವರ ನಡುವಿಗೆ ಬೆಸೆದ 'ಹಿಂದೂ ಮುಸ್ಲಿಂ ಸಿಖ್ ಇಸಾಯಿಯು ಭಾವೈಕ್ಯ ಬಳ್ಳಿಯಿಂದಾಗಿ ಕೊಂಚವಾದರೂ ನೆಮ್ಮದಿಯಿಂದರುವರು. ಎಷ್ಟೋ ಕಡೆ ದರ್ಗಾದ ಆಚರಣೆ ಪೂಜಾ ಪ್ರಕ್ರಿಯೆ ಹಿಂದೂಗಳೇ ನಡೆಸುತ್ತಾರೆ. ಹಿಂದೂಗಳ ಖಾಂಡಗಳಿಗೆ ಮುಸ್ಲಿಮರು ದೇಣಿಗೆ ಕೊಟ್ಟು ಭಾಗವಹಿಸುತ್ತಾರೆ. ಪರಸ್ಪರ ಕಷ್ಟ ಸುಖಗಳನ್ನು ಹಂಚಿಕೊಳ್ಳುತ್ತಾರೆ ಹಬ್ಬಗಳಲ್ಲಿ ಸಂಭ್ರಮಿಸುತ್ತಾರೆ. ದುಡಿವ ವರ್ಗದಲ್ಲಿಯೂ ಕೂಡಿ ಬಾಳುವ ಸಂಸ್ಕೃತಿ ಇನ್ನೂ ಗಟ್ಟಿಯಾಗಿದೆ. ಇದು ಕರ್ನಾಟಕದುದ್ದಕ್ಕೂ ನಾವು ನೋಡಿದ್ದೇವೆ. ಜನರಿಗೆ ಸಾರಾಯಿ ಕುಡಿದು ಹಣ ಪಡೆದು ಓಟು ಹಾಕುವ ಮನಸಿಲ್ಲ. ಆದರೆ ಪರ್ಯಾಯವಿಲ್ಲ. ಹೀಗಾಗಿ ಬೂರ್ಜ್ವಾ ಪಕ್ಷಗಳಿಗೆ ತಕ್ಕಂತೆ ವರ್ತಿಸುತ್ತಾರೆ. ಅಸಂಖ್ಯ ದುಡಿಯುವ ಜನ ಸಮುದಾಯವೇ ಈ ನಾಡ ರಕ್ಷಕರು.

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಡೆ
ವಿಷ ವೇರಿತ್ತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹಬಲ್ಲಡೆ
ಆತನೇ ಗಾರುಡಿಗ ಕಾಣಾ ರಾಮನಾಥ

ಬೆಂಗಳೂರಿನ ಸೆಂಟ್ರಲ್ ರೈಲ್ವೆ ನಿಲ್ದಾಣದಿಂದ ನಮ್ಮ ಮೆರವಣಿಗೆ ಶುರುವಾಯಿತು. ಪಕ್ಕದ ಪುಟ್ಟ ಗೋಡೆಯ ಮೇಲೆ ಮುಸ್ಲಿಂ ಬಂಧುವೊಬ್ಬರು ತಾಸುಗಟ್ಟಲೇ ನಮ್ಮ ಪಕ್ಷದ ಕೆಂಬಾವುಟ ಹಾರಾಡಿಸುತ ಹಿಂತೇ ಇದ್ದರು. ಅವರಿಗೆ ದಣಿವಿರಲಿಲ್ಲ. ಏಕೆಂದರೆ ಅವರಿಗೆ ಶಾಂತಿ ಸೌಹಾರ್ದತೆ ಬೇಕಿತ್ತು. ಪ್ರೇಮದ-ವಿಶ್ವಾಸದ ಹುಡುಕಾಟವಿತ್ತು. ಈ ಬಾರಿ ಕ್ರಿಶ್ಚಿಯನ್ ಮುಸ್ಲಿಂ ಬಾಂಧವರ ನಂಬಿಕೆಯ ನೋಟ ನಮ್ಮ ಬಾವುಟದಲ್ಲಿ ನೆಟ್ಟಿತ್ತು.

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣಿನ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆನು ನಿಮ್ಮೊಳಗೆ

ಬಾಂಬೆ ಘಟನೆಯ ತರುವಾಯ ಅಲ್ಪಸಂಖ್ಯಾತ ಮುಸ್ಲಿಮರ ಎದೆಯಲ್ಲಿ ಹುಟ್ಟಿದ ಕಣ್ಣಲ್ಲಿ ಕುಡಿಯೊಡೆದ ಭಯವನ್ನು ತೊಡೆಯಲು ಪ್ರೇಮ ಮತ್ತು ಸೌಹಾರ್ದತೆಯೊಂದೇ ನಮಗಿರುವ ಆಧಾರ.

ರಿಪಬ್ಲಿಕ್ ಕಾರ್ಮಿಕರ ಬ್ಯಾನರುಗಳ ಘೋಷಣೆಗಳು 'ಬ್ಯಾಂಕ್ ಆಫ್ ಅಮೆರಿಕಾ: ಬಗೆ ಬೇಲ್ ಸಿಕ್ಕಿತು, ಆದರೆ ನಾವು ಸೇಲ್ ರಿವು', ಮತ್ತು 'ಬ್ಯಾಂಕುಗಳಿಗೆ ಶತಕೋಟಿ ಲರು, ಕಾರ್ಮಿಕರಿಗೆ ಸೊನ್ನೆ ಡಾಲರು' ಶದಾದ್ಯಂತ ಮಾರ್ದನಿ ಪಡೆದವು. ಇದೆಲ್ಲದರ ಣಾಮವಾಗಿ ಒಂದು ವಾರದೊಳಗೆ ಬ್ಯಾಂಕುಗಳು ಣಿದು, ಎಲ್ಲಾ ಕಾರ್ಮಿಕರ ಎರಡು ತಿಂಗಳ ತನ, ಆರೋಗ್ಯ ಮುಂತಾದ ಇತರ ಸವಲತ್ತುಗಳು ದಂತೆ ಸುಮಾರು 17.5 ಲಕ್ಷ ಡಾಲರಗಳಷ್ಟು ಡಲು ಒಪ್ಪಿದವು. ಕಾರ್ಖಾನೆ ಪುನರಾರಂಭಿಸಿಲು ಲ ಕೊಡಲು ಒಪ್ಪಲಿಲ್ಲ ಎಂದು ಗಮನಿಸಬೇಕು. ್ಯಾಂಕುಗಳಿಗೆ ಬೇಲ್ ಔಟ್ ಕೊಟ್ಟಿರುವುದು ನ ಅಭಾವದಿಂದ ರಿಪಬ್ಲಿಕ್ ನಂತಹ ರ್ಖಾನೆಗಳು ಮುಚ್ಚಬಾರದು ಅಂತ. ಅದು ಶಃ ಇನ್ನೊಂದು ಹೋರಾಟದ ವಿಷಯ ವಸ್ತು.

ಅಮೆರಿಕದ ಜನತೆ 'ಬದಲಾವಣೆ'ಗೆ ಮತ ನೀಡಿ ಒಬಾಮಾ ಬದಲಾವಣೆ ತರುತ್ತಾರೆ ಅಂತ ಕಾಯುತ್ತಲೇ ಇದ್ದಾರೆ. ಒಬಾಮಾ 1930 ರ ದಶಕದಲ್ಲಿ ಮಹಾ ಕುಸಿತದಲ್ಲಿ ನಿರ್ಣಾಯಕ ಕ್ರಮ ಕೈಗೊಂಡ ರೂಸ್‌ವೆಲ್ಟ್ ರ ಹಾದಿ ಹಿಡಿಯುತ್ತಾರೆ ಎಂದು ಆಸೆ ಹೊತ್ತಿದ್ದಾರೆ. 1930 ರ ದಶಕದಲ್ಲಿ ಸಮರಶೀಲ ಕಾರ್ಮಿಕರ ಚಳುವಳಿಯ ಒತ್ತಡ ರೂಸ್‌ವೆಲ್ಟ್ ಆ ಹಾದಿ ಹಿಡಿಯಲು ಕಾರಣವಾಗಿತ್ತು. ಅಂತಹ ಒತ್ತಡ ಅಮೆರಿಕದ ಕಾರ್ಮಿಕರ ಚಳುವಳಿ ರೂಪಿಸದಿದ್ದರೆ ಒಬಾಮಾ ಏನೂ ಮಾಡಲು ಸಾಧ್ಯವಿಲ್ಲ. ಅಮೆರಿಕದ ಬಂಡವಾಳಶಾಹಿ ವರ್ಗ 1930 ರಲ್ಲಿ ಇದ್ದಕ್ಕಿಂತ ಇಂದು ಅತ್ಯಂತ ಪ್ರಬಲವಾಗಿದ್ದು, ಕಾರ್ಮಿಕರ ಚಳುವಳಿಯ ಒತ್ತಡ ಇಲ್ಲದೆ ಕಾರ್ಮಿಕರು ಮತ್ತು ಜನತೆ ಏನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ರಿಪಬ್ಲಿಕ್ ಕಾರ್ಮಿಕರ ಚಳುವಳಿ, ವಿಜಯ ಮತ್ತು ಅದನ್ನು ಸಾಧಿಸಿದ ರೀತಿ ಈ ಬಗ್ಗೆ ಆಶಾಭಾವನೆ ಮೂಡಿಸಿದೆ.



'ದಾಳಿಕೋರರಂಗೆ ಧರ್ಮವುಂಟೆ ?' ಎನ್ನುವ 'ಅರ್ಥ'

ಬಡತನ, ಅದರ ಅಸಹಾಯಕತೆ, ಆ ಸ್ಥಿತಿಯಲ್ಲೂ ಗಂಡಿನ ಅಹಂ, ಹೆಣ್ಣಿನ ಮೂಕವೇದನೆ, ದಿಕ್ಕುಕಾಣದ ಮಕ್ಕಳು, ಪರಿಸ್ಥಿತಿಯ ದುರ್ಲಾಭ ಪಡೆವ ಮತೀಯವಾದಿಗಳು - ದ್ವೇಷಾಸೂಯೆಯ ಬೀಜ ಬಿತ್ತಿ ಬೆಂಕಿ ಬೆಳೆಯುವ ಇಂತಹವರ ದ್ವೇಷಾಗ್ನಿಗೆ ಅಸಹಾಯಕರೇ ಬಲಿಯಾಗುವ ವಿಪರ್ಯಾಸದ ಕಥೆಯುಳ್ಳ ಚಿತ್ರ ಬಿ.ಸುರೇಶರ 'ಅರ್ಥ' ... ಗಮನ ಸೆಳೆದಿರುವುದು ಸುರೇಶರ ನೇರ ನಿರೂಪಣೆಯಿಂದ. ಪ್ರೇಕ್ಷಕರನ್ನು ... ಬೀಳಿಸದೆ, ಕಷ್ಟಪಟ್ಟು ಅರ್ಥ ಮಾಡಿಕೊಳ್ಳಬೇಕಾದ ಸ್ಥಿತಿಗೆ ನೂಕದೆ, ತೆರದ ಪುಸ್ತಕದಂತೆ ಇಲ್ಲಿ ಎಲ್ಲವೂ ನೇರಾನೇರ. ನಾವು ನೋಡಿದ, ನೋಡುತ್ತಿರುವ ಘಟನೆಗಳೇ ಕಣ್ಮುಂದೆ ಘಟಿಸುತ್ತಿರುವಂತೆ ಸಹಜ, ವಾಸ್ತವದ ಉತ್ತಮ ನಿರೂಪಣೆ ಈ ಚಿತ್ರ. ಅಂದಮಾತ್ರಕ್ಕೆ ಇಲ್ಲಿ ಮತೀಯವಾದಿಗಳು ಯಾರೆಂದು ನೇರವಾಗಿ ಯಾರನ್ನೂ ಅವರು ದೂಷಿಸುವುದಿಲ್ಲ. ಆದರೆ ಈ ದುಷ್ಟರು ಯಾರೆಂದು ಅರ್ಥ ಮಾಡಿಕೊಳ್ಳುವುದು ನೋಡುಗರಿಗೇನೂ ಕಷ್ಟವಾಗುವುದಿಲ್ಲ.

ಸೀನಪ್ಪ (ರಂಗಾಣಯ ರಘು) ಬಡ ಆಟೋ ಚಾಲಕ - ಅದೂ ಬಾಡಿಗೆ ಆಟೋ. ಅಬ್ದುಲ್ಲಾ ಅವನ ಆತ್ಮೀಯ ಮಿತ್ರ. ಇಬ್ಬರ ಮನೆಯಲ್ಲೂ ಕಡು ಬಡತನ. ಆದರೆ ಕಷ್ಟಸುಖಕ್ಕೆ ಒಬ್ಬರಿಗೊಬ್ಬರು ಸಮಭಾಗಿಗಳು. ದಿನದ ಬಾಡಿಗೆ ಸರಿಯಾಗಿ ಕಟ್ಟಲಾಗದೆ ಆಟೋವನ್ನು ಕಿತ್ತೊಯ್ಯುತ್ತಾನೆ ಅದರ ಮಾಲೀಕ. ಸೀನಪ್ಪ ಅಸಹಾಯಕ - ಅದರ ಪರಿಣಾಮ ಮನೆಯವರ ಮೇಲೆ.

ಸೀನಪ್ಪ ಸ್ವಭಾವದಲ್ಲಿ ಪಾಳೇಗಾರಿ ಮನೋಭಾವದವರ. ಹೆಂಡತಿ-ಮಕ್ಕಳೊಂದಿಗೆ ಸಲುಗೆಯಿಲ್ಲ. ಇವನನ್ನು ಕಂಡರೆ ಅವರಿಗೆಲ್ಲಾ ನಡುಕ. ಸಣ್ಣಪುಟ್ಟದ್ದಕ್ಕೆಲ್ಲಾ ಹೊಡೆತ-ಬಡಿತ. ಶಾಂತಿ ನೆಮ್ಮದಿಯಿಲ್ಲದ ಮನೆ ಅದು. ಹೆಂಡತಿ ಆಸೆ-ಆಕಾಂಕ್ಷೆಗಳು ನೂರಾರಿದ್ದರೂ ಗಂಡನ ಹಿಂಸೆಯಿಂದ ಹೈರಾಣದ ಜೀವ. ಮಗ ಶ್ರೀಕಾಂತ ಬುದ್ಧಿವಂತ, ಆದರೆ ಬಯಸಿದ ವಿದ್ಯಾಭ್ಯಾಸ ಮಾಡುವ ಸ್ಥಿತಿ ಮನೆಯಲ್ಲಿಲ್ಲ. ರೇಡಿಯೋ ರಿಪೇರಿ ಮಾಡುವ ಕೋರ್ಸ್ ಮಾಡುತ್ತಿರುತ್ತಾನೆ. ಇನ್ನೂ ಮಗಳು ಮನೆಯಲ್ಲಿನ ರಾದ್ಧಾಂತಗಳನ್ನು ದಿಗಿಲು ಕಣ್ಣುಗಳಿಂದ ನೋಡುವ ಪುಟ್ಟ ಹುಡುಗಿ - ಇದು ಸೀನಪ್ಪನ ಸಂಸಾರ.

ಜೀವನಕ್ಕೆ ಆಧಾರವಾಗಿದ್ದ ಆಟೋ ಕಳೆದುಕೊಂಡ ಸೀನಪ್ಪಗೆ ಗೆಳೆಯ ಅಬ್ದುಲ್ಲಾ ಮತ್ತು ರಾಣಿ(ತಾಯಿಯಿಂದಲೇ ದೇವರಿಗೆ ಬಿಟ್ಟ, ಮೈ ಮಾರಿಕೊಳ್ಳುವ ವೃತ್ತಿಗೆ ನೂಕಲ್ಪಟ್ಟ ಹೆಣ್ಣು) ಸಹಾಯ ಮಾಡುತ್ತಾರೆ. ಬ್ಯಾಂಕ್‌ನ ಸಾಲದ ಮೇಲೆ ಹೊಸ ಆಟೋ ಖರೀದಿಸುತ್ತಾನೆ. ಆಟೋ ಕೊಂಡ ಸಂಭ್ರಮದಲ್ಲಿರುವಾಗಲೇ ಅಲ್ಲಿಲ್ಲಿ ಮಕ್ಕಳು ಹಾದಿ ತಪ್ಪುತಿರುವ ಬಗ್ಗೆ, ಮಾದಕ ವ್ಯಸನಿಗಳಾಗುವ ಸುದ್ದಿ ಸೀನಪ್ಪನ ಕಿವಿಗೆ ಬೀಳುತ್ತದೆ. ಮಗನ ಗಮನಿಸುವುದಲ್ಲದೇ ಅಂತಹ ಹಾದಿ ತುಳಿಯದಂತೆ ಎಚ್ಚರಿಸುತ್ತಾನೆ. ಆದರೆ ಮಗ ಬೇರೆಯೇ ದಾರಿ ಹಿಡಿದಿರುತ್ತಾನೆ. ಮನೆಯ ದಾರಿದ್ರ್ಯ-ರಾದ್ಧಾಂತಗಳಿಂದ



ಬೇಸತ್ತ ಮಗ ಶ್ರೀಕಾಂತ ಸಮಯ ಕಳೆಯಲು ಮನೆ ಮುಂದೆಯ ನಡೆಯುವ 'ಸಂಘ'ದ ಚಟುವಟಿಕೆಗಳತ್ತ ಆಕರ್ಷಿತನಾಗುತ್ತಾನೆ.

'ಏನೋ ಆಗುತ್ತಿದ್ದಾನೆ'

ವಾರದ ರಜೆಯನ್ನು ಮಗನೊಂದಿಗೆ ಕಳೆಯಲು ನಿರ್ಧರಿಸಿ ಸೀನಪ್ಪ ಶ್ರೀಕಾಂತನನ್ನು ಊರು ಸುತ್ತಲು ಕರೆದೊಯ್ಯುತ್ತಾನೆ. ಅಲ್ಲಿ ಮಗ ದೇಶ, ಧರ್ಮ, ಸಂಸತಿ, ಭಾರತ ಮಾತೆಯ ಬಗ್ಗೆ ಮಾತನಾಡುವುದನ್ನು ಕಂಡು ಚಕಿತನಾಗುತ್ತಾನೆ. ಅದಾವುದೂ ಅವನಿಗೆ ಅರ್ಥವಾಗದಿದ್ದರೂ ಮಗ ಏನೋ ಆಗುತ್ತಿದ್ದಾನೆಂದು ಸಂಭ್ರಮಿಸುತ್ತಾನೆ. ಮತ್ತದನ್ನು ತನ್ನ ಸ್ನೇಹಿತ ಅಬ್ದುಲ್ಲಾ ಮತ್ತಿತರರಲ್ಲಿ ಹೇಳಿಕೊಂಡು ಖುಷಿ ಪಡುತ್ತಾನೆ. ಒಮ್ಮೆ ಮಗ ಭಾಗವಹಿಸಿದ್ದ ಸಭೆಗೂ ಸೀನಪ್ಪ ಹೋಗುತ್ತಾನೆ. ಅಲ್ಲಿ ತನ್ನ ಆಟೋ ಕಿತ್ತೊಯ್ದ ಮಾಲೀಕ ಭಾಷಣ ಮಾಡುತ್ತಿರುತ್ತಾನೆ. ಮಗನನ್ನು ಆಚೆ ಕರೆದು ನಾಜೂಕಾಗಿರುವ ಇವರು ನಯವಂಚಕರು, ಇವರ ಮಾತನ್ನು ನಂಬಬೇಡವೆಂದು ಬುದ್ಧಿಹೇಳಿದರೂ ಮಗ ಅದನ್ನು ಧಿಕ್ಕರಿಸುತ್ತಾನೆ.

ಬೇರೆಲ್ಲೋ ರೈಲಿಗೆ ಬೆಂಕಿ ಹಚ್ಚಿ ಒಂದು ಕೋಮಿನವರನ್ನು ಹತ್ಯೆ ಮಾಡಲಾಗಿದೆಯೆಂಬ ಕಾರಣಕ್ಕೆ ಈ ಊರಿನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ. ಅದರ ನೇತೃತ್ವ ಸೀನಪ್ಪನ ಮಗ ಶ್ರೀಕಾಂತನದ್ದೇ. ತನ್ನ ಮಗನ ಮುಂದಾಳತ್ವವನ್ನು ನೋಡಲು ಬಯಸುವ ಸೀನಪ್ಪ ಜೊತೆಗೆ ಅಬ್ದುಲ್ಲಾನ್ನು ಕರೆದೊಯ್ಯುತ್ತಾನೆ. ಇದೇ ಸಂದರ್ಭದಲ್ಲಿ ಇನ್ನೊಂದು ಕೋಮಿನವರೂ ಪ್ರತಿಭಟನೆ ಹಮ್ಮಿಕೊಳ್ಳುತ್ತಾರೆ. ಕೊನೆಗೆ ಕ್ಷುಲ್ಲಕ ಕಾರಣಕ್ಕೆ ಎರಡೂ ಕೋಮಿನವರು ಬಡಿದಾಟಕ್ಕಿಳಿಯುತ್ತಾರೆ. ಸೀನಪ್ಪ ಮತ್ತು ಅಬ್ದುಲ್ಲಾ ಈ ದಾಳಿಕೋರರ ಮಧ್ಯೆ ಸಿಲುಕಿಕೊಳ್ಳುತ್ತಾರೆ. ಸೀನಪ್ಪನ ಮಗ ಶ್ರೀಕಾಂತ ಅಪ್ಪನ ಎದುರೇ ಅಬ್ದುಲ್ಲಾನನ್ನು ಕೊಚ್ಚಿಹಾಕುತ್ತಾನೆ. ಸ್ನೇಹಿತನ ಹತ್ಯೆಯನ್ನು ತಡೆಯಲು ಬಂದ ತಂದೆಯನ್ನೇ ಕಾಲಿನಲ್ಲಿ ಒದ್ದು ದೂಡುತ್ತಾನೆ. ಮಗ ಏನೋ ಆಗುವನೆಂದು ಸಂಭ್ರಮಿಸಿದ್ದ ಸೀನಪ್ಪ ದಿಗ್ಭ್ರಾಂತನಾಗುತ್ತಾನೆ.

ಪ್ರಾಣಸ್ನೇಹಿತನನ್ನು ಉಳಿಸಿಕೊಳ್ಳಲು ಆತನನ್ನು ಆಸ್ಪತ್ರೆಗೆ ಹೊತ್ತೊಯ್ಯುತ್ತಾನೆ. ಆದರೆ ಸಿಬ್ಬಂದಿ ಗಲಭೆಯೆದ್ದಿರುವ ಭಯದಿಂದ ಬಾಗಿಲು ತೆರೆಯಲು ನಿರಾಕರಿಸುತ್ತಾನೆ. ಸೀನಪ್ಪ ಹತಾಶ ಸ್ಥಿತಿಯಲ್ಲಿರುವಾಗಲೇ ಆತನ ಮಗನೂ ಹಲ್ಲೆಗೀಡಾಗಿ ಆತನನ್ನು ಆಸ್ಪತ್ರೆಗೆ ಹೊತ್ತು ತರುತ್ತಾರೆ. ... ತೆರೆಯ ದಿರುವ ಬಗ್ಗೆ ಹೇಳಿದಾಗ 'ಸಂಘ'ದ ಮಂದಿ ಬೆದರಿಕೆಯೊಡ್ಡಿ ಬಾಗಿಲು ತೆರೆಸಿ ಚಿಕಿತ್ಸೆ ಕೊಡಿಸಲು ಮುಂದಾಗುತ್ತಾರೆ. ಆಗಲೂ ಅಬ್ದುಲ್ಲಾನಿಗೆ ಚಿಕಿತ್ಸೆ ಕೊಡಲು ನಿರಾಕರಿಸಿ ಆಸ್ಪತ್ರೆಯ ಮೂಲೆಯಲ್ಲಿ ಜಾಗ ತೋರಿಸುತ್ತಾರೆ.

ಅಂತಿಮವಾಗಿ ಅಬ್ದುಲ್ಲಾ ಮತ್ತು ಶ್ರೀಕಾಂತ ಇಬ್ಬರೂ ಸಾಯುತ್ತಾರೆ. ಮಗನ ಅಂತ್ಯಕ್ರಿಯೆಗೆ 'ಸಂಘ'ದವರು ಸೀನಪ್ಪನ್ನು ಕರೆಯುತ್ತಾರೆ, ಆದರೆ ಮಗನಿಗಾಗಿ ಅನೇಕರಿದ್ದಾರೆ, ತನ್ನ ಸ್ನೇಹಿತನಿಗೆ ಯಾರೂ ದಿಕ್ಕಿಲ್ಲವೆಂದು ಅಬ್ದುಲ್ಲನ ಅಂತ್ಯಕ್ರಿಯೆಗಾಗಿ ತನ್ನ ಆಟೋದಲ್ಲೇ ಆತನನ್ನು ಹೊತ್ತೊಯ್ಯುತ್ತಾನೆ. ದಾರಿ ಮಧ್ಯದಲ್ಲಿ ಆಟೋವನ್ನು ತಡೆಯುವ 'ಸಂಘ'ದವರು ತಮ್ಮ ನಾಯಕ ಅಂದರೆ ಶ್ರೀಕಾಂತನ ಶವ ಸಾಗಿ ಹೋಗುವವರೆಗೆ ಬೇರೆ ಯಾರನ್ನೂ ಬಿಡುವುದಿಲ್ಲವೆನ್ನುತ್ತಾರೆ. ಆಟೋದಲ್ಲಿರುವುದು ಇನ್ನೊಂದು ಕೋಮಿನ ಶವವೆಂದು ತಿಳಿದ ತಕ್ಷಣ ದಾಳಿಗಿಳಿಯುವ ಅವರು ಸೀನಪ್ಪ ಪ್ರತಿರೋಧದ ನಡುವೆಯೂ ಆಟೋಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚುತ್ತಾರೆ.

ಒಂದೆಡೆ ಮಗನ ಶವದ ಮುಂದೆ ಜೈಕಾರ ಹಾಕುತ್ತಾ 'ಶ್ರೀಕಾಂತ ಚಿರಾಯುವಾಗಲಿ' ಎಂದು ಘೋಷಿಸುತ್ತಾ ನಡೆದರೆ ಮತ್ತೊಂದೆಡೆ ತನ್ನ ಪ್ರಾಣಮಿತ್ರ ದಹದಹಿಸುತ್ತಾ



ಚಿತ್ರ ನಿರ್ದೇಶಕ ಬಿ.ಸುರೇಶ್

ಸುಟ್ಟು ಕರಕಲಾಗುವುದನ್ನು ಸೀನಪ್ಪ ಅಸಹಾಯಕ... ನೋಡುತ್ತಾ ನಿಲ್ಲುತ್ತಾನೆ. ಅಲ್ಲಮಪ್ರಭು... 'ದಾಳಿಕೋರಂಗೆ ಧರ್ಮವುಂಟೆ' ವಚನದೊಂದಿಗೆ ಮುಕ್ತಾಯವಾಗುತ್ತದೆ.

ಯಾವುದೇ ಉಪಮೆ, ಸಂಕೇತಗಳನ್ನು ಬಳ... ಮನಮಿಡಿಯುವ ನಿರೂಪಣೆ ಸಹೃದಯ... ಮನಸ್ಸಿನಾಳಕ್ಕಿಳಿದು ಕಾಡುತ್ತದೆ. ಕೋಮುವಾದ... ಇಂತದ್ದೇ ಆಟಾಟೋಪಗಳು ಕಣ್ಮುಂದೆ ಸುಳಿಯು... - ಇಂತಹ ಕೋಮುವಾದಿಗಳ ಮುಂದೆ ಶಾಂತಿ... ಸಾಮಾನ್ಯ ನಾಗರಿಕರ ಅಸಹಾಯಕತೆಗೆ ಕನ್ನಡಿ ಹಿ... ಹಾಗಿದೆ ಈ ಚಿತ್ರ.

ಸಾಮಾನ್ಯರ ಆಶಯ, ಬಯಕೆ ಮ... ಆಕ್ರೋಶಗಳನ್ನು ಒಬ್ಬ ಹುಚ್ಚ(ನಾಗೇಂದ್ರ ಷಾ)ನ ಪಾ... ಮೂಲಕ ಹೊರಹಾಕುವ ಪ್ರಯತ್ನ ಗಮನಾ... ಮತ್ತೊಂದು ವಿಶೇಷವೆಂದರೆ ವಚನಗಳ ಬ... ಸಂದರ್ಭಕ್ಕನುಗುಣವಾಗಿ ಬಹಳ ಪರಿಣಾಮ... ಯಾಗಿ ವಚನಗಳನ್ನು ಬಿ.ಸುರೇಶ್ ಬಳಸಿಕೊಂಡಿದ...

ಸೀನಪ್ಪನಾಗಿ ರಂಗಾಯಣದ ರಘುರವ... ಅಮೋಘ ಅಭಿನಯ. ಅಸಹಾಯಕ ಹೆ... ಮೇಘನಾ ನಾಡಿಗೇರ್ ಮತ್ತು ಇ... ಪಾತ್ರಧಾರಿಗಳದ್ದೂ ಹದವರಿತ ಅಭಿನಯ.

ಸ್ನೇಹ ಸಮೂಹ ನಿರ್ಮಾಣದ ಈ ಚಿ... ಹಂಸಲೇಖ ಹಿನ್ನಲೆ ಸಂಗೀತ ಒದಗಿಸಿರುವ... ಗಮನಾರ್ಹ.

ಕಥೆ-ಚಿತ್ರಕಥೆ-ಸಂಭಾಷಣೆ ಒ... ನಿರ್ದೇಶಿಸಿರುವ ಬಿ.ಸುರೇಶ್‌ರ ಒಂದು ಅಭಿನಂ... ಪ್ರಯತ್ನಕ್ಕೆ ಪೂರಕ ಫಲಿತಾಂಶ ದೊರಕದಿರು... ವಿಪರ್ಯಾಸ. ಇಂತಹ ಚಿತ್ರಗಳಿಗೆ ಥಿಯೇ... ಸಿಗದೆ, ಹೆಚ್ಚು ಜನರಿಗೆ ನೋಡ... ಅವಕಾಶವಾಗದಂತಹ ಪರಿಸ್ಥಿತಿಯನ್ನು ನಿರ್ಮಾ... ಮಾಡಿದೆ ನಮ್ಮ ಕನ್ನಡ ಚಿತ್ರೋದ್ಯಮ. ಹಿ... ಆಸಕ್ತರು ಸಿ.ಡಿ.ಮೂಲಕ ಅಥವಾ ದೂರದರ್ಶನ... ಪ್ರಸಾರವಾದಾಗ ಸಿನಿಮಾನವನ್ನು ನೋಡಬೇಕಾ...

ಮಾಧ್ಯಮಗಳ ಮತಾಂಧತೆ

ಸಾವು ಬದುಕಿನ ನಡುವೆ ಸೆಣಸುತ್ತಿದ್ದ ಅಬ್ದುಲ್ಲಾನನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಸೀನ... ಇದ್ದಾಗ ಮಗನೂ ಹಲ್ಲೆಗೀಡಾಗಿ ಆಸ್ಪತ್ರೆ ಸೇರುತ್ತಾನೆ. ಮಾಧ್ಯಮಗಳಲ್ಲಿ ಶ್ರೀಕಾಂತನು ಹಲ್ಲೆಗೀಡಾದ... ಪ್ರಸಾರವಾಗಿ ರಾಣಿ ಶ್ರೀಕಾಂತನನ್ನು ನೋಡಲು ಆಸ್ಪತ್ರೆಗೆ ಧಾವಿಸುತ್ತಾಳೆ. ಆಗ ಸೀನಪ್ಪ ನನ್ನ ಅಬ್ದು...ನ ಬಗ್ಗೆ ಏನು ಬರಲಿಲ್ಲವೇ ಎಂದು ಆಕೆಯನ್ನು ಪ್ರಶ್ನಿಸುತ್ತಾರೆ. ಮೊದಲಿಗೆ ಏಟು ತಿಂದವ... ಅಬ್ದುಲ್ಲನಾದರೂ ಆತನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವಾಗಲೂ ಕಡೆಗಣಿಸಲ್ಪಡುತ್ತಾನೆ ಮ... ಮಾಧ್ಯಮಗಳೂ ಶ್ರೀಕಾಂತನಿಗೆ ಪ್ರಾಶಸ್ತ್ಯ ನೀಡುವುದನ್ನು ಇಂದಿನ ಮಾಧ್ಯಮಗಳ ಮತಾಂಧತೆಯ... ಸೂಕ್ಷ್ಮವಾಗಿ ಬಿಂಬಿಸಿದ್ದಾರೆ ಸುರೇಶ್.

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R Nagar, BANGALORE-560027 Published by G.N.NAGARAJ, No 12, 18th Cross, S.R Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12, 18th Cross, S.R Nagar, BANGALORE - 560 027 Karnataka (State) and Published at BANGALORE No 12, 18th Cross, S.R Nagar, BANGALORE-560027 Editor S.Y.GURUSHANTH